ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಡಿಸೆಂಬರ್ 22 ಗುರುವಾರ 2022

ಸಂಪುಟ: 43 | ಸಂಚಿಕೆ: 245 | ಪುಟಗಳು: 12 | ₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

FOND REMEMBRANCE



Bananda .S. Shambhu
Retired District & Sessions Judge
DOB : 16 / 04 / 1934 - DOD : 22 / 12 / 2007
In fond memory
Wife Smt. B. S. Leelavathi, Mysore.
Daughters, Son & Family Members.

ಮೈಸೂರು ಮಿತ್ರ

ನೆಕ್ಸಸ್ ಸೆಂಟರ್ ಸಿಟಿ ಮಾಲ್ ಸಂತೋಷದಾಯಕ ಚಟುವಟಿಕೆಗಳೊಂದಿಗೆ ಕ್ರಿಸ್ಮಸ್ ಹಬ್ಬ ಆಚರಣೆ



ಮೈಸೂರು, ಡಿ. 21– ಹಬ್ಬಗಳ ಋತುವನ್ನು ಅತ್ಯಂತ ಶ್ರೇಷ್ಠವಾಗಿಸಲು ನೆಕ್ಸಸ್ ಸೆಂಟರ್ ಸಿಟಿ ಮಾಲ್ ಸಜ್ಜಾಗಿದೆ. ಈ ವರ್ಷದ ವೈಶಿಷ್ಟ್ಯವೇನೆಂದರೆ ಆಕರ್ಷಕ ದೀಪಾಲಂಕಾರ ನೋಡಲು ಅತ್ಯದ್ಭುತ ದೃಶ್ಯಾವಳಿಗಳನ್ನು ಅನುಭವಿಸುವುದರ ಜೊತೆಗೆ, ಮಾಲ್‌ನಲ್ಲಿ ಹಲವಾರು ಉಲ್ಲಾಸದಾಯಕ ಮೋಜಿನ ಚಟುವಟಿಕೆಗಳನ್ನು ಸಹ ಹೊಂದಿದೆ. ಡಿ.23ರಿಂದ ಮಾಲ್‌ಗೆ ಭೇಟಿ ನೀಡುವ ಪ್ರತಿಯೊಬ್ಬರಿಗೂ ಏನನ್ನಾದರೂ ನೀಡುವ ಯೋಜನೆ ಮಾಡಿದೆ.

ಗ್ರಾಹಕರಿಗೆ ಆಕರ್ಷಕ ಕ್ರಿಸ್ಮಸ್ ಅನುಭವ ಖಾತ್ರಿಪಡಿಸುವ ಉದ್ದೇಶವಿಟ್ಟುಕೊಂಡಿರುವ ನೆಕ್ಸಸ್ ಸೆಂಟರ್ ಸಿಟಿ ಮಾಲ್ ಇದೇ ಡಿ.24 ಮತ್ತು 25ರಂದು ಸಂತಾಕ್ಲಾಸ್ ಪ್ರದರ್ಶನದೊಂದಿಗೆ ಚರಿತ್ರಾರ್ಹ ಕ್ರಿಸ್‌ಮಸ್ ವಾರವನ್ನು ನಿಮಗಾಗಿ ಸಾದರಪಡಿಸಲಿದೆ. ಇಲ್ಲಿ ಹಲವಾರು ಅಂತರರಾಷ್ಟ್ರೀಯ ಪ್ರದರ್ಶಕರು ಸಂತಾಕ್ಲಾಸ್ ಅವರಂತೆ ಉಡುಗೆ ಧರಿಸಿ ಅನಿಯಮಿತ ಸಂತೋಷಭರಿತ ಚಟುವಟಿಕೆಗಳೊಂದಿಗೆ ಗ್ರಾಹಕರನ್ನು ರಂಜಿಸುತ್ತಾರೆ. ಮತ್ತು ಮಕ್ಕಳಿಗೆ ಚಾಕಲೇಟ್ ವಿತರಣೆ ಮಾಡಲಿದ್ದಾರೆ. ಋತುವನ್ನು ಸಂಭ್ರಮಿಸಲು 23–25 ಡಿಸೆಂಬರ್ ಮಧ್ಯಾಹ್ನ 3ರಿಂದ ರಾತ್ರಿ 8ರವರೆಗೆ ಉತ್ಸಾಹಭರಿತ ಚಟುವಟಿಕೆಗಳಾದ ರೋಲಿಂಗ್ ಮತ್ತು ಬೌನ್ಸಿಂಗ್, ವಿಂಟರ್ ಬಬಲ್ ಶೋ, ಟಾಲ್ ಕ್ಯಾಂಡಿ ಕೇನ್, ಟಾಲ್ ಟಾಯ್ ಸೋಲ್ಡರ್ ಮತ್ತು ಕೊನೆಯದಾಗಿ ಮಾಲ್‌ನಲ್ಲಿ ಮೋಜಿನ ಹಾಸ್ಯಗಾರನಂತಹ ವಿವಿಧ ವಿಶಿಷ್ಟ ಅಂಶಗಳನ್ನು ಸಹ ಆಯೋಜಿಸಿದೆ. ಈ ಕ್ರಿಯಾತ್ಮಕ ಪೂರ್ಣಕಾಲಿಕ ಕಾರ್ಯಕ್ರಮಗಳು ಮಾಲ್‌ಗೆ ಭೇಟಿ ನೀಡುವ ಪ್ರತಿಯೊಬ್ಬರಿಗೂ ಸಂತೋಷದ ಅನುಭವ ನೀಡುತ್ತದೆ.

ಅಪರಾಧ ತಡೆ ಮಾಸಾಚರಣೆ: ಪೊಲೀಸರು, ವಿದ್ಯಾರ್ಥಿಗಳಿಂದ ಜನ ಜಾಗೃತಿ ಜಾಥಾ

ಯುವಕರು, ಪೋಷಕರಿಗೆ ನಿಯಮಗಳ ಪಾಲಿಸಿ, ಜಾಗರೂಕರಾಗಿರಲು ತಿಳಿಸಿ: ನಗರ ಪೊಲೀಸ್ ಆಯುಕ್ತ ಬಿ.ರಮೇಶ್



ಮೈಸೂರಿನ ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅಪರಾಧ ತಡೆ ಕುರಿತ ಜನ ಜಾಗೃತಿ ಜಾಥಾಗೆ ಬುಧವಾರ ಚಾಲನೆ ನೀಡಿದರು.

ಮೈಸೂರು,ಡಿ.21(ಆರ್‌ಕೆಬಿ)– ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಮೈಸೂರು ನಗರ ಪೊಲೀಸರು ನೂರಾರು ಕಾಲೇಜು ವಿದ್ಯಾರ್ಥಿಗಳೊಂದಿಗೆ ಮೈಸೂರು ನಗರದಲ್ಲಿ ಅಪರಾಧ ತಡೆ ಕುರಿತ ಜನ ಜಾಗೃತಿ ಜಾಥಾ ನಡೆಸಿದರು.

ಜಾಥಾದಲ್ಲಿ ಮೈಸೂರಿನ ಸದ್ವಿದ್ಯಾ ಪಿಯು ಕಾಲೇಜು, ಮಹಾರಾಣಿ ಪಿಯು ಕಾಲೇಜು, ವಾಣಿವಿಲಾಸ ಪಿಯು ಕಾಲೇಜು, ರಾಜೀವ್‌ನಗರ ಸೆಂಟ್ ಜೋಸೆಫ್ ಪಿಯು ಕಾಲೇಜು ಸೇರಿದಂತೆ ವಿವಿಧ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರಿನ ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಜಾಥಾಗೆ ಚಾಲನೆ ನೀಡಿದರು. ಇದೇ ವೇಳೆ ಅವರು ಸಾರ್ವಜನಿಕರಿಗೆ ಅಪರಾಧ ತಿಳುವಳಿಕೆ ಮೂಡಿಸುವ ಕರಪತ್ರಗಳನ್ನು ಬಿಡುಗಡೆ ಮಾಡಿದರು.

ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ಹೊರಟ ಜಾಥಾ ಕೆ.ಆರ್.ವೃತ್ತ, ನ್ಯೂ ಸಯ್ಯಾಜಿ ರಾವ್ ರಸ್ತೆ, ಇರ್ವಿನ್ ರಸ್ತೆ, ರವೆ ಬೀದಿ ಮೂಲಕ ಮತ್ತೆ ಆರಂಭ ಸ್ಥಳಕ್ಕೆ ವಾಪಸಾಯಿತು. ಜಾಥಾದಲ್ಲಿ ವಿದ್ಯಾರ್ಥಿಗಳು ಅಪರಾಧ ತಡೆ ಕುರಿತ ಸಂದೇಶಗಳಿರುವ ಘೋಷಣಾ ಫಲಕಗಳನ್ನು ಹಿಡಿದಿದ್ದರು.

ಜಾಥಾ ಉದ್ಘಾಟನೆ ಮಾಡಿದ ಬಳಿಕ ಮಾತನಾಡಿದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ವಿದ್ಯಾರ್ಥಿಗಳು, ಯುವಕರು ತಮ್ಮ ಪೋಷಕರಿಗೆ ಮತ್ತು ಸಂಬಂಧಿಕರಿಗೆ ನಿಯಮಗಳನ್ನು ಪಾಲಿಸಲು ಮತ್ತು ಜಾಗರೂಕರಾಗಿರಲು ತಿಳಿಸುವ ಮೂಲಕ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಡಿಸಿಪಿ (ಅಪರಾಧ ಮತ್ತು ಸಂಚಾರ) ಎಂ.ಎಸ್.ಗೀತಾ ಪ್ರಸನ್ನ, ನಗರ ಸಶಸ್ತ್ರ ಮೀಸಲು ಡಿಸಿಪಿ ಶಿವರಾಜ್, ಮೌಂಟೆಡ್ ಪೊಲೀಸ್ ಡಿಸಿಪಿ ನಾಗರಾಜ್, ದೇವರಾಜ ಉಪ ವಿಭಾಗದ ಎಸಿಪಿ ಶಶಿಧರ್, ಎನ್.ಆರ್. ಉಪವಿಭಾಗದ ಎಸಿಪಿ ಶಿವಶಂಕರ್, ಕೆ.ಆರ್ ಎಸಿಪಿ ಗಂಗಾಧರಸ್ವಾಮಿ, ಅರಮನೆ ಎಸಿಪಿ ಚಂದ್ರಶೇಖರ್, ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್‌ಗಳು ಮತ್ತು ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು.

ಅಪರಾಧ ತಡೆಗೆ ಸಾರ್ವಜನಿಕ ತಿಳುವಳಿಕೆ

● ಮನೆಯನ್ನು ದೀರ್ಘಕಾಲ ಬೀಗ ಹಾಕಿ ಹೋಗುವಾಗ ನಿಮ್ಮ ನೆರೆ ಹೊರೆಯವರಿಗೆ, ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಿ, ಹಣ, ಒಡವೆಗಳನ್ನು ಮನೆಯಲ್ಲಿಡದೆ ಬ್ಯಾಂಕ್ ಲಾಕರ್‌ನಲ್ಲಿರಿಸಬೇಕು. ● ಬೇರೆ ರಾಜ್ಯದವರಿಗೆ, ವಿದೇಶಿಯರಿಗೆ, ಅಪರಿಚಿತರಿಗೆ ಮನೆಯನ್ನು ಬಾಡಿಗೆಗೆ ನೀಡಿದರೆ ಪೊಲೀಸರಿಗೆ ವಿವರವಾದ ಮಾಹಿತಿ ನೀಡಬೇಕು. ಅಪರಿಚಿತ ವ್ಯಕ್ತಿಗಳು ತಮ್ಮ ಮನೆ ಹಾಗೂ ಅಕ್ಕಪಕ್ಕದ ಮನೆಗಳ ಬಳಿ ಬಂದು ಹೋಗುವವರ ಬಗ್ಗೆ ನಿಗಾ ಇಡಬೇಕು. ಮನೆ ಹಾಗೂ ವಾಣಿಜ್ಯ ಕೇಂದ್ರಗಳ ಹೊರ ಭಾಗದಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು. ● ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಪ್ರಯಾಣ ಮಾಡುವಾಗ ಹಣ, ಮೊಬೈಲ್, ಬೆಲೆಬಾಳುವ ವಸ್ತುಗಳ ಬಗ್ಗೆ ಜಾಗ್ರತೆ ವಹಿಸಬೇಕು. ● ಚಿನ್ನ ಬೆಳ್ಳಿ ಪಾಲಿಷ್ ಮಾಡಿ ಕೊಡುತ್ತೇವೆಂದು ಬರುವವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು. ಬೀದಿ ದೀಪಗಳು ಸುಸ್ಥಿತಿಯಲ್ಲಿ ಇಲ್ಲದಿದ್ದರೆ ಕಾರ್ಪೊರೇಷನ್‌ನವರಿಗೆ ಮಾಹಿತಿ ನೀಡಬೇಕು. ವಾಹನಗಳನ್ನು ಪಾರ್ಕ್ ಮಾಡುವಾಗ ಹ್ಯಾಂಡ್, ಸ್ಟೇರಿಂಗ್ ಲಾಕ್ ಕಡ್ಡಾಯವಾಗಿ ಹಾಕುವುದು. ● ಎಟಿಎಂನಿಂದ ಹಣ ತೆಗೆಯುವ ಸಮಯದಲ್ಲಿ ವಂಚಕರಿಂದ ಜಾಗೃತವಾಗಿರಬೇಕು. ಅಕೌಂಟ್, ಎಟಿಎಂ, ಪಾನ್ ಕಾರ್ಡ್, ಒಟಿಪಿ ಮತ್ತು ಯಾವುದೇ ತರಹದ ಪಾಸ್‌ವರ್ಡ್‌ಗಳನ್ನು ಫೋನಿನಲ್ಲಾಗಲೀ, ನೇರವಾಗಿಯಾಗಲೀ ಯಾರಿಗೂ ನೀಡಬಾರದು. ● ವಾಹನಗಳಲ್ಲಿ ಅಮೂಲ್ಯವಾದ ವಸ್ತುಗಳನ್ನು ಇರಿಸಿ, ನಿರ್ಜನ ಪ್ರದೇಶಕ್ಕೆ ವಾಕಿಂಗ್‌ಗೆ ಮತ್ತು ಇತರೆ ಕಾರ್ಯಗಳಿಗೆ ಹೋಗಬಾರದು. ● ಸೋಷಿಯಲ್ ಮೀಡಿಯಾ ಅಥವಾ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಲ್ಲಿ ತಮ್ಮ ಖಾಸಗಿ ಮಾಹಿತಿ ಹಂಚಿಕೊಳ್ಳಬಾರದು. ಸೈಬರ್ ಅಪರಾಧ/ಅಪರಾಧಿಗಳಿಂದ ಜಾಗೃತವಾಗಿರಬೇಕು. ಇದಕ್ಕಾಗಿ ಉಚಿತ ಕರೆ ಸಂಖ್ಯೆ 1930 ಸಂಪರ್ಕಿಸಬೇಕು. ● ಸಾರ್ವಜನಿಕ ಸ್ಥಳಗಳಾದ ಬಸ್ ಸ್ಟ್ಯಾಂಡ್, ರೈಲ್ವೆ ಸ್ಟೇಷನ್, ಶಾಪಿಂಗ್ ಮಾಲ್ ಇನ್ನಿತರೆ ಸ್ಥಳಗಳಲ್ಲಿ ಮಕ್ಕಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ● ಮನೆಯಲ್ಲಿರುವ ವಯೋವೃದ್ಧರು ಮತ್ತು ಬುದ್ಧಿಮಾಂದ್ಯರು ಮನೆಯಿಂದ ಹೊರಗಡೆ ಹೋದಾಗ ಹೆಚ್ಚಿನ ನಿಗಾ ವಹಿಸಬೇಕು. ● ಶಾಲಾ ಕಾಲೇಜುಗಳ ಸುತ್ತಮುತ್ತ ಮಾದಕ ವಸ್ತುಗಳ ಮಾರಾಟ ಹಾಗೂ ಅದರ ಜಾಲಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು. ಯುವಜನರು ಮಾದಕ ವಸ್ತುಗಳಿಂದ ದೂರವಿರಬೇಕು. ಉಚಿತ ಕರೆಗಾಗಿ 1908 ಸಂಪರ್ಕಿಸಬೇಕು. ● ಮನೆಯಲ್ಲಿ ಮಕ್ಕಳು ಅನಗತ್ಯವಾಗಿ ಮೊಬೈಲ್, ಟಿವಿ, ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸದಂತೆ ನೋಡಿಕೊಳ್ಳಬೇಕು. ಮಕ್ಕಳ ಮೇಲಿನ ದೌರ್ಜನ್ಯ ಕಾನೂನು ಬಾಹಿರ. ಉಚಿತ ಕರೆಗೆ 1098ಗೆ ಸಂಪರ್ಕಿಸಬೇಕು. ● ಯಾವುದೇ ತರಹದ ಅಪರಾಧ ಮತ್ತು ತುರ್ತು ಪರಿಸ್ಥಿತಿಯಲ್ಲಿ 112ಗೆ ಕರೆ ಮಾಡಬೇಕು.

ಇಂದು, ನಾಳೆ ಸಂತ ಫಿಲೋಮಿನಾ ಕಾಲೇಜಿನ ಅಮೃತ ಮಹೋತ್ಸವ ಸಮಾರೋಪ



ಮೈಸೂರು,ಡಿ.21(ಪಿಎಂ)– ಮೈಸೂರು ಡಯೋಸಿಸನ್ (ಧರ್ಮಪ್ರಾಂತ್ಯ) ಎಜುಕೇಷನಲ್ ಸೊಸೈಟಿಯ ಸಂತ ಫಿಲೋಮಿನಾ ಕಾಲೇಜಿನ ಅಮೃತ ಮಹೋತ್ಸವದ ಸಮಾರೋಪ ಸಮಾರಂಭ ಡಿ.22 ಮತ್ತು 23ರಂದು ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ರವಿ ಜೆ.ಡಿ.ಸಲ್ಡಾನ್ಹಾ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಡಿ.15ರಂದು ಕಾಲೇಜಿನ ಅಮೃತ ಮಹೋತ್ಸವದ ವರ್ಷ ಪೂರ್ತಿ ಆಚರಣೆಗೆ ಚಾಲನೆ ನೀಡಲಾಗಿತ್ತು. ಅಂತೆಯೇ ವರ್ಷ ಕಾಲ ವಿವಿಧ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಯಿತು. 1946ರ ಜು.9ರಂದು ಕಾಲೇಜು ಕಾರ್ಯಾರಂಭ ಮಾಡಿತು. ಕಳೆದ ವರ್ಷ ಕೋವಿಡ್ ಕಾರಣಕ್ಕೆ ಡಿಸೆಂಬರ್‌ನಲ್ಲಿ ಅಮೃತ ಮಹೋತ್ಸವ ಆಚರಿಸಬೇಕಾಯಿತು ಎಂದರು.

ಡಿ.21ರಂದು ಸಂಜೆ 5ಕ್ಕೆ ಕಾಲೇಜಿನಲ್ಲಿ ಕ್ರಿಸ್ಮಸ್ ಹಾಗೂ ಅಮೃತ ಮಹೋತ್ಸವ ಸಮಾರೋಪದ ಪ್ರಯುಕ್ತ ಕಾಲೇಜಿನ ಸಿಬ್ಬಂದಿ ವರ್ಗದ ಸಂತೋಷಕೂಟ ಏರ್ಪಡಿಸಲಾಗಿದೆ. ಇದೇ ವೇಳೆ ಕಾಲೇಜಿನ ನಿವೃತ್ತ ಪ್ರಾಂಶುಪಾಲರನ್ನು ಸನ್ಮಾನಿಸಲಾಗುವುದು. ಡಿ.22ರಂದು ಕಾಲೇಜಿನ ಫುಟ್‌ಬಾಲ್ ಮೈದಾನದಲ್ಲಿ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಫಿಲೋಸ್ ಕಾರ್ನಿವಲ್ ಏರ್ಪಡಿಸಿದ್ದು, ಇದರಲ್ಲಿ ಕಾಲೇಜು ವಿದ್ಯಾರ್ಥಿಗಳು, ಅಧ್ಯಾಪಕರು ಸೇರಿ ವಿವಿಧ ತಿಂಡಿ ತಿನಿಸು ಮಳಿಗೆಗಳನ್ನು ತೆರೆಯಲಿದ್ದಾರೆ. ಅಲ್ಲದೆ, ಕಾಲೇಜು ಮೈದಾನದಲ್ಲಿ ಅಂದು ಸಂಜೆ 6ರಿಂದ ರಾತ್ರಿ 9ರವರೆಗೆ ಖ್ಯಾತ ಹಿನ್ನೆಲೆ ಗಾಯಕರಿಂದ ಸಂಗೀತ ರಸಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 100 ರೂ. ಟಿಕೆಟ್ ಖರೀದಿಸಿ ಸಾರ್ವಜನಿಕರು ಈ ಎರಡೂ ಕಾರ್ಯಕ್ರಮಗಳಿಗೆ ಪ್ರವೇಶ ಪಡೆಯಬಹುದು ಎಂದು ಹೇಳಿದರು.

ಡಿ.23ರಂದು ಬೆಳಗ್ಗೆ 9ಕ್ಕೆ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಕಾಲೇಜಿನ ಮುಖ್ಯಸ್ಥರೂ ಆದ ಮೈಸೂರು ಬಿಷಪ್ ರೆ.ಡಾ.ಕೆ.ಎಂ.ವಿಲಿಯಂ ದೇವರಿಗೆ ಕೃತಜ್ಞತಾ ಬಲಿಪೂಜೆ ನಡೆಸಿಕೊಡಲಿದ್ದಾರೆ. ಅಂದು ಸಂಜೆ 5ಕ್ಕೆ ಕಾಲೇಜಿನ ಮೈದಾನದಲ್ಲಿ ಅಮೃತ ಮಹೋತ್ಸವ ಸಮಾರೋಪ ಸಮಾರಂಭದ ಮುಖ್ಯ ಕಾರ್ಯಕ್ರಮ ನಡೆಯಲಿದ್ದು, ಇದೇ ವೇಳೆ ಕಾಲೇಜಿನ ಸಂಸ್ಥಾಪಕರೂ ಆದ ಮೈಸೂರು ಧರ್ಮಪ್ರಾಂತ್ಯದ ಮೊದಲ ಬಿಷಪ್ ರೆ.ಡಾ.ರೆನೇ ಫ್ಯೂಗ ಅವರ ಪ್ರತಿಮೆ ಅನಾವರಣ ಮಾಡಲಾಗುವುದು ಎಂದರು.

ಮೈಸೂರು ಬಿಷಪ್ ಡಾ.ಕೆ.ಎಂ. ವಿಲಿಯಂ ಅಮೃತ ಮಹೋತ್ಸವ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್ ಸೇರಿದಂತೆ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಕಾಲೇಜಿನ ವ್ಯವಸ್ಥಾಪಕ ರೆ.ಡಾ.ಬರ್ನಾಡ್ ಪ್ರಕಾಶ್ ಬರ್ನಿಸ್, ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ.ಎ.ಟಿ.ಸಾಡೆಬೋಸ್, ಪ್ರೊ.ರೋನಾಲ್ಡ್ ಪ್ರಕಾಶ್ ಕುಟೀನಾ, ಪ್ರೊ.ಎಂ.ನಾಗರಾಜ ಅರಸ್ ಸುದ್ದಿಗೋಷ್ಠಿಯಲ್ಲಿದ್ದರು.

ಕ್ರೆಡಲ್ ಅಧಿಕಾರಿ ಡಿ.ಕೆ.ದಿನೇಶ್‌ಕುಮಾರ್ ನಿಗೂಢ ಸಾವು ಪ್ರಕರಣ ತ್ವರಿತ ತನಿಖೆ ಮೂಲಕ ಸತ್ಯಾಂಶ ತಿಳಿಸಿ



ಪೊಲೀಸ್ ಆಯುಕ್ತರಲ್ಲಿ ರೋಟರಿ ಸದಸ್ಯರ ಮನವಿ

ಮೈಸೂರು,ಡಿ.21(ಪಿಎಂ)–ಕ್ರೆಡಲ್ ಅಧಿಕಾರಿ ಡಿ.ಕೆ.ದಿನೇಶ್‌ಕುಮಾರ್ ನಿಗೂಢ ಸಾವು ಸಂಬಂಧ ತ್ವರಿತಗತಿಯಲ್ಲಿ ತನಿಖೆ ನಡೆಸಿ, ಸತ್ಯಾಂಶವನ್ನು ಸಮಾಜಕ್ಕೆ ತಿಳಿಸಬೇಕೆಂದು ನಗರ ಪೊಲೀಸ್ ಆಯುಕ್ತರಲ್ಲಿ ರೋಟರಿ ವೆಸ್ಟ್ ಮೈಸೂರು ಮಾಜಿ ಅಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನೇಶ್‌ಕುಮಾರ್ ಅವರ ಸಾವು ಬೆಳಕಿಗೆ ಬಂದು 20ಕ್ಕೂ ಹೆಚ್ಚು ದಿನಗಳೇ ಕಳೆದಿವೆ. ನ.26ರ ಶನಿವಾರ ದಿನೇಶ್‌ಕುಮಾರ್ ಅವರು ಮೈಸೂರಿನ ರೋಟರಿ ಸಂಸ್ಥೆಗಳು ಸೇರಿದಂತೆ ವಿವಿಧೆಡೆಗೆ ಭೇಟಿ ನೀಡಿ, ಅಂದು ರಾತ್ರಿ ಸುಮಾರು 9.30ಕ್ಕೆ ಮನೆಗೆ ತಲುಪಿದ್ದರು. ದಿನೇಶ್‌ಕುಮಾರ್ ಅವರನ್ನು ಅಂದೇ ಕೊನೆ ನಾವು ನೋಡಿದ್ದು ಎಂದು ನೊಂದು ನುಡಿದರು.

ನ.28ರಂದು ಸೋಮವಾರ ಪೊಲೀಸರ ಮೂಲಕ ದಿನೇಶ್‌ಕುಮಾರ್ ಅವರು ನಿಧನದ ಸುದ್ದಿ ತಿಳಿಯಿತು. ಇದನ್ನು ಕೇಳಿ ನಮಗೆ ಆಘಾತವಾಯಿತು. ಮಾರ್ಗಮಧ್ಯೆ ಮೃತಪಟ್ಟಿದ್ದಾರೆ ಎಂದು ಘೋಷಿಸಿ ಆಸ್ಪತ್ರೆಯವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಆಸ್ಪತ್ರೆಗೆ ಹೋಗಿ ಅವರ ಮೃಹದೇಹ ನೋಡಿದೆವು. ತುಂಬ ಕೆಟ್ಟ ಸ್ಥಿತಿಯಲ್ಲಿತ್ತು. ಇದನ್ನು ನೋಡಿದ ವೈದ್ಯರು, ಅವರು ಮೃತಪಟ್ಟು 36 ಗಂಟೆಗಳು ಕಳೆದಿರಬೇಕು ಎಂದು ಊಹಿಸಿದರು. ಇಡೀ ಆಸ್ಪತ್ರೆಯಲ್ಲಿದ್ದವರೆಲ್ಲಾ ಮೂಗು ಮುಚ್ಚಿಕೊಳ್ಳುವಷ್ಟು ಮೃತದೇಹ ದುರ್ವಾಸನೆ ಬೀರುತ್ತಿತ್ತು ಎಂದರು.

ರಾತ್ರಿ ಊಟ ಮಾಡಿ ಮಲಗಿದ್ದ ಅವರು ಬೆಳಗ್ಗೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಇದನ್ನು ನೋಡಿ ನಾವು ಮೂರ್ಛೆ ಹೋದೆವು ಎಂದು ದಿನೇಶ್‌ಕುಮಾರ್ ಪತ್ನಿ ಪೊಲೀಸರಲ್ಲಿ ಹೇಳಿಕೆ ನೀಡಿದ್ದಾರೆ. ನಮಗೆ ಯಾರ ಮೇಲೂ ಸಂಶಯ ಇಲ್ಲ. ನಮಗೆ ನಮ್ಮ ಸ್ನೇಹಿತನ ಸಾವು ಸಹಜವೋ ಅಥವಾ ಅಸಹಜವೋ ಎಂಬ ಸತ್ಯ ಹೊರಬರಬೇಕಷ್ಟೇ ಎಂದರು.

ರೋಟರಿ ನಾರ್ತ್ ಮಾಜಿ ಕಾರ್ಯದರ್ಶಿ ಯಶವಂತ್‌ಕುಮಾರ್ ಮಾತನಾಡಿ, ಮೂರು ದಿನಗಳವರೆಗೆ ಕಾದು ನೋಡುತ್ತೇವೆ. ಆದಾಗ್ಯೂ ತನಿಖೆಯಲ್ಲಿ ಯಾವುದೇ ಬೆಳವಣಿಗೆ ಆಗದಿದ್ದರೆ ಗೃಹ ಸಚಿವರನ್ನು ಭೇಟಿ ಮಾಡಿ ತ್ವರಿತ ತನಿಖೆಗೆ ಮನವಿ ಸಲ್ಲಿಸಲಿದ್ದೇವೆ ಎಂದು ಹೇಳಿದರು. ರೋಟರಿ ಹೆರಿಟೇಜ್ ಮೈಸೂರು ಮಾಜಿ ಅಧ್ಯಕ್ಷ ಡಾ.ಶಿವರುದ್ರಪ್ಪ, ರೋಟರಿ ನಾರ್ತ್ ಅಧ್ಯಕ್ಷ ಜಗದೀಶ್ ಗೋಷ್ಠಿಯಲ್ಲಿದ್ದರು.



ಮೈಸೂರು ತಾಲೂಕಿನ ಹುಯಿಲಾಳು ಮತ್ತು ಚಿಕ್ಕ ಹುಯಿಲಾಳು ಗ್ರಾಮದಲ್ಲಿ ರಸ್ತೆ ಮತ್ತು ಒಳಚರಂಡಿ ಅಭಿವೃದ್ಧಿ ಕಾಮಗಾರಿಗೆ ಬುಧವಾರ ಶಾಸಕ ಜಿ.ಟಿ.ದೇವೇಗೌಡರು ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ, ಬೆಳವಾಡಿ ಶಿವಮೂರ್ತಿ, ತಾಪಂ ಮಾಜಿ ಸದಸ್ಯ ಹುಯಿಲಾಳು ಮಹದೇವು, ಹುಯಿಲಾಳು ರಾಮಸ್ವಾಮಿ, ಗ್ರಾಪಂ ಸದಸ್ಯರಾದ ಶ್ರೀಧರ್, ಗೌರಮ್ಮ ಮಾಲೇಗೌಡ, ಮಮತ, ಶೃತಿ, ಮಲ್ಲಯ್ಯ, ಟೈಲರ್ ರಾಜಣ್ಣ, ಕೋಟೆಹುಂಡಿ ಮಹದೇವು, ರಮೇಶ್, ಕುಮಾರ್, ಶಿವಣ್ಣ ಹಾಗೂ ಗ್ರಾಮದ ಯಜಮಾನರು, ಮುಖಂಡರು ಉಪಸ್ಥಿತರಿದ್ದರು.

ಜ.8, ಪ್ರತಿಭಾ ಪುರಸ್ಕಾರ, ಕ್ಯಾಲೆಂಡರ್ ಬಿಡುಗಡೆ



ಮೈಸೂರು,ಡಿ.21(ಪಿಎಂ)– ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ 2023ರ ಜ.8ರಂದು ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಗಣ್ಯರಿಗೆ ಅಭಿನಂದನೆ ಮತ್ತು 2023ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎನ್.ಸಿ.ಉಮೇಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ಬಾರಿಯೂ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಸಮುದಾಯದ ವಿದ್ಯಾರ್ಥಿಗಳಿಗೆ ಗೌರವಧನ ಮತ್ತು ಸ್ಮರಣಿಕೆಯೊಂದಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು. ಅಂದು ಬೆಳಗ್ಗೆ 11ಕ್ಕೆ ಮೈಸೂರಿನ ಪುರಭವನದಲ್ಲಿ ಸಮಾರಂಭ ನಡೆಯಲಿದೆ. 3 ತಿಂಗಳ ಹಿಂದೆಯೇ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿತ್ತು. ಜಿಲ್ಲೆಯ ವಿವಿಧ ಭಾಗಗಳಿಂದ 150 ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಪೈಕಿ 100 ಮಂದಿ ಆಯ್ಕೆ ಮಾಡಲಾಗಿದೆ. ಸಮುದಾಯದ ಜನಪ್ರತಿನಿಧಿಗಳು ಹಾಗೂ ಗಣ್ಯರನ್ನು ಇದೇ ಸಮಾರಂಭದಲ್ಲಿ ಸನ್ಮಾನಿಸಲಾಗುವುದು. ಈ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸೇರಿದಂತೆ ಶಾಸಕರು, ನಿಗಮ–ಮಂಡಳಿ ಅಧ್ಯಕ್ಷರು, ಹಲವು ಗಣ್ಯರು ಅತಿಥಿಗಳಾಗಿ ಆಗಮಿಸಲಿದ್ದಾರೆಂದು ಹೇಳಿದರು. ಸಂಘದ ಉಪಾಧ್ಯಕ್ಷ ವಿ.ಕೃಷ್ಣಶೆಟ್ಟಿ, ಕಾರ್ಯದರ್ಶಿ ಎನ್.ಟಿ.ಶ್ರೀನಿವಾಸ, ಖಜಾಂಚಿ ಕೆ.ಹೇಮಂತ್‌ಕುಮಾರ್ ಮತ್ತಿತರರು ಗೋಷ್ಠಿಯಲ್ಲಿದ್ದರು.



ವಿಧಾನಪರಿಷತ್ ಸಭಾಪತಿಯಾಗಿ ಆಯ್ಕೆಯಾದ ಬಸವರಾಜ ಹೊರಟ್ಟಿ ಅವರನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿನಂದಿಸಿದರು.

ನೇಮಕ



ಮೈಸೂರು: ಜೆಡಿಎಸ್‌ನ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಇಲಿಯಾಸ್ ಬೇಗ್ ಅವರನ್ನು ನೇಮಕ ಮಾಡಲಾಗಿದೆ.



ನೂತನ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಗಂಗಾಧರ್ ಸನ್ಮಾನಿಸಿದರು. ಈ ವೇಳೆ ತೇಜೇಶ್ ಲೋಕೇಶ್ ಗೌಡ ಇನ್ನಿತರರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಮೈಸೂರು,ಡಿ.21–ನಗರದ ಗೋಕುಲಂ 2ನೇ ಮೇನ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ನಗರಪಾಲಿಕೆ ವಾರ್ಡ್ ನಂ.19ರ ಸದಸ್ಯೆ ಭಾಗ್ಯ ಮಹದೇಶ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 19ನೇ ವಾರ್ಡಿನ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದು, ಅನುದಾನ ಮಂಜೂರು ಮಾಡಿಸಲಾಗಿದೆ ಎಂದರು. ಬಳಿಕ ಏರ್ಪಡಿಸಿದ್ದ ಜನ ಸಂಪರ್ಕ ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆ ಹಾಗೂ ಸಮಸ್ಯೆಗಳನ್ನು ಆಲಿಸಿ, ಬಹುತೇಕ ಎಲ್ಲ ಬೀದಿಗಳಲ್ಲಿ ಕಾಂಕ್ರಿಟ್ ರಸ್ತೆ ಹಾಗೂ ಚರಂಡಿ ಕಾಮಗಾರಿಗಳು ಭರದಿಂದ ನಡೆಯುತ್ತಿವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮೊಹಲ್ಲಾ ಮುಖಂಡ ಪುಟ್ಟು, ಇಂಜಿನಿಯರ್ ರಾಮಣ್ಣ ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.

ಚಾ.ಬೆಟ್ಟಕ್ಕೆ ಸಾಂಪ್ರದಾಯಿಕ ವಸ್ತ್ರಸಂಹಿತೆ ಕಡ್ಡಾಯಕ್ಕೆ ಆಗ್ರಹ



ಮೈಸೂರು,ಡಿ.21(ಪಿಎಂ)– ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವವರಿಗೆ ಮೈತುಂಬ ಬಟ್ಟೆ ಇರುವಂತೆ ಸಾಂಪ್ರದಾಯಿಕ ವಸ್ತ್ರ ಸಂಹಿತೆ ಕಡ್ಡಾಯಗೊಳಿಸಬೇಕು ಎಂದು ಸರ್ವ ಅರ್ಜತೆ ಫೌಂಡೇಷನ್ ಸರ್ಕಾರವನ್ನು ಆಗ್ರಹಿಸಿದೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಷನ್ ಸಂಸ್ಥಾಪಕಿ ಆರ್.ಪದ್ಮಾ, ತಾಯಿ ಚಾಮುಂಡೇಶ್ವರಿ ನೆಲೆಸಿರುವ ಚಾಮುಂಡಿಬೆಟ್ಟಕ್ಕೆ ನಿತ್ಯ 2 ಸಾವಿರಕ್ಕೂ ಹೆಚ್ಚು ಭಕ್ತರು, ಪ್ರವಾಸಿಗರು ಭೇಟಿ ನೀಡಲಿದ್ದಾರೆ. ಅಲ್ಲದೆ, ಈ ಸಂಖ್ಯೆ ವಾರಾಂತ್ಯದಲ್ಲಿ 5 ಸಾವಿರವನ್ನೂ ಮೀರಲಿದೆ. ಆದರೆ ಇಲ್ಲಿಗೆ ಭೇಟಿ ನೀಡುವವರಲ್ಲಿ ಕೆಲವರು ಧರಿಸುವ ಉಡುಗೆ ತೊಡುಗೆಗಳು ಮುಜುಗರ ಉಂಟು ಮಾಡಲಿವೆ ಎಂದರು.

ಮುಜುಗರ ತರುವಂತಹ ಉಡುಗೆ ಧರಿಸಿ ಬರುವುದು ಚಾಮುಂಡೇಶ್ವರಿಯ ಪವಿತ್ರ ಕ್ಷೇತ್ರಕ್ಕೆ ಅಗೌರವ ತೋರಿದಂತೆ ಆಗಲಿದೆ. ಹಾಗಾಗಿ ಬೆಟ್ಟಕ್ಕೆ ಭೇಟಿ ನೀಡುವವರಿಗೆ ನಿರ್ದಿಷ್ಟ ವಸ್ತ್ರಸಂಹಿತೆ ಜಾರಿಗೊಳಿಸಬೇಕು. ಈ ಸಂಬಂಧ ಸರ್ಕಾರಕ್ಕೂ ಫೌಂಡೇಷನ್‌ನಿಂದ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು. ಮುಖಂಡರಾದ ಜನಾರ್ಧನ್, ನಾಗಭೂಷಣ್, ಸುಮಿತ್ರಾ ರಮೇಶ್, ಪದ್ಮಾ ಸುರೇಶ್ ಸುದ್ದಿಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.12.2022 ಗುರುವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನೆ, ವಾರ್ಷಿಕ ಕುಂಭಾಭಿಷೇಕ ನೂತನ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಪ್ರಮತಿ ಹಿಲ್‌ವ್ಯೂ ಅಕಾಡೆಮಿ :** ಪ್ರಮತಿ ಉತ್ಸವ, ಬೆಳಗ್ಗೆ 9.30ಕ್ಕೆ ಉದ್ಘಾಟನೆ : ವಿದುಷಿ ಹೆಚ್.ಆರ್. ಲೀಲಾವತಿ, ಸಂಜೆ 4.30ಕ್ಕೆ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ಉಪಸ್ಥಿತರು : ಶಾಲೆಯ ಅಧ್ಯಕ್ಷರಾದ ಭವಾನಿ ಶಂಕರ್, ಕಾರ್ಯದರ್ಶಿ ಹೆಚ್.ವಿ. ರಾಜೀವ್, ಖಜಾಂಚಿ ಎಸ್. ಫಣಿರಾಜ್, ಪ್ರಾಂಶುಪಾಲ ಸಿ.ಎಸ್. ಸುದರ್ಶನ, ಕಾಲೇಜು ಪ್ರಾಂಶುಪಾಲ ಸುನಿಲ್ ದಯಾಕರ್, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 4.30ಕ್ಕೆ.

■ **ಎಬಿನೇಜರ್ ಚಾರಿಟೆಬಲ್ ಟ್ರಸ್ಟ್ :** ಉಚಿತ ಆರೋಗ್ಯ ತಪಾಸಣೆ ಶಿಬಿರ, ಅಧ್ಯಕ್ಷತೆ : ಪಾಲಿಕೆ ಸದಸ್ಯೆ ಶಾಂತಮ್ಮ ವಡಿವೇಲು, ಸ್ಥಳ: ಟ್ರಸ್ಟ್ ಆವರಣ, ಕ್ರಿಶ್ಚಿಯನ್ ಕಾಲೋನಿ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ :** ಮಾನಸಧಾರ ಫೆಸ್ಟ್, ಅಂತರ ಪ್ರೌಢಶಾಲಾ ಚರ್ಚೆ ಮತ್ತು ಶಾಸ್ತ್ರೀಯ ದ್ವಂದ್ವ ನೃತ್ಯ ಸ್ಪರ್ಧೆ, ಉದ್ಘಾಟನೆ : ಪ್ರಾದೇಶಿಕ ಶಿಕ್ಷಣ ಸಂಸ್ಥೆ ಪ್ರಿನ್ಸಿಪಾಲ್ ಯಜ್ಞಮೂರ್ತಿ ಶ್ರೀಕಾಂತ್, ಸ್ಥಳ: ಶಾಲೆ ಆವರಣ, ಜೆ.ಪಿ.ನಗರ, ಬೆಳಗ್ಗೆ 10ಕ್ಕೆ.

■ **ಹಾರ್ಡ್ವಿಕ್ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ರಾಷ್ಟ್ರೀಯ ಗಣಿತ ದಿನಾಚರಣೆ, ಅಧ್ಯಕ್ಷತೆ : ಮುಖ್ಯ ಶಿಕ್ಷಕ ಗುರುಭಕ್ತಯ್ಯ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಪ್ರಧಾನ ಭಾಷಣ : ಸಂಖ್ಯಾಶಾಸ್ತ್ರಜ್ಞ ಎಸ್.ಜಿ. ಸೀತಾರಾಂ, ಸ್ಥಳ: ಹಾರ್ಡ್ವಿಕ್ ಪ್ರೌಢಶಾಲೆ ಆವರಣ, ಮಧ್ಯಾಹ್ನ 12ಕ್ಕೆ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಬೆಳಗ್ಗೆಯಿಂದ ಮಹಾಗಣಪತಿ ಪೂಜೆ, ಉಷಾಪೂಜೆ, ಪಂಚಗವ್ಯಂ, ಪಂಚಕಂ, ಕಲಶಪೂಜೆ, ಶಿವೇಲಿ, ವಾದ್ಯಂ, ಕಲಶಾಭಿಷೇಕ, ಉದಯಾಸ್ಥಮಾನ ಪೂಜೆ, ದೀಪಾರಾಧನೆ, ಅತ್ತಾಳಪೂಜೆ, ಶ್ರೀ ಭೂತ ಬಲಿ ವಿಳಕ್ಕು, ಹಲವು ವಿಶೇಷ ಪೂಜಾ ಕೈಂಕರ್ಯ, ಮಧ್ಯಾಹ್ನ 12.30 ರಿಂದ ಅನ್ನಸಂತರ್ಪಣೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ –ನಿತಿನ್ ರಾಜಾರಾಂ ಶಾಸ್ತ್ರಿ, ಸದಾಶಿವ ಪಾಟೀಲ್, ವ್ಯಾಖ್ಯಾನ– ಡಾ.ಮ.ರಾಮಕೃಷ್ಣ, 8.30ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ಶ್ರೀರಾಂ ಭಟ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು, 4.00 ಜನಪದ ಸಂಗೀತ–ಸಣ್ಣಮ್ಮ ಮತ್ತು ತಂಡ, 4.30 ಕನ್ನಡ ಭಾರತಿ, ಕಥಾವಿಹಾರ–ಅದೀಬ್ ಅಖ್ತರ್ ಅವರಿಂದ ಸಣ್ಣಕಥೆ, ಕಾವ್ಯಧಾರೆ–ಅನಿಲ್‌ಕುಮಾರ್ ಹೆಚ್.ಎಸ್ ಅವರಿಂದ ಸ್ವರಚಿತ ಕವನಗಳ ವಾಚನ, 6.50 ಕೃಷಿರಂಗ–ಕಿಸಾನ್‌ವಾಣಿ, 8.00 ಯುವವಾಣಿ

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ಹೆಬ್ಬಾರ್ ಶ್ರೀ ವೈಷ್ಣವ ಗ್ರಾಮಾಂತರ ಉಪಸಭೆ :** ಧನುರ್ಮಾಸದ ಪ್ರಯುಕ್ತ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ಶ್ರೀ ಆಂಡಾಳ್ ವಿರಚಿತ 'ತಿರುಪ್ಪಾವೈ' ಪ್ರವಚನ, ಸ್ಥಳ: ಮಂದಿರದ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ.


■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಮೈಸೂರು ವಿವಿ ಪ್ರಾಣಿಶಾಸ್ತ್ರ ವಿಭಾಗದ ಅಧ್ಯಕ್ಷೆ ಡಾ. ಸುತ್ತೂರ್ ಎಸ್. ಮಾಲಿನಿ ಅವರಿಂದ ಆರೋಗ್ಯದ ಮೇಲೆ ಪರಿಸರದ ಪರಿಣಾಮ ಕುರಿತು ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಗೌರವ ಅತಿಥಿಗಳು : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮಾಜಿ ಅಧ್ಯಕ್ಷ ಎಂ. ಚಿನ್ನಸ್ವಾಮಿ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಪಡುವಾರಹಳ್ಳಿ ವಿಶ್ವೇಶ್ವರಯ್ಯ ಕನ್ನಡ ಸ್ನೇಹಿತರ ಸಂಘ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಗ್ರಾಮದ ಶ್ರಮಿಕ ನಿವಾಸಿಗಳಿಗೆ ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ಬಿಜೆಪಿ ಮುಖಂಡ ಜಯಪ್ರಕಾಶ್‌ಗೌಡ, ಕಾಂಗ್ರೆಸ್ ಮುಖಂಡ ಕವೀಶ್‌ಗೌಡ, ವಿಶ್ವೇಶ್ವರಯ್ಯ ಕನ್ನಡ ಸ್ನೇಹಿತರ ಸಂಘದ ಅಧ್ಯಕ್ಷ ಪೈ. ನಾಗರಾಜು, ಸ್ಥಳ: 4ನೇ ಮುಖ್ಯ ರಸ್ತೆ, ಪಡುವಾರಹಳ್ಳಿ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್‌ರವರ ಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನ ಸಭಾ :** ತಿರುಪ್ಪಾವೈ ಕಾಲಕ್ಷೇಪ, ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ, ಸ್ಥಳ: ಶ್ರೀ ರಾಮಮಂದಿರ, ಶ್ರೀ ಕೃಷ್ಣಮೂರ್ತಿಪುರಂ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ, ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಾಯಿಬಾಬಾ ಮಂದಿರ ಸಮೀಪ, ಸಂಜೆ 6.30ರಿಂದ.


ಭಾರತೀಯ ಜನತಾ ಪಾರ್ಟಿ
ವರುಣಾ ವಿಧಾನ ಸಭಾ ಕ್ಷೇತ್ರ
ನಾಡದೇವತೆ ತಾಯಿ ಚಾಮುಂಡೇಶ್ವರಿಯು ಇವರಿಗೆ ಆಯಸ್ಸು, ಆರೋಗ್ಯ,
ಸಿರಿ-ಸಂಪತ್ತು ರಾಜಕೀಯ ಉನ್ನತ ಅಧಿಕಾರ ಲಭಿಸಲಿ ಎಂದು ಹಾರೈಸುತ್ತಾ
ಪ್ರತಾಪ್ ಜಿ. ದೇವನೂರುರವರಿಗೆ
ಹುಟ್ಟುಹಬ್ಬದ ಹಾರ್ಧಿಕ ಶುಭಾಶಯಗಳು
ಅಭಿವೃದ್ಧಿ | ಹಿಂದುತ್ವ | ಯುವನಾಯಕತ್ವ
ಶುಭಕೋರುವವರು : ಪ್ರತಾಪ್ ಜಿ. ದೇವನೂರು ಸ್ನೇಹ ಬಳಗ, ವರುಣಾ ವಿಧಾನಸಭಾ ಕ್ಷೇತ್ರ


ಭಾರತೀಯ ಜನತಾ ಪಾರ್ಟಿ
ವರುಣಾ ವಿಧಾನ ಸಭಾ ಕ್ಷೇತ್ರ
ನಾಡದೇವತೆ ತಾಯಿ ಚಾಮುಂಡೇಶ್ವರಿಯು ಇವರಿಗೆ ಆಯಸ್ಸು, ಆರೋಗ್ಯ,
ಸಿರಿ-ಸಂಪತ್ತು ರಾಜಕೀಯ ಉನ್ನತ ಅಧಿಕಾರ ಲಭಿಸಲಿ ಎಂದು ಹಾರೈಸುತ್ತಾ
ಪ್ರತಾಪ್ ಜಿ. ದೇವನೂರುರವರಿಗೆ
ಹುಟ್ಟುಹಬ್ಬದ ಹಾರ್ಧಿಕ ಶುಭಾಶಯಗಳು
ಅಭಿವೃದ್ಧಿ | ಹಿಂದುತ್ವ | ಯುವನಾಯಕತ್ವ
ಶುಭಕೋರುವವರು : ಪ್ರತಾಪ್ ಜಿ. ದೇವನೂರು ಸ್ನೇಹ ಬಳಗ, ವರುಣಾ ವಿಧಾನಸಭಾ ಕ್ಷೇತ್ರ

ನಕ್ಕರೆ ಅದೇ ಸ್ವರ್ಗ

ಆತ : (ಬೈಕ್‌ನಲ್ಲಿ ಹೋಗುತ್ತಿದ್ದಾಗ ಸ್ಕಿಡ್ ಆಗಿ ಬಿದ್ದವರಿಗೆ) ಎಂತಹ ಅದೃಷ್ಟವಂತರು ಸಾರ್ ನೀವು. ಡಾಕ್ಟರ್ ಕ್ಲಿನಿಕ್ ಮುಂದೇನೇ ಬಿದ್ದಿದ್ದೀರಿ

ಅವರು : ಮೊದಲು ನನ್ನನ್ನು ಮೇಲೆತ್ತೋ ಮಾರಾಯಾ, ಆ ಡಾಕ್ಟರ್ ನಾನೆ!

ಮೈಸೂರು ಮಿತ್ರ

ಗುರುವಾರ, 22 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನೆನಪಿರಲಿ, ಎಲ್ಲವೂ ವಿಫಲವಾದಾಗ ತಾಳ್ಮೆಯೇ ಸಫಲವಾಗುತ್ತದೆ.

–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಕ್ಕಿ ಕೊಟ್ಟು ಉಣ್ಣೋಕೆ ಅಕ್ಕನ ಹಂಗೇನು?

ನಿಮ್ಮ ಪತ್ರಗಳು

ತ್ರಿವೇಣಿಯವರ ಹೆಸರು ಚಿರಸ್ಥಾಯಿಯಾಗಲಿ



ಮಾನ್ಯರೆ,

ಮನೋವೈಜ್ಞಾನಿಕ ಕಾದಂಬರಿಗಳಿಗೆ ಮತ್ತೊಂದು ಹೆಸರಾದ ಕನ್ನಡದ ಪ್ರಖ್ಯಾತ ಲೇಖಕಿ ದಿವಂಗತ ತ್ರಿವೇಣಿಯವರ ಮೈಸೂರು ನಗರದ ಚಾಮರಾಜಪುರಂನಲ್ಲಿರುವ 120 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ನಿವಾಸವನ್ನು ಅವರ ಪುತ್ರಿ ಶ್ರೀಮತಿ ಮೀರಾ ಶಂಕರ್ ಅವರು "ಬೆಳ್ಳಿ ಮೋಡ" ಹೆಸರಿನಲ್ಲಿ ವಸ್ತು ಸಂಗ್ರಹಾಲಯವನ್ನಾಗಿ ರೂಪಿಸುತ್ತಿರುವ ವಿಚಾರ ಸ್ವಾಗತಾರ್ಹವಾಗಿದೆ. ಕೇವಲ 34 ವರ್ಷಗಳ ಕಾಲ ಜೀವಿಸಿದ್ದ ತ್ರಿವೇಣಿ, ಅಲ್ಪ ಕಾಲದಲ್ಲೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಂಚಲನ ಮೂಡಿಸಿದ್ದರು. ಅವರ ಕಾದಂಬರಿಗಳ ಪೈಕಿ 'ಬೆಳ್ಳಿ ಮೋಡ' ಅತ್ಯಂತ ಯಶಸ್ಸು ಗಳಿಸಿತ್ತು. ಅಷ್ಟೇ ಅಥವಾ ಅದಕ್ಕಿಂತ ಹೆಚ್ಚಿನ ಯಶಸ್ಸನ್ನು ಅವರ ಮತ್ತೊಂದು ಕಾದಂಬರಿ 'ಶರಪಂಜರ' ಗಳಿಸಿತು. ಕನ್ನಡದ ಚಿತ್ರಬ್ರಹ್ಮ ದಿವಂಗತ ಪುಟ್ಟಣ್ಣ ಕಣಗಾಲ್ ಈ ಎರಡು ಕಾದಂಬರಿಗಳನ್ನು ಅತ್ಯಂತ ಮನೋಜ್ಞವಾಗಿ ಬೆಳ್ಳಿತೆರೆಗೆ ಅಳವಡಿಸಿ ಯಶಸ್ವಿಯಾದರು. ಪುಟ್ಟಣ್ಣನವರ ಮೊದಲ ನಿರ್ದೇಶನದ ಚಿತ್ರವೂ ಸಹ 'ಬೆಳ್ಳಿ ಮೋಡ'ವೇ ಆಗಿತ್ತು ಎಂಬುದು ಇಲ್ಲಿ ಉಲ್ಲೇಖನಾರ್ಹ. ಈ ಚಿತ್ರಗಳ ಹಾಡುಗಳು ಇಂದಿಗೂ ಸಹ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಅವರ ಮತ್ತೊಂದು ಕಾದಂಬರಿ ವೇಶ್ಯಾ ಸಮಸ್ಯೆಯಾಧಾರಿತ 'ಹೂವು ಹಣ್ಣು' ಕಾದಂಬರಿಯನ್ನು ರಾಜೇಂದ್ರ ಸಿಂಗ್ (ಬಾಬು) ನಿರ್ದೇಶಿಸಿದ್ದರು.

ತ್ರಿವೇಣಿಯವರು 21ಕ್ಕೂ ಹೆಚ್ಚು ಕಾದಂಬರಿಗಳನ್ನು ಹಾಗೂ 3 ಸಣ್ಣ ಕಥೆಗಳ ಸಂಕಲನಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಅವುಗಳ ಪೈಕಿ 'ಹಣ್ಣೆಲೆ ಚಿಗುರಿದಾಗ', 'ದೂರದ ಬೆಟ್ಟ', 'ಸಮಸ್ಯೆಯ ಮಗು', "ಅವಳ ಮನೆ" ಮುಂತಾದವುಗಳನ್ನು ಹೆಸರಿಸಬಹುದು. ತ್ರಿವೇಣಿಯವರ ಬಹುತೇಕ ಕಾದಂಬರಿಗಳು ಮನೋವಿಜ್ಞಾನಕ್ಕೆ ಸಂಬಂಧಪಟ್ಟಿರುವುದನ್ನೂ ಸಹ ಇಲ್ಲಿ ಗಮನಿಸಬಹುದು.

ತ್ರಿವೇಣಿಯವರು ಜೀವಿಸಿದ್ದ ಕಾಲ ಘಟ್ಟದಲ್ಲಿ ಸ್ತ್ರೀಯರಿಗೆ ಹೆಚ್ಚಿನ ರೀತಿಯ ಸ್ವಾತಂತ್ರ್ಯ ಇರಲಿಲ್ಲ. ಅವರು ಮನೆಯಿಂದ ಹೊರಗೆ ಹೋಗುವುದೇ ಅಪರೂಪವಾಗಿತ್ತು. ಆದರೂ ತ್ರಿವೇಣಿಯವರು ದಿಟ್ಟತನದಿಂದ ಬೇಲಿಯನ್ನು ದಾಟಿ, ಸ್ತ್ರೀಯರು ಸಹ ಪುರುಷರಷ್ಟೆ ಅಥವಾ ಅವರಿಗಿಂತ ಹೆಚ್ಚಿನ ಸಾಧನೆ ಮಾಡಬಲ್ಲರು ಎಂಬುದನ್ನು ತಮ್ಮ ಕಾದಂಬರಿಗಳ ಮೂಲಕ ತೋರಿಸಿಕೊಟ್ಟ ಸ್ವಾಭಿಮಾನಿ ಹೆಣ್ಣಾದರು.

ದಿವಂಗತ ಬಿ.ಎಂ.ಕೃಷ್ಣಸ್ವಾಮಿ ಹಾಗೂ ತಂಗಮ್ಮ ದಂಪತಿಗಳ ಪುತ್ರಿಯಾಗಿ ಸೆಪ್ಟೆಂಬರ್ 1, 1928ರಲ್ಲಿ ಜನಿಸಿದ ತ್ರಿವೇಣಿಯವರ ಮೂಲ ಹೆಸರು "ಅನಸೂಯ". ಮುಂದೆ "ತ್ರಿವೇಣಿ" ಎಂಬ ಕಾವ್ಯನಾಮದಲ್ಲಿ ಅವರು ಹಲವಾರು ಶ್ರೇಷ್ಠ ಕಾದಂಬರಿಗಳನ್ನು ಬರೆದರು. ತ್ರಿವೇಣಿಯವರ ಹಲವಾರು ಕೃತಿಗಳನ್ನು ಇಂಗ್ಲಿಷ್, ತೆಲುಗು ಮತ್ತು ಮಲೆಯಾಳಂ ಭಾಷೆಗಳಿಗೆ ಅನುವಾದಿಸಲಾಗಿದೆ. ಅವರ "ಅವಳ ಮನೆ" ಎಂಬ ಕಾದಂಬರಿಗೆ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಲಾಗಿದೆ. ಇದೇ ರೀತಿ ಇನ್ನೂ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾದ ತ್ರಿವೇಣಿಯವರು ಜುಲೈ 29, 1963 ರಂದು ಕೇವಲ 34ನೇ ವಯಸ್ಸಿನಲ್ಲೇ ನಮ್ಮನ್ನಗಲಿದ್ದು ಅತ್ಯಂತ ದುಃಖಕರ ವಿಚಾರ. ತಮ್ಮ ಅಲ್ಪ ಜೀವಿತ ಕಾಲದಲ್ಲೇ ಹಲವಾರು ಮಹತ್ವಪೂರ್ಣ ಕಾದಂಬರಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ತ್ರಿವೇಣಿಯವರ ನೆನಪನ್ನು ಚಿರಸ್ಥಾಯಿಯಾಗಿಸುವ ಕೆಲಸವನ್ನು ರಾಜ್ಯ ಸರ್ಕಾರವೇ ಮಾಡಬೇಕಿತ್ತು. ಆದರೆ ಅದು ಸಾಧ್ಯವಾಗಿಲ್ಲ. ಈಗ ಅವರ ಪುತ್ರಿ ಮೀರಾ ಶಂಕರ್ ಅವರೇ ಈ ಕೆಲಸಕ್ಕೆ ಕೈ ಹಾಕುವ ಮೂಲಕ ಮಾತೃಋಣ ತೀರಿಸಲು ಹೊರಟಿದ್ದಾರೆ. ಅವರಿಗೆ ಶುಭಾಶಯಗಳು. **–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.**

ಜಾಗ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಪ್ರಾಣಿ ಪಕ್ಷಿಗಳ ಬಗ್ಗೆ ಗಮನ ಅಗತ್ಯ

ಮಾನ್ಯರೆ,



ಹುಣಸೂರು ರಸ್ತೆಯ ಪ್ರೀಮಿಯರ್ ಸ್ಟುಡಿಯೋ ಪಕ್ಕದ ವಿಶಾಲ ಖಾಲಿ ಜಾಗ ಗಿಡ ಮರ ಪೊದೆಗಳಿಂದ ಆವರಿಸಿಕೊಂಡಿತ್ತು. ಈ ಜಾಗ ಹಲವಾರು ಸರಿಸೃಪಗಳ, ಪ್ರಾಣಿ–ಪಕ್ಷಿಗಳ, ನವಿಲುಗಳ ಆವಾಸ ಸ್ಥಾನವಾಗಿತ್ತು. ಇತ್ತೀಚೆಗೆ ಸದರಿ ಗಿಡಗಂಟಿಗಳನ್ನು ಕತ್ತರಿಸಿ ಸ್ವಚ್ಛಗೊಳಿಸಿರುತ್ತಾರೆ. ಆ ಸಮಯದಲ್ಲಿ ಸರಿಸೃಪಗಳ, ಪಕ್ಷಿಗಳ ಮೊಟ್ಟೆ ಹಾಗೂ ಮರಿಗಳ ಹನನವಾಗಿರುತ್ತದೆ. ವಾಸವಿದ್ದ ನವಿಲುಗಳು ಅವುಗಳ ಮೊಟ್ಟೆ ಮರಿಗಳನ್ನು ಕಳೆದುಕೊಂಡು ಅತಂತ್ರವಾಗಿರುವುದು ಮುಂಜಾನೆ ಮತ್ತು ಸಾಯಂಕಾಲ ಅವುಗಳು ಅಲ್ಲಿ ಈಗಲೂ ಬಂದು ನಿಲ್ಲುವುದರಿಂದ ತಿಳಿಯುತ್ತದೆ. ಸ್ವಚ್ಛಗೊಳಿಸುವುದು ತಪ್ಪಲ್ಲ. ಆದರೆ ಮುಂದಾಲೋಚನೆಯಿಂದ ಸ್ವಚ್ಛಗೊಳಿಸುವ ಸಮಯದಲ್ಲಿ ಕಂಡು ಬರುವ ಸರಿಸೃಪಗಳ, ಪ್ರಾಣಿ ಪಕ್ಷಿಗಳ ಮೊಟ್ಟೆ ಮತ್ತು ಮರಿಗಳ ರಕ್ಷಣೆ ಮತ್ತು ಸ್ಥಳಾಂತರಕ್ಕೆ ವ್ಯವಸ್ಥೆ ಮಾಡಬೇಕಾಗಿತ್ತು. ಈಗ ಬೆಳಗಿನ ಸಮಯದಲ್ಲಿ ಸೇರುತ್ತಿರುವ ನವಿಲುಗಳಿಗೆ ಏನಾದರೂ ವ್ಯವಸ್ಥೆ ಮಾಡಬೇಕಾಗಿದೆ. ಇನ್ನು ಮುಂದಾದರೂ ಇಂತಹ ಕಾರ್ಯಾಚರಣೆ ಕೈಗೊಳ್ಳುವ ಮುನ್ನ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ.


–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

ಕಾಮುಕ ಶಿಕ್ಷಕರಿಗೆ ಕಡಿವಾಣ ಹಾಕಬೇಕಿದೆ

ಮಾನ್ಯರೆ,

ಸುಸಂಸ್ಕೃತ ಬದುಕಿಗೆ ಪ್ರತಿಯೊಬ್ಬ ವಿದ್ಯಾರ್ಥಿಗೂ ತಳಮಟ್ಟದಲ್ಲೇ ಭದ್ರ ಬುನಾದಿ ಹಾಕುವ ಶ್ರೇಷ್ಠ ವೃತ್ತಿ ಈ ಶಿಕ್ಷಕ ವೃತ್ತಿ. ಪೂಜ್ಯನೀಯ ಮನೋಭಾವನೆಯಿಂದ ಪ್ರತಿಯೊಬ್ಬರು ತಲೆಬಾಗಿಸಿ ಗೌರವಿಸಲ್ಪಡುವ ಘನತೆಯ ವೃತ್ತಿ, ಇದುವೇ ಶಿಕ್ಷಕ ವೃತ್ತಿ. ಇಂತಹ ವೃತ್ತಿಯಲ್ಲಿ ಇದ್ದುಕೊಂಡು ಇತ್ತೀಚಿನ ಕೆಲ ಕಾಮಾಂಧ ಶಿಕ್ಷಕರು ವಿದ್ಯಾರ್ಥಿನಿಯರ ಜೊತೆಗೆ ಅಶ್ಲೀಲವಾಗಿ ನಡೆದುಕೊಳ್ಳುತ್ತಿರುವುದು ಹಾಗೂ ಅತ್ಯಾಚಾರಕ್ಕೆ ಪ್ರಯತ್ನಿಸುತ್ತಿರುವುದು ನಮ್ಮ ನಾಗರಿಕ ಸಮಾಜಕ್ಕೆ ಧಕ್ಕೆಯಾಗುತ್ತಿದೆ ಮತ್ತು ನಾಚಿ ತಲೆ ತಗ್ಗಿಸುವಂತೆ ಮಾಡಿದೆ. ಇದಕ್ಕೆ ಮಳವಳ್ಳಿ, ಪಾಂಡವಪುರ ಮತ್ತು ಉತ್ತರ ಕರ್ನಾಟಕದಲ್ಲಿ ನಡೆದ ಪ್ರಕರಣಗಳೇ ನೇರ ಸಾಕ್ಷಿಯಾಗಿದೆ. ಇಂತಹ ಕಾಮುಕ ಶಿಕ್ಷಕರಿಂದ ಶಿಕ್ಷಕ ವೃತ್ತಿಗೆ, ಉತ್ತಮ ಶಿಕ್ಷಕರಿಗೆ ಮತ್ತು ಶಾಲೆಗಳಿಗೆ ಕೆಟ್ಟ ಹೆಸರು ಬರಲು ಪ್ರಬಲ ಕಾರಣವಾಗಿದೆ. ಆದ್ದರಿಂದ ಕಾಮುಕ ವ್ಯಾಘ್ರಗಳಂತೆ ಇರುವ ಈ ಶಿಕ್ಷಕರಿಗೆ ಕಾನೂನು ಬದ್ಧವಾಗಿ ನೀಡುವ ಕಠಿಣ ಶಿಕ್ಷೆ ಇವರಂತೆ ಇರುವ ಅದೆಷ್ಟೋ ಕಾಮುಕ ಶಿಕ್ಷಕರಿಗೆ ತಕ್ಕಪಾಠವಾಗಬೇಕು.

–ಪವನ್ ಜಯರಾಂ, ಸಾಹಿತಿ, ಸಿದ್ದಯ್ಯನಪುರ




ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಕಾಶ್ಮೀರದ ಕೆಚ್ಚೆದೆಯ ವೀರರ ಮೇಲೆ ಬೆಳಕು ಚೆಲ್ಲಿದ ವಿಕ್ರಮ್ ಸಂಪತ್

ಅತ್ಯಂತ ಕುತೂಹಲಭರಿತವಾದಂತಹ ಮರೆತು ಹೋದ ಇಂಡಿಯಾ– ಹಿಂದೂಸ್ತಾನ್ – ಭಾರತ ಎಂಬ ದೇಶದ ಚರಿತ್ರೆಯ ವಿಚಾರವಾಗಿ 'Brave Hearts of Bharat-Vignettes from Indian History' ಎಂಬ ಪುಸ್ತಕವನ್ನು ಯುವ ಇತಿಹಾಸಕಾರ ವಿಕ್ರಮ್ ಸಂಪತ್ ಅವರು ಬರೆದಿದ್ದಾರೆ. ಈ ಪುಸ್ತಕ ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಲ್ಲಿ ಲೋಕಾರ್ಪಣೆಗೊಂಡಿತು. ಇತಿಹಾಸದ ವಿಷಯದಲ್ಲಿ ಓರ್ವ ಸತ್ವಯುತ ಬರಹಗಾರರಾದ ಅವರು, ವೀರ ಸಾವರ್ಕರ್ ಜೀವನ ಕುರಿತಾಗಿ ಎರಡು ಮೇರು ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ಒಡೆಯರ್ ಕುರಿತಾಗಿಯೂ 'Splendours of Royal Mysore' ಎಂಬ ಪುಸ್ತಕವನ್ನು ಇವರು ರಚಿಸಿದ್ದಾರೆ. ಕನ್ನಡಿಗರು ವಿಶೇಷವಾಗಿ ಮೈಸೂರಿನವರು ಈ ಪುಸ್ತಕವನ್ನು ಅವಶ್ಯವಾಗಿ ಓದಲೇಬೇಕು.




ವಿಕ್ರಂ ಸಂಪತ್


ಈ ಮೇಲೆ ಹೇಳಲಾದ 'Bravehearts of Bharat' (ಭಾರತದ ಕೆಚ್ಚೆದೆಯ ವೀರರು) ಪುಸ್ತಕವು ನನ್ನ ಕೈಸೇರುತ್ತಿದ್ದಂತೆ (ಕೃಪೆ: ಮೈಸೂರು ಬುಕ್ ಕ್ಲಬ್ಬಿನ ಶುಭಾ ಅರಸ್) ನನಗೆ ಬಹಳ ಸಂತೋಷವಾಯ್ತು. ತಡಮಾಡದೆ ತಕ್ಷಣ ಪುಸ್ತಕವನ್ನು ತೆಗೆದುಕೊಂಡು ಓದಲು ಪ್ರಾರಂಭಿಸಿದೆ.

ಈ ಪುಸ್ತಕವು ತಮ್ಮ ಪ್ರಾಂತ್ಯವನ್ನು, ಸಾಮ್ರಾಜ್ಯವನ್ನು ಕಾಪಾಡಿಕೊಳ್ಳಲು, ತಮ್ಮ ಹಕ್ಕುಗಳು, ನಂಬಿಕೆಗಳು ಹಾಗೂ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ವೀರಾವೇಶದಿಂದ ಆಕ್ರಮಣಕಾರರ ವಿರುದ್ಧ ಹೋರಾಡಿದ ಆಯ್ದ ಸಾಹಸಿ ಪುರುಷರು ಮತ್ತು ಮಹಿಳೆಯರ ಕಥೆಗಳನ್ನು ಅನಾವರಣಗೊಳಿಸುವಂತಹದು. **ನಮ್ಮ ವಿದ್ಯಾರ್ಥಿ ಜೀವನದಲ್ಲಿ, ಸ್ವಾತಂತ್ರ್ಯದ ನಂತರದ ಈ 75 ವರ್ಷಗಳಲ್ಲಿ, ಭಾರತೀಯರಾದ ನಮಗೆ ಭಾರತದಲ್ಲಿ ಬದುಕಿ, ಮಡಿದ ಈ ಕೆಚ್ಚೆದೆಯ ವೀರರ ಶೌರ್ಯ ಮತ್ತು ಆಡಳಿತದ ಬಗ್ಗೆ ತಿಳಿದುಕೊಳ್ಳುವ ಅವಕಾಶ ನೀಡಲಾಗಿರಲಿಲ್ಲ. ಈಗಿನ ಪಠ್ಯ ಪುಸ್ತಕಗಳಲ್ಲೆಲ್ಲಾ ಬರೀ ಮೊಘಲರು, ಬ್ರಿಟೀಷರು, ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟಗಾರರ ಉತ್ಪ್ರೇಕ್ಷಿತ ಸಾಧನೆ ಪಾಠ.**

ವಿಕ್ರಮ್ ಸಂಪತ್‌ರವರು ಈ ಶೈಕ್ಷಣಿಕ ಮತ್ತು ಚಾರಿತ್ರಿಕ ಕೊರತೆಯನ್ನು ಸ್ವಲ್ಪ ಮಟ್ಟಿಗಾದರೂ ಯಶಸ್ವಿಯಾಗಿ ಪೂರೈಸಿದ್ದಾರೆ. ಅಮ ಮರೆಮಾಚಲ್ಪಟ್ಟಿದ್ದ ಭಾರತೀಯ ಚರಿತ್ರೆಯ ಮೇಲೆ ಬೆಳಕು ಚೆಲ್ಲಿ, ಪ್ರಸ್ತುತ ಹಾಗೂ ಭವಿಷ್ಯದ ತಲೆಮಾರಿನ ಜನರು ಸನಾತನ ಧರ್ಮದ ಪ್ರಕಾರ ನಮ್ಮನ್ನು ಆಳಿದ ಶ್ರೇಷ್ಠ ಹಾಗೂ ವೀರ ರಾಜರು, ರಾಣಿಯರ ಬಗ್ಗೆ ತಿಳಿದುಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ವಿಕ್ರಮ್ ಸಂಪತ್ ಅವರಿಗೆ ಧನ್ಯವಾದಗಳು. ಏಸುಕ್ರಿಸ್ತನು ಸತ್ತು ಹೋಗಿದ್ದ ಲಜರಸ್‌ರನ್ನು ಮತ್ತೇ ಜೀವಂತವಾಗಿಸಿದಂತೆ, ಮರೆತುಹೋದ ಶತಮಾನಗಳ ಹಿಂದೆಯೇ ಸಮಾಧಿಯಾದ ಭಾರತೀಯ ಕೆಚ್ಚೆದೆಯ ವೀರರಿಗೆ ವಿಕ್ರಮ್ ಸಂಪತ್ ಅವರು ಜೀವ ನೀಡಿದ್ದಾರೆ.



ಪುಸ್ತಕದ ಮುಖಪುಟ



ಲಲಿತಾದಿತ್ಯ ಮುಕ್ತಪೀಡ

ಪುಸ್ತಕದ ಪೀಠಿಕೆಯಲ್ಲಿ, ಹಿಂದೂ ರಾಜರು, ರಾಣಿಯರ ಹಾಗೂ ಪ್ರಾರಂಭಿಕ ಮುಸ್ಲಿಂ ಆಡಳಿತಗಾರರ ಅವಧಿಯನ್ನು ಹೊರತುಪಡಿಸಿ ಮುಸ್ಲಿಂ ಮತ್ತು ಬ್ರಿಟಿಷರ ಆಡಳಿತ ಕಾಲದಲ್ಲಿ ಯಾವ ರೀತಿ ಭಾರತೀಯ ಇತಿಹಾಸವನ್ನು ತಿರುಚಿ ಬರೆಯಲಾಯಿತು ಎಂಬುದನ್ನು ವಿಕ್ರಮ್ ಸಂಪತ್ ಸವಿಸ್ತಾರವಾಗಿ ಬರೆದಿದ್ದಾರೆ. ನಮಗೆ ಇಸ್ಲಾಮಿಕ್ ಭಾರತಕ್ಕಿಂತ ಮುಂಚಿನ ಕಥೆಗಳ ಅಗತ್ಯವಿದೆಯೇ ಹೊರತು, ಕೇವಲ ರಾಜಧಾನಿ ದೆಹಲಿ ಕೇಂದ್ರೀಕೃತ ಭಾರತದ ಚರಿತ್ರೆಯಲ್ಲ. ಪ್ರಾಂತೀಯ ಚರಿತ್ರೆ ಕೂಡ ನಮಗೆ ಬೇಕಿದೆ.

ಮೂರು ಶತಮಾನಗಳಷ್ಟು ಕಾಲ –1336 ರಿಂದ 1646 ರವರೆಗೆ–ಆಳಿದ ವಿಜಯನಗರ ಸಾಮ್ರಾಜ್ಯ ಅಥವಾ ಕಾಶ್ಮೀರದ ಬಲಿಷ್ಠವಾಗಿದ್ದ ಕಾರ್ಕೋಟ ರಾಜವಂಶ, ಇಲ್ಲವೇ ಅಸ್ಸಾಮಿನ ಅಹೋಮ್ ಸಂಸ್ಥಾನದ್ದು ಪ್ರಾಂತೀಯ ಕಥೆಗಳು ಅನ್ನಿಸಿಕೊಳ್ಳುವುದೇ? ಹಾಗಾದರೆ ಸೀಮಿತ ಪ್ರಾಂತ್ಯದ ದೆಹಲಿಯ ಸುಲ್ತಾನರ ಚರಿತ್ರೆಯು ಮುಖ್ಯವಾಹಿನಿಯ ಚರಿತ್ರೆಯೆನಿಸಿಕೊಳ್ಳುವುದು ಹೇಗೆ? ಇದನ್ನೇ ವಿಕ್ರಮ್ ಸಂಪತ್ ಅವರು ಪ್ರಮುಖವಾಗಿ ಕೇಳುತ್ತಾರೆ. ಇದೊಂದು ಅತ್ಯಂತ ಸೂಕ್ತವಾದ, ಪ್ರತಿಯೊಬ್ಬರ ಮನಸ್ಸಿಗೆ ನಾಟುವಂತಹ ಪ್ರಶ್ನೆಯಾಗಿದೆ.

ಅತ್ಯಂತ ಅಪ್ರಸ್ತುತವಾದ, ಅಲ್ಪ ಕಾಲದ ಹಾಗೂ ಸೀಮಿತ ಪ್ರಾಂತ್ಯಗಳನ್ನು ಹೊಂದಿದ ಅಲ್ಲದೆ ದೆಹಲಿ ಮತ್ತು ಅದರ ಸುತ್ತಮುತ್ತ ಆಡಳಿತ ನಡೆಸಿದ ಸುಲ್ತಾನರ ಸಂತತಿಯ ಆಳ್ವಿಕೆ ಮಹಾ ಚರಿತ್ರೆಗಳಾದವು. ಅವುಗಳೆಂದರೆ – ತುಘಲಕ್‌ರು, ಲೋಧಿಗಳು ಇಲ್ಲವೇ ಖಿಲ್ಜಿ ಸಂತತಿಗಳು. ಹೌದು, ಮೊಘಲರು ದೀರ್ಘ ಕಾಲ ಆಳಿದರು. ಆದರೆ, ಕೆಲವು ಆಕರ್ಷಕ ವಾಸ್ತುಶಿಲ್ಪವುಳ್ಳ ಕಟ್ಟಡಗಳನ್ನು ಹೊರತುಪಡಿಸಿ, ಅವರ ಕೊಡುಗೆಗಳೇನು? ನವಾಬರ ಉಡುಪು ಹಾಗೂ ಬಾಯಲ್ಲಿ ನೀರೂರಿಸುವ ತಿನಿಸುಗಳು!

ದುರದೃಷ್ಟವಶಾತ್, ದೇಶದ ದಕ್ಷಿಣ ಭಾಗದ ರಾಜ ಸಂತತಿಗಳಾದ ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ಶಾತವಾಹನರು, ಚೋಳರು, ಪಾಂಡ್ಯರು, ಮೈಸೂರು ಒಡೆಯರು, ಟ್ರಾವಂಕೂರಿನ ಮಾರ್ತಾಂಡ ವರ್ಮಗಳು ಮುಂತಾದವರ ಬಗ್ಗೆ ಹೆಚ್ಚು ವಿಸ್ತೃತವಾಗಿ ಯಾರೂ ಬರೆಯಲಿಲ್ಲ. ಇನ್ನೂ ಹಲವರನ್ನು ದಂತಕಥೆ ಮತ್ತು ಜಾನಪದ ಕಥೆಗಳಿಗೆ ಸೀಮಿತಗೊಳಿಸಲಾಗಿದೆ. ಅದು ಹಾಗಿರಲಿ, ಈ ಪುಸ್ತಕವನ್ನು ಬರೆಯುವ ಮೂಲಕ ವಿಕ್ರಮ್ ಸಂಪತ್ ಅವರು ಭಾರತದ ಚರಿತ್ರೆಯ ತಪ್ಪುಗಳನ್ನು ಸರಿಪಡಿಸಿದ್ದಾರೆ. ಮರೆತು ಹೋದ ಭಾರತೀಯ ಚರಿತ್ರೆಗೆ ಈ ಮೂಲಕ ಅವರು ಜೀವ ನೀಡಿದ್ದಾರೆ.

ಕುತೂಹಲಕಾರಿ ವಿಷಯವೆಂದರೆ, ಈ ಪುಸ್ತಕದಲ್ಲಿ ಬರುವ ಮೊಟ್ಟ ಮೊದಲ ಕೆಚ್ಚೆದೆಯ ಕಲಿ ಕಾಶ್ಮೀರದ **ಲಲಿತಾದಿತ್ಯ ಮುಕ್ತಪೀಡ** ಆಗಿದ್ದಾರೆ. (ಕಲಾವಿದನ ಕಾಲ್ಪನಿಕ ಚಿತ್ರವನ್ನು ಪ್ರಕಟಿತ ಪುಸ್ತಕದಿಂದ ಆಯ್ದು ಇಲ್ಲಿ ಪ್ರಕಟಿಸಲಾಗಿದೆ).

ಹಿಂದೂ ಧರ್ಮೀಯರ ಆರಾಧ್ಯ ದೈವವಾದ ಸೂರ್ಯ ಭಗವಾನರ **'ಮಾರ್ತಾಂಡ'** ಹೆಸರಿನ ಬೃಹತ್ ದೇವಸ್ಥಾನವು ಅಸ್ತಿತ್ವದಲ್ಲಿತ್ತೆಂದು ಈ ಪುಸ್ತಕವು ಹೇಳುತ್ತದೆ. ಇದನ್ನು ಕಾಶ್ಮೀರದ ಕಾರ್ಕೋಟ ರಾಜವಂಶದ ವಿಶ್ವ ವಿಜೇತ ದೊರೆ ಲಲಿತಾದಿತ್ಯ ಮುಕ್ತಪೀಡನ ವಾಸ್ತು ಶಿಲ್ಪಿಗಳು ಕಟ್ಟಿದರೆಂದು ಹೇಳಲಾಗುತ್ತದೆ. ಮುಕ್ತಪೀಡ ದೊರೆ ಮಹಾಭಾರತ ಮಹಾಕಾವ್ಯದಲ್ಲಿ ಬರುವ ಕಾರ್ಕೋಟ ಸಂತತಿಯವನೆಂದು ನಂಬಲಾಗಿದೆ.

ಕ್ರಿ.ಶ 724, ಈ ಕಾಲದಲ್ಲಿ ಅರಬ್ ಮುಸ್ಲಿಮರ ರಾಜಕೀಯ ಮತ್ತು ಧಾರ್ಮಿಕ ಶಕ್ತಿಗಳು ವಿಶ್ವಾದ್ಯಂತ ಹಲವಾರು ದೇಶಗಳನ್ನು ವಶಪಡಿಸಿಕೊಂಡಿದ್ದವು. ಭಾರತದ ಸಿಂಧ್ ಪ್ರಾಂತ್ಯವನ್ನು ಕೂಡ ಹಿಂಸಾತ್ಮಕ ಘನಘೋರ ರೀತಿಯಲ್ಲಿ ಆಕ್ರಮಣ ಮಾಡಿದವು. ಆಗ ಸಿಂಧ್ ಪ್ರಾಂತ್ಯವನ್ನು **ಚಾಚ ರಾಯ್ ಮತ್ತು ರಾಜ ದಹರ್** ಆಳುತ್ತಿದ್ದರು. ಚರಿತ್ರೆಯ ಪ್ರಕಾರ, ಇದು ಭಾರತದ ಮೇಲಿನ ಪ್ರಥಮ ಮುಸ್ಲಿಂ ಆಕ್ರಮಣ. ಬಾಗ್ದಾದ್‌ನ ಖಲೀಫನ ಸೇನಾಪತಿ ಖಾಸಿಂನು ಸಿಂಧ್‌ನ ಅಂದಿನ ರಾಜಧಾನಿ ಈಗಿನ ಪಾಕಿಸ್ತಾನದ ಕರಾಚಿಗೆ ಹತ್ತಿರವಿದ್ದ ಬ್ರಹ್ಮನಾಬಾದ್ ಅನ್ನು ಕಡೆಯ ಇಟ್ಟಿಗೆಯವರೆಗೆ ವಧಾಸ್ಥಾನವನ್ನಾಗಿ ಮಾಡಿದನು.

ರಾಜ ದಹರನ ಸೇನಾಧಿಕಾರಿಯ ವಿಶ್ವಾಸ ದ್ರೋಹವೇ ರಾಜನ ಪರಾಜಯಕ್ಕೆ ಕಾರಣ ಎಂದು ಬೇರೆ ಹೇಳಬೇಕಾಗಿಲ್ಲ. ರಾಣಿ, ರಾಣಿ ಬಾಯಿ ಸ್ವತಃ ಅಗ್ನಿಗಾಹುತಿಯಾದಳು. (ಇದಕ್ಕೆ ಜಾಹೂರ ಎನ್ನುತ್ತಾರೆ). ಬಹುಶಃ ಇದು ಭಾರತದಲ್ಲಿನ ಪ್ರಥಮ "ಜಾಹೂರ" ಆಗಿದ್ದಿರಬಹುದು. ರಾಜನ ಇಬ್ಬರು ಹೆಣ್ಣು ಮಕ್ಕಳಾದ ಸೂರ್ಯದೇವಿ ಮತ್ತು ಪರಿಮಳಾ ದೇವಿಯವರನ್ನು ಖಲೀಫನ ಅಂತಃಪುರಕ್ಕೆ ಕಳುಹಿಸಲಾಯಿತು.

ಇಲ್ಲೊಂದು ಕುತೂಹಲಕಾರಿ ಘಟನೆಯಿದೆ. ದಹರನ ಮಗಳಾದ ಸೂರ್ಯದೇವಿಯು ಖಾಸಿಂನು ತನ್ನನ್ನು ಈಗಾಗಲೇ 'ಉಪಯೋಗಿಸಿ' ಕೊಂಡಿರುವುದರಿಂದ ತಾನು ಖಲೀಫನ ಅಂತಃಪುರದ ಒಂದು ಭಾಗವಾಗಿ ಇರುವುದು ಸರಿ ಕಾಣದೆಂದು ಖಲೀಫನ ಮನವೊಲಿಸಿದಳು. ಇದರಿಂದ ಕೋಪೋದ್ರಿಕ್ತ ಖಲೀಫನು ಖಾಸಿಂನನ್ನು ಬಂಧಿಸಿ, ಚರ್ಮದ ಚೀಲದಲ್ಲಿ ಕಟ್ಟಿ ಬಾಗ್ದಾದಿಗೆ ತರಲು ಆದೇಶಿಸಿದ. ಹೀಗೆ ಸಾಗಿಸುವಾಗ ಮಾರ್ಗಮಧ್ಯದಲ್ಲಿ ಖಾಸಿಂ ಉಸಿರುಗಟ್ಟಿ ಮೃತಪಟ್ಟ. ನಂತರದಲ್ಲಿ ಸೂರ್ಯದೇವಿ, ಖಲೀಫನ ಬಳಿ ಖಾಸಿಂನು ತನ್ನ ತಂದೆಯನ್ನು ಕೊಂದಿದ್ದರ ಸೇಡು ತೀರಿಸಿಕೊಳ್ಳುವ ಸಲುವಾಗಿ ಸುಳ್ಳು ಹೇಳಿದ್ದಾಗಿ ಒಪ್ಪಿಕೊಳ್ಳುತ್ತಾಳೆ. ಇದರಿಂದ ಕೋಪಗೊಂಡ ಖಲೀಫನು, ಸೂರ್ಯದೇವಿ ಹಾಗೂ ಅವಳ ಸೋದರಿಯನ್ನು ಜೀವಂತ ಸಮಾಧಿ ಮಾಡುವಂತೆ ತನ್ನ ಸೈನಿಕರಿಗೆ ಆದೇಶಿಸುತ್ತಾನೆ. ಅದು ಹಾಗಿರಲಿ.

ಮತ್ತೆ ಕಾಶ್ಮೀರದ ರಾಜ ಲಲಿತಾದಿತ್ಯ ಮುಕ್ತಪೀಡನತ್ತ ಹೊರಳುವುದಾದರೆ, ಮುಸ್ಲಿಂ ಅರಬ್ಬರಿಂದ ಅವನನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಹಾಗೂ ಮುಕ್ತಪೀಡ ರಾಜನು 'ದಿಗ್ವಿಜಯ'ದ ದಂಡಯಾತ್ರೆ ಇತ್ಯಾದಿ ಆರಂಭಿಸುತ್ತಾನೆ. ಅತ್ಯಂತ ದೂರದ ಸ್ಥಳವೊಂದರಲ್ಲಿ ಸಂಭವಿಸುವ ಆತನ ಸಾವು ನಿಗೂಢವೆನಿಸುತ್ತದೆ.

ಈಗ ಪ್ರಸ್ತುತ ಕಾಶ್ಮೀರದತ್ತ ಬರುತ್ತೇನೆ. ಹಳೆಯ ಕಾಶ್ಮೀರವು ಆಧ್ಯಾತ್ಮಿಕತೆಯ, ರಹಸ್ಯ ಗೂಢಾರ್ಥಗಳ ಮತ್ತು ಧರ್ಮಗಳ ನೆಲೆವೀಡಾಗಿತ್ತು. ಮಾತ್ರವಲ್ಲ ಕಾಶ್ಮೀರಿ ಪಂಡಿತರ ತವರಾಗಿತ್ತು. ಆ ಕಾಲದಲ್ಲಿ ಬೌದ್ಧ ಧರ್ಮವು ಪ್ರಬಲವಾಗಿತ್ತು. ಆದರೆ ಆದಿಶಂಕರಾಚಾರ್ಯರು ಹಿಂದೂ ಧರ್ಮವನ್ನು ಅಲ್ಲಿ ಸುಧಾರಣೆಗೊಳಿಸಿದರು.

ಅವರು 9ನೇ ಶತಮಾನದಲ್ಲಿ (ಕ್ರಿ.ಶ 788–820) ಕಾಶ್ಮೀರಕ್ಕೆ ಭೇಟಿ ನೀಡಿ, ಶಕ್ತಿ ದೇವತೆಯನ್ನು ಸ್ತುತಿಸಿ, 'ಸೌಂದರ್ಯ ಲಹರಿ'ಯನ್ನು ಗೋಪಾದ್ರಿ ಬೆಟ್ಟದ ತುದಿಯಲ್ಲಿ ಕುಳಿತು ರಚಿಸಿದರು. ಅದೀಗ ಶಂಕರಾಚಾರ್ಯರ ಬೆಟ್ಟ ಎಂದೇ ಕರೆಯಲ್ಪಡುತ್ತಿದೆ. ಅಲ್ಲಿ ಶಿವಲಿಂಗ ಹಾಗೂ ಶಂಕರಾಚಾರ್ಯರ ಪ್ರತಿಮೆ ಕೂಡ ಇದೆ. ಈ ದೇವಸ್ಥಾನವು ಶ್ರೀನಗರದ ನೈರುತ್ಯ ಭಾಗದಿಂದ 100 ಕಿಮೀ ದೂರದಲ್ಲಿದ್ದು, ಈಗ ಇದು ಪಾಕಿಸ್ತಾನ ಆಕ್ರಮಿತ ಪ್ರದೇಶದಲ್ಲಿದೆ.

ಕಾಶ್ಮೀರದ ಬಹುತೇಕ ಚರಿತ್ರೆಯು, ದಂತ ಮತ್ತು ಕಾಲ್ಪನಿಕತೆಯ ಮಿಶ್ರಣವಾಗಿದ್ದು, ಇವೆಲ್ಲವೂ **ಕವಿ ಕಲ್ಹಣನ 'ರಾಜ ತರಂಗಿಣಿ' ಎಂಬ ಸಂಸ್ಕೃತದ ಮಹಾಗ್ರಂಥದಲ್ಲಿ ದಾಖಲಾಗಿವೆ.** ಇದನ್ನು ರಚಿಸಿದ್ದು 12ನೇ ಶತಮಾನದಲ್ಲಿ. ನಾನು ಮೇಲೆ ಹೇಳಿದ ಎರಡು ಪ್ರಮುಖ ಘಟನೆಗಳು ಸಂಭವಿಸಿದ 400 ವರ್ಷಗಳ ನಂತರ ಪ್ರಕಟವಾಗಿದೆ.

ಈಗ ಶಂಕರಾಚಾರ್ಯ ಬೆಟ್ಟವೆಂದು ಕರೆಯಲ್ಪಡುವ ಗೋಪಾದ್ರಿ ಬೆಟ್ಟವು, ಕಾಶ್ಮೀರದಲ್ಲಿ ಪ್ರಸ್ತುತ ಇರುವ ಹಲವಾರು ಪ್ರಾಂತೀಯ ಪಕ್ಷಗಳ ರಾಜಕೀಯ ಮೈತ್ರಿಕೂಟ 'ಗುಪ್ಕರ್' ಹೆಸರು ಈ ಬೆಟ್ಟದ ಹೆಸರಿನಿಂದಲೇ ಬಂದದ್ದಾಗಿದೆ. (The Peoples Alliance for Gupkar Declaration - PAGD) ಫಾರೂಕ್ ಅಬ್ದುಲ್ಲಾರವರು ಈ ಮೈತ್ರಿಕೂಟದ ಅಧ್ಯಕ್ಷರಾಗಿದ್ದಾರೆ. ಕಲ್ಹಣನ ಪ್ರಕಾರ ಕಾಶ್ಮೀರದ ಪುರಾತನ ರಾಜ ಗೋಪಾದಿತ್ಯನು ಬೆಟ್ಟದ ತಪ್ಪಲಿನಲ್ಲಿ 'ಆರ್ಯದೇಶ'ದಿಂದ ಬಂದ ಬ್ರಾಹ್ಮಣರಿಗೆ ಭೂಮಿಯನ್ನು ನೀಡಿದನಂತೆ. ಬೆಟ್ಟದ ಪಾದದ ಬಳಿಯಿರುವ ಈ ಪ್ರದೇಶವನ್ನು ಈಗ ಗುಪ್ಕರ್ ಎಂದೇ ಕರೆಯಲಾಗುತ್ತದೆ.

ಇದು ಕಾಶ್ಮೀರಕ್ಕೆ ಭೇಟಿ ನೀಡುವವರ ಪಾಲಿಗೆ ವೈಭವಯುತವಾದ ಕಾಶ್ಮೀರದ ಮಸುಕಾದ ಚರಿತ್ರೆಯಾಗಿದೆ ಹಾಗೂ ಮೊಘಲ್ ಚಕ್ರವರ್ತಿ ಜಹಾಂಗೀರ್‌ನಿಂದ 'ಭೂಲೋಕದ ಸ್ವರ್ಗ' ಎಂದು ಕರೆಯಲ್ಪಟ್ಟ ಕಾಶ್ಮೀರ.

(ಮೂಲ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ)

Email: voice@starofmysore.com

ಕೊಡಗು ಮಾಡೆಲ್ ಶಾಲೆಯ 14ನೇ ವಾರ್ಷಿಕ ದಿನಾಚರಣೆ

ಮೈಸೂರು,ಡಿ.21–ಮೈಸೂರಿನ ವಿದ್ಯಾಶಂಕರ ಬಡಾವಣೆಯ ಕೊಡಗು ಮಾಡೆಲ್ ಶಾಲೆಯ 14ನೇ ವಾರ್ಷಿಕ ದಿನಾಚರಣೆ ಡಿ.17ರಂದು ಮೈಸೂರು ಹಾಲಿನ ಡೈರಿ ಸಮೀಪದ ಶಿಕ್ಷಕರ ಸದನದಲ್ಲಿ ನೆರವೇರಿತು.

ಕಾರ್ಯಕ್ರಮದಲ್ಲಿ ಮೈಸೂರು ಗ್ರಾಮಾಂತರ ಕ್ಷೇತ್ರ ಶಿಕ್ಷಣಾಧಿಕಾರಿ ಬಿಇಓ ಎನ್.ಎ. ಮಲ್ಲೇಶ್ವರಿ, ಕಾರ್ಪೋರೇಟರ್ ಶ್ರೀಮತಿ ರಜನಿ ಅಣ್ಣಯ್ಯ, ನಿವೃತ್ತ ಪ್ರಿನ್ಸಿಪಾಲ್ ಡಾ. ಎಂ.ಆರ್.ಜಯಪ್ರಕಾಶ್ ಅತಿಥಿಗಳಾಗಿ ಉಪಸ್ಥಿತರಿದ್ದರು. ಶಾಲೆಯ ಅಧ್ಯಕ್ಷರಾದ ಪಿ.ಎಸ್.ದೇವಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಶಾಲೆ ಆಡಳಿತ ಮಂಡಳಿ ಹಾಗೂ ಶೈಕ್ಷಣಿಕ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಅತಿಥಿಗಳು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಮೇರಿ ಅನಿತಾ ವಾರ್ಷಿಕ ವರದಿ ಓದಿದರೆ, ಶೈಕ್ಷಣಿಕ ಹಾಗೂ ಇತರೆ ಚಟುವಟಿಕೆಗಳಲ್ಲಿ ಸಾಧನೆ ಮೆರೆದ ವಿದ್ಯಾರ್ಥಿಗಳಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಇದೇ ವೇಳೆ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಕುಮಾರಿ ಕೆ.ಚಂದನ ಅರಸ್ ಅವರನ್ನು ಬಿಇಓ ಮಲ್ಲೇಶ್ವರಿ ಅವರು ಸನ್ಮಾನಿಸಿದರು. ನಂತರ ಮಲ್ಲೇಶ್ವರಿ ಅವರು ತಮ್ಮ ಭಾಷಣದಲ್ಲಿ ಶೈಕ್ಷಣಿಕ ಹಾಗೂ ಶೈಕ್ಷಣಿಕೇತರ ಚಟುವಟಿಕೆಗಳಲ್ಲಿ ಶಾಲೆಯ ಸಾಧನೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.



ಕಾರ್ಪೋರೇಟರ್ ರಜನಿ ಅಣ್ಣಯ್ಯ ಅವರು ಶಾಲೆಯ ಬಗ್ಗೆ ಪ್ರಸ್ತಾಪಿಸುತ್ತಾ, ಆಲನಹಳ್ಳಿ ಕ್ಲಸ್ಟರ್‌ಗೆ ಈ ಶಾಲೆ ವರದಾನವಾಗಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ನಿವೃತ್ತ ಪ್ರಿನ್ಸಿಪಾಲ್ ಜಯಪ್ರಕಾಶ್, ಚಿಕ್ಕ ವಯಸ್ಸಲ್ಲೇ ಮಕ್ಕಳಲ್ಲಿ ಮೌಲ್ಯಗಳನ್ನು ತುಂಬುವುದು ಪೋಷಕರು ಹಾಗೂ ಶಿಕ್ಷಕರದ್ದು ಸಮಾನ ಜವಾಬ್ದಾರಿ ಎಂದು ಅಭಿಪ್ರಾಯಪಟ್ಟರು.

ನಂತರ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನೆರೆದವರಿಗೆ ಭರಪೂರ ಮನರಂಜನೆ ನೀಡಿದರು. ಕೊನೆಗೆ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 22 ಗುರುವಾರ 2022


ಸಂಪುಟ: 43 | ಸಂಚಿಕೆ: 245 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜಿಯವರ
ಭೂಮಂತ್ರ... ಭೂಮಂತ್ರ...



ಕಾಶ್ಮೀರದ ಕೆಚ್ಚದೆಯ ವೀರರ ಮೇಲೆ ಬೆಳಕು ಚೆಲ್ಲಿದ ವಿಕ್ರಮ್ ಸಂಪತ್

■ ಪುಟ–4

ಅಭ್ಯರ್ಥಿಗಳ ಆಯ್ಕೆಗೆ ಕೆಪಿಸಿಸಿಯಿಂದ ಉಸ್ತುವಾರಿ ಸಮಿತಿ ನೇಮಕ

ಮೈಸೂರು ನಗರ ರಮಾನಾಥ ರೈ, ಜಿಲ್ಲೆಗೆ ಚೆಲುವರಾಯಸ್ವಾಮಿ, ಮಂಡ್ಯ ಗೋವಿಂದರಾಜು, ಚಾಮರಾಜನಗರ ಡಾ.ಸೀತಾರಾಮ್, ಕೊಡಗು ಡಾ.ಹೆಚ್.ಸಿ.ಮಹದೇವಪ್ಪ, ಹಾಸನ ಡಿ.ಕೆ.ಸುರೇಶ್

● ಸ್ಥಳೀಯ ಮುಖಂಡರೊಂದಿಗೆ ಚರ್ಚಿಸಿ ಸೂಕ್ತ ಅಭ್ಯರ್ಥಿ ಶಿಫಾರಸ್ಸಿಗೆ ಜ.1ರ ಗಡುವು ● ಗೆಲ್ಲುವಂತಹ ಅಭ್ಯರ್ಥಿಗಳ ಆಯ್ಕೆಗೆ ಆದ್ಯತೆ ನೀಡುವ ಉದ್ದೇಶ

ಬೆಂಗಳೂರು, ಡಿ.21(ಕೆಎಂಶಿ)–ಕಾಂಗ್ರೆಸ್‌ನ 37 ಜಿಲ್ಲಾ ಘಟಕಗಳ ವ್ಯಾಪ್ತಿಗೊಳಪಡುವ ವಿಧಾನಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಉಸ್ತುವಾರಿ ಸಮಿತಿ ರಚಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮೈಸೂರು ನಗರ ವ್ಯಾಪ್ತಿಗೆ ಮಾಜಿ ಸಚಿವ ಬಿ.ರಮಾನಾಥ ರೈ, ಜಿಲ್ಲಾ ವ್ಯಾಪ್ತಿಗೆ ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ಅವರನ್ನು ನೇಮಕ ಮಾಡಿದ್ದಾರೆ.

ವಿಧಾನಪರಿಷತ್ ಸದಸ್ಯ ಕೆ.ಗೋವಿಂದರಾಜು ಅವರಿಗೆ ಮಂಡ್ಯ, ಮಾಜಿ ಸಚಿವ ಡಾ. ಎಂ.ಆರ್. ಸೀತಾರಾಮ್ ಅವರಿಗೆ ಚಾಮರಾಜನಗರ, ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರಿಗೆ ಕೊಡಗು, ಸಂಸದ ಡಿ.ಕೆ.ಸುರೇಶ್ ಅವರಿಗೆ ಹಾಸನ ಜಿಲ್ಲೆಯ ಉಸ್ತುವಾರಿಯನ್ನು ವಹಿಸಲಾಗಿದೆ.

ನೇಮಕಗೊಂಡಿರುವ ಉಸ್ತುವಾರಿಗಳು ಆಯಾ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಆಕಾಂಕ್ಷಿಗಳ ಪೈಕಿ ಸೂಕ್ತ ಅಭ್ಯರ್ಥಿಗಳ ಆಯ್ಕೆ ಮಾಡುವ ಸಂಬಂಧ ಪಕ್ಷದ ಸ್ಥಳೀಯ ಹಿರಿಯ ನಾಯಕರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿ, ಕೆಪಿಸಿಸಿ ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸಿ, ಸೂಕ್ತ ಅಭ್ಯರ್ಥಿಗಳ ಪಟ್ಟಿಯನ್ನು ಗೌಪ್ಯವಾಗಿ ಜನವರಿ 1, 2023 ರೊಳಗೆ ರಾಜ್ಯ ಕಚೇರಿಗೆ ತಲುಪಿಸುವಂತೆ ಅಧ್ಯಕ್ಷರು ಆದೇಶಿಸಿದ್ದಾರೆ. ಜಿಲ್ಲಾ ಸಮಿತಿಯವರು ಪ್ರತಿ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿಗಳ ಪೈಕಿ ಸೂಕ್ತ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವ ಮುನ್ನ ತಳಮಟ್ಟದಿಂದ ಕೂಡ ಅಭಿಪ್ರಾಯ ಸಂಗ್ರಹಣೆ ಮಾಡಬೇಕು. ಇದಕ್ಕಾಗಿ ಪ್ರತಿ ಕ್ಷೇತ್ರದಿಂದ ಕೆಳಮಟ್ಟದ ಕಾರ್ಯಕರ್ತರನ್ನು ಕರೆಸಿ, ಅವರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಬೇಕು. ಆನಂತರ ಕಾರ್ಯಕರ್ತರು ಮತ್ತು ನಾಯಕರ ಸಭೆ ನಡೆಸಿ, ಬ್ಲಾಕ್ ಸಮಿತಿ ಅಭಿಪ್ರಾಯ ಪಡೆಯಬೇಕು. ಚುನಾವಣಾ ಸಮಿತಿಯು ಕ್ಷೇತ್ರವಾರು ಸಭೆಗಳನ್ನು ಜಿಲ್ಲಾ ಕಾಂಗ್ರೆಸ್ ಕಚೇರಿ ಅಥವಾ ಸಮುದಾಯದ ಭವನದಲ್ಲಿ ನಿಗದಿಪಡಿಸಿದ ಸಮಯದಲ್ಲೇ ಜರುಗಿಸಬೇಕು. ಯಾವುದೇ ಮನೆ ಇಲ್ಲವೇ ವೈಯಕ್ತಿಕ ಕಚೇರಿಗಳಲ್ಲಿ ನಡೆಸಬಾರದು. ಈ ಸಭೆಯ ನಡಾವಳಿಗಳನ್ನು ವಿಡಿಯೋ ಮತ್ತು ಧ್ವನಿ ಮುದ್ರಣದ ಮೂಲಕ ದಾಖಲಿಸಿಕೊಳ್ಳಬೇಕು. ಚುನಾವಣೆಯಲ್ಲಿ ಗೆಲ್ಲುವಂತಹ ಸೂಕ್ತ ಅಭ್ಯರ್ಥಿಗೆ ಆದ್ಯತೆ ನೀಡುವುದರ ಜೊತೆಗೆ ಅವರ ಹಿನ್ನೆಲೆ, ಕ್ಷೇತ್ರದಲ್ಲಿ ಅವರಿಗೆ ಇರುವ ಮಾನ್ಯತೆ, ಅಕ್ಕಪಕ್ಕದ ಕ್ಷೇತ್ರಗಳಲ್ಲಿ ಅವರು ಹೊಂದಿರುವ ಪ್ರಭಾವ ಹಾಗೂ ಚುನಾವಣೆಯನ್ನು ಎಲ್ಲರ ಸಹಕಾರ ಪಡೆದು, ನಿರ್ವಹಿಸಬಲ್ಲ ಸಾಮರ್ಥ್ಯ ಮತ್ತು ಸಂಪನ್ಮೂಲ ಮುಂತಾದ ವಿಷಯಗಳ ಬಗ್ಗೆ ಕೂಡಾ ಗಮನಹರಿಸಬೇಕು. ಪಕ್ಷದ ಸಿದ್ಧಾಂತದಂತೆ ಸಾಮಾಜಿಕ ನ್ಯಾಯ ಒದಗಿಸಲು ಮೊದಲ ಆದ್ಯತೆ ಕೊಡಬೇಕು ಎಂದು ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಸಮಾಜಘಾತುಕ ಶಕ್ತಿಗಳು ಹಾಗೂ ಕೋಮುವಾದ ಪ್ರಚೋದಿಸುವವರಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದಿಲ್ಲ. ಆರ್ಥಿಕವಾಗಿ ಬಲಿಷ್ಠ ಮತ್ತು ಕ್ಷೇತ್ರದಲ್ಲಿ ಜನ ಬೆಂಬಲ ಇರುವವರಿಗೆ ಟಿಕೆಟ್ ನೀಡಲು ಮೊದಲ ಆದ್ಯತೆ ಕಲ್ಪಿಸುವುದಾಗಿ ಕೆಪಿಸಿಸಿ ತಿಳಿಸಿದೆ.

ಬೆಳಗಾವಿಯಲ್ಲಿ ನಡೆದ ಚುನಾವಣಾ ಸಮಿತಿಯ ತೀರ್ಮಾನದಂತೆ ಪ್ರತಿ ಜಿಲ್ಲೆಗೂ ಅಭ್ಯರ್ಥಿಗಳ ಆಯ್ಕೆ ಉಸ್ತುವಾರಿಯನ್ನು ನೇಮಿಸಲಾಗಿದೆ ಎಂದು ಶಿವಕುಮಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.


ಬಿ.ರಮಾನಾಥ ರೈ


ಎನ್.ಚೆಲುವರಾಯಸ್ವಾಮಿ


ಕೆ.ಗೋವಿಂದರಾಜು


ಡಾ.ಎಂ.ಆರ್.ಸೀತಾರಾಮ್


ಡಾ.ಹೆಚ್.ಸಿ.ಮಹದೇವಪ್ಪ


ಡಿ.ಕೆ.ಸುರೇಶ್

ಕೃಷಿ ಭೂಮಿ ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸುವ ವಿಧಾನ ಸರಳ



ಬೆಳಗಾವಿ: ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತಿಸುವ ವಿಧಾನವನ್ನು ಸರ್ಕಾರ ಇನ್ನಷ್ಟು ಸರಳೀಕರಣಗೊಳಿಸಿದೆ. ಈ ಸಂಬಂಧ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿಂದು ಮಾತನಾಡಿದ ಅವರು, ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95(2)ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಭೋಗದಾರನು ಅಂತಹ ಜಮೀನನ್ನು ಅಥವಾ ಅದರ ಯಾವುದೇ ▶ 9ನೇ ಪುಟಕ್ಕೆ


ವಿಮಾನ ನಿಲ್ದಾಣಗಳಲ್ಲಿ ಚೀನಾ ಸೇರಿದಂತೆ ವಿದೇಶದಿಂದ ಬರುವ ಪ್ರಯಾಣಿಕರಿಗೆ ಮತ್ತೆ ಕೋವಿಡ್ ಪರೀಕ್ಷೆ ಆರಂಭ



ನವದೆಹಲಿ: ಚೀನಾ ಸೇರಿದಂತೆ ವಿಶ್ವದ ಹಲವು ದೇಶಗಳಲ್ಲಿ ಮತ್ತೆ ಮಹಾಮಾರಿ ಕೊರೊನಾ ವೈರಸ್ ಉಲ್ಬಣಗೊಂಡಿದ್ದು, ಇದನ್ನು ಗಮನದಲ್ಲಿಟ್ಟುಕೊಂಡು ಚೀನಾ ಸೇರಿದಂತೆ ಇತರ ದೇಶಗಳಿಂದ ಆಗಮಿಸುವ ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ವಿಮಾನ ನಿಲ್ದಾಣಗಳಲ್ಲಿ ಮತ್ತೆ ಕೋವಿಡ್ ಪರೀಕ್ಷೆ ನಡೆಸಲಾಗುವುದು ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ. ದೇಶದಲ್ಲಿನ ಕೋವಿಡ್ ಪರಿಸ್ಥಿತಿಯನ್ನು ಪರಿಶೀಲಿಸಲು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ▶ 9ನೇ ಪುಟಕ್ಕೆ

ಕೋವಿಡ್ ರೂಪಾಂತರಿ ಬಗ್ಗೆ ಎಚ್ಚರವಿರಲಿ; ಆತಂಕ ಬೇಡ

ತಜ್ಞರು, ಹಿರಿಯ ಅಧಿಕಾರಿಗಳೊಂದಿಗಿನ ಸಭೆ ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ



ಬೆಂಗಳೂರು, ಡಿ.21(ಕೆಎಂಶಿ)– ಕೋವಿಡ್‌ನಲ್ಲಿ ಹೊಸ ರೂಪಾಂತರಿ ವೈರಸ್‌ಗಳ ಬಗ್ಗೆ ಎಚ್ಚರವಿರಲಿ, ಆದರೆ ಆತಂಕಪಡುವುದು ಬೇಡ ಎಂದು ಸರ್ಕಾರ ತಿಳಿಸಿದೆ. ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ರೂಪಾಂತರ ತಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಜ್ಞರು ಮತ್ತು ಹಿರಿಯ ಅಧಿಕಾರಿಗಳ ಜೊತೆಗೆ ಸಮಾಲೋಚನೆ ನಡೆಸಿದ ನಂತರ ಈ ಎಚ್ಚರಿಕೆ ನೀಡಿದ್ದಾರೆ. ವೈರಸ್ ತಡೆಗೆ ಕೇಂದ್ರದ ಮಾರ್ಗಸೂಚಿ ಜಾರಿಗೊಂಡ ನಂತರ ಅದನ್ನು ರಾಜ್ಯ ಸರ್ಕಾರವೂ ಅನುಷ್ಠಾನಗೊಳಿಸಲು ತೀರ್ಮಾನಿಸಿದೆ. ಆದರೆ ಮುನ್ನೆಚ್ಚರಿಕೆ ಕ್ರಮವಾಗಿ ಆರ್ಥಿಕ ಚಟುವಟಿಕೆಗೆ ತೊಂದರೆಯಾಗದಂತೆ ಸಾರ್ವಜನಿಕ ಪ್ರದೇಶಗಳಲ್ಲಿ ಕೆಲವು ಬಿಗಿ ನಿಲುವುಗಳನ್ನು ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ವಾಣಿಜ್ಯ ನಗರ ಪ್ರದೇಶಗಳಲ್ಲಿ ಮಾಸ್ಕ್ ಕಡ್ಡಾಯಗೊಳಿಸುವ ಬಗ್ಗೆಯು ಸರ್ಕಾರ ಚಿಂತನೆ ಮಾಡಿದೆ. ಅದರಲ್ಲೂ ರೈಲು, ಬಸ್, ಮಾಲ್, ಸಿನಿಮಾ ಮಂದಿರ ಹಾಗೂ ಜನದಟ್ಟಣೆ ಪ್ರದೇಶಗಳಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲು ಮುಂದಾಗಿದೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ▶ 9ನೇ ಪುಟಕ್ಕೆ

ಮತ್ತೆ ಶುರುವಾದ ಕೋವಿಡ್ ಆತಂಕ

ತಜ್ಞರೊಂದಿಗೆ ಸಭೆ ನಡೆಸಿದ ಕೇಂದ್ರ ಆರೋಗ್ಯ ಸಚಿವ

ನವದೆಹಲಿ: ಚೀನಾ, ದಕ್ಷಿಣ ಕೊರಿಯಾ, ಅಮೆರಿಕಾ, ಜಪಾನ್ ಮತ್ತು ಬ್ರೆಜಿಲ್‌ನಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಳವನ್ನು ಗಮನದಲ್ಲಿಟ್ಟುಕೊಂಡು ಮತ್ತೊಂದು ಆರೋಗ್ಯ ಬಿಕ್ಕಟ್ಟನ್ನು ತಪ್ಪಿಸಲು ದೇಶದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ.

ಈ ಸಂಬಂಧ ದೇಶದ ಕೋವಿಡ್ –19 ಪರಿಸ್ಥಿತಿಯನ್ನು ಪರಿಶೀಲಿಸಲು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯ ಅವರು ಇಂದು ದೆಹಲಿಯಲ್ಲಿ ತಜ್ಞರ ತಂಡದೊಂದಿಗೆ ಸಭೆ ನಡೆಸಿದರು.

ಸಭೆಯಲ್ಲಿ ಆರೋಗ್ಯ ಮತ್ತು ಆಯುಷ್ ಸಚಿವಾಲಯದ ಕಾರ್ಯದರ್ಶಿಗಳು, ಫಾರ್ಮಸ್ಯುಟಿಕಲ್ಸ್ ಮತ್ತು ಬಯೋಟೆಕ್ನಾಲಜಿ ವಿಭಾಗ, ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ನಿರ್ದೇಶಕ ರಾಜೀವ್ ಬೇಲ್, ನೀತಿ ಆಯೋಗ (ಆರೋಗ್ಯ) ಸದಸ್ಯ ವಿ.ಕೆ ಪೌಲ್ ಮತ್ತು ನ್ಯಾಷನಲ್ ಟೆಕ್ನಿಕಲ್ ಅಡ್ವಸರಿ ಗ್ರೂಪ್ ಆನ್ ಇಮ್ಯುನೈಜೇಷನ್ ಅಧ್ಯಕ್ಷ ಎನ್.ಎಲ್ ಆರೋರಾ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಪ್ರಸ್ತುತ ಚೀನಾ ಜೊತೆಗೆ ಜಪಾನ್, ಅಮೆರಿಕ, ಕೊರಿಯಾ ಮತ್ತು ಬ್ರೆಜಿಲ್ ದೇಶಗಳಲ್ಲಿಯೂ ಕೊರೊನಾ ಸೋಂಕು ವ್ಯಾಪಿಸಿದೆ. ಈ ಹಿನ್ನೆಲೆಯಲ್ಲಿ ಜಿನೋಮ್ ಸೀಕ್ವೆನ್ಸಿಂಗ್ ಬಗ್ಗೆ ಭಾರತ ಸರ್ಕಾರ ತೆಗೆದುಕೊಂಡಿರುವ ನಿರ್ಧಾರವು ಮಹತ್ವ ಪಡೆದಿದೆ. ▶ 9ನೇ ಪುಟಕ್ಕೆ

ಜನಸಂದಣಿ ಇರುವ ಸ್ಥಳಗಳಲ್ಲಿ ಮಾಸ್ಕ್ ಬಳಸಿ; ಕೋವಿಡ್ ಬೂಸ್ಟರ್ ಡೋಸ್ ತೆಗೆದುಕೊಳ್ಳಿ



ನವದೆಹಲಿ: ಭಾರತದ ಅರ್ಹ ಜನಸಂಖ್ಯೆಯ ಶೇ.27 ರಿಂದ 28ರಷ್ಟು ಜನರು ಮಾತ್ರ ಕೋವಿಡ್–19ರ ಬೂಸ್ಟರ್‌ಡೋಸ್ ಅನ್ನು ತೆಗೆದುಕೊಂಡಿದ್ದಾರೆ ಮತ್ತು ಜನನಿಬಿಡ ಸ್ಥಳಗಳಲ್ಲಿ ಜಾಗ್ರತೆ ವಹಿಸಲು ಮತ್ತು ಮಾಸ್ಕ್ ಧರಿಸಲು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ.ವಿಕೆ ಪೌಲ್ ಬುಧವಾರ ಸಲಹೆ ನೀಡಿದ್ದಾರೆ. ಜನರು ಭಯಭೀತರಾಗಬೇಡಿ ಎಂದ ಅವರು, ಅಂತರರಾಷ್ಟ್ರೀಯ ವಿಮಾನ ಪ್ರಯಾಣದ ಮಾರ್ಗಸೂಚಿಗಳಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು. 'ಜನಸಂದಣಿ ಇರುವ ಪ್ರದೇಶಗಳಲ್ಲಿ ಜನರು ಮಾಸ್ಕ್ ಧರಿಸಬೇಕು. ಹೃದಯ ರೋಗ, ಬಿಪಿ, ಉಸಿರಾಟದ ತೊಂದರೆ ಇರುವವರು ಅಥವಾ ವಯಸ್ಸಾದವರು ವಿಶೇಷವಾಗಿ ಇದನ್ನು ಅನುಸರಿಸಬೇಕು' ಎಂದು ಪೌಲ್ ಹೇಳಿದರು. ಜಾಗತಿಕವಾಗಿ, ವಿಶೇಷವಾಗಿ ಚೀನಾದಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಳದ ಮಧ್ಯೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ಅವರು ನಡೆಸಿದ ಪರಿಶೀಲನಾ ಸಭೆಯ ನಂತರ ಪೌಲ್ ಈ ಹೇಳಿಕೆಗಳನ್ನು ನೀಡಿದ್ದಾರೆ. 'ಕೆಲವು ದೇಶಗಳಲ್ಲಿ ಹೆಚ್ಚುತ್ತಿರುವ ಕೋವಿಡ್–19 ಪ್ರಕರಣಗಳ ದೃಷ್ಟಿಯಿಂದ, ನಾನು ಇಂದು ▶ 9ನೇ ಪುಟಕ್ಕೆ

ಸೋಮವಾರ ದೆಹಲಿಗೆ ಮುಖ್ಯಮಂತ್ರಿ ಬೊಮ್ಮಾಯಿ

● ರಾಜ್ಯ ಸಚಿವ ಸಂಪುಟ ವಿಸ್ತರಣೆಗೆ ಮತ್ತೆ ರೆಕ್ಕೆಪುಕ್ಕ
● ಸಿಎಂ ಭೇಟಿಯಾದ ಈಶ್ವರಪ್ಪ, ರಮೇಶ್ ಜಾರಕಿಹೊಳಿ

ಬೆಳಗಾವಿ, ಡಿ.21–ವಿಧಾನಸಭಾ ಚುನಾವಣೆಗೆ ಕೇವಲ ನಾಲ್ಕೈದು ತಿಂಗಳಷ್ಟೇ ಬಾಕಿ ಉಳಿದಿದ್ದು, ಬಹು ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ರಾಜ್ಯ ಸಚಿವ ಸಂಪುಟ ವಿಸ್ತರಣೆಗೆ ವರಿಷ್ಠರಿಂದ ಅನುಮತಿ ಪಡೆಯಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ದೆಹಲಿಗೆ ತೆರಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಸೋಮವಾರ ಅಧಿವೇಶನ ಮುಗಿದ ಬಳಿಕ ದೆಹಲಿಗೆ ತೆರಳಲಿರುವ ಮುಖ್ಯಮಂತ್ರಿಗಳು, ಸಂಪುಟ ವಿಸ್ತರಣೆ ಕುರಿತು ವರಿಷ್ಠರ ಜೊತೆ ಚರ್ಚಿಸಲಿದ್ದಾರೆ ಎನ್ನಲಾಗಿದ್ದು, ಶತಾಯ–ಗತಾಯ ಈ ಬಾರಿ ಸಂಪುಟ ವಿಸ್ತರಣೆಗೆ ಅನುಮತಿ ಪಡೆಯುವ ವಿಶ್ವಾಸವನ್ನು ಮುಖ್ಯಮಂತ್ರಿಗಳು ಹೊಂದಿದ್ದಾರೆ.

ತಮಗೆ ಕ್ಲೀನ್ ಚಿಟ್ ದೊರೆತಿದ್ದರೂ, ಮತ್ತೆ ಸಂಪುಟದಲ್ಲಿ ಸ್ಥಾನ ಕೊಡಲಿಲ್ಲವೆಂದು ಮುನಿಸಿಕೊಂಡು ಕಳೆದ ಮೂರು ದಿನದಿಂದ ಸದನಕ್ಕೆ ಗೈರುಹಾಜರಾಗಿದ್ದ ಕೆ.ಎಸ್.ಈಶ್ವರಪ್ಪ ಮತ್ತು ರಮೇಶ್ ಜಾರಕಿಹೊಳಿ ಇಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ತಮ್ಮ ಅಳಲು ತೋಡಿಕೊಂಡರು.

ಮುಡಾ ಅಧ್ಯಕ್ಷರಾಗಿ ಯಶಸ್ವಿ ಎಸ್.ಸೋಮಶೇಖರ್ ಅಧಿಕಾರ ಸ್ವೀಕಾರ

ಮೈಸೂರು, ಡಿ. 21(ಆರ್‌ಕೆ)–ಮುಡಾ ಅಧ್ಯಕ್ಷರಾಗಿ ಬಿಜೆಪಿ ಹಿರಿಯ ಮುಖಂಡ ಹಾಗೂ ಹೆಸರಾಂತ ಉದ್ಯಮಿ ಯಶಸ್ವಿ ಎಸ್.ಸೋಮಶೇಖರ್ ಇಂದು ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡರು.

ಹೆಚ್.ವಿ. ರಾಜೀವ್ ಅವರ ಅಧಿಕಾರ ಅಂತ್ಯಗೊಂಡ ನಂತರ ಕಳೆದ 5 ತಿಂಗಳಿಂದ ಖಾಲಿ ಇದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಧ್ಯಕ್ಷ ಸ್ಥಾನಕ್ಕೆ ಮಂಗಳವಾರ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಅಧಿಕಾರ ವಹಿಸಿಕೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಯಶಸ್ವಿ ಸೋಮಶೇಖರ್, ನನ್ನ ಮೇಲೆ ವಿಶ್ವಾಸವಿಟ್ಟು ಸರ್ಕಾರ ನನ್ನನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಿಸಿದೆ. ಮೈಸೂರು ನಗರದ ಸಮಗ್ರ ಅಭಿವೃದ್ಧಿಗಾಗಿ ಲಭ್ಯವಿರುವ ಕಡಿಮೆ ಅವಧಿಯಲ್ಲಿ ಉತ್ತಮವಾಗಿ ಕೆಲಸ ಮಾಡಿ, ಸರ್ಕಾರಕ್ಕೆ ಒಳ್ಳೆಯ ಹೆಸರು ತರಲು ಯತ್ನಿಸುತ್ತೇನೆ ಎಂದರು. ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಮುಗಿಸಿ ಪ್ರಸ್ತಾಪಿತ ಹೊಸ ಯೋಜನೆಗಳಿಗೆ ಸರ್ಕಾರದ ಹಂತದಲ್ಲಿ ಪ್ರಕ್ರಿಯೆ ನಡೆಸಿ ಅನುಮೋದನೆ ಪಡೆದುಕೊಂಡು ಕಾರ್ಯಗತ ಮಾಡುತ್ತೇವೆ ಎಂದು ಅವರು ಇದೇ ಸಂದರ್ಭ ನುಡಿದರು. ಕಬಿನಿ ಕುಡಿಯುವ ನೀರು ಸರಬರಾಜು, ಸಿಎ ನಿವೇಶನಗಳ ಹಂಚಿಕೆ, ಗುಂಪು ಮನೆ ನಿರ್ಮಾಣ, ಪೆರಿಫೆರಲ್ ರಸ್ತೆ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳ ▶ 9ನೇ ಪುಟಕ್ಕೆ



ಮುಡಾ ಅಧ್ಯಕ್ಷರಾಗಿ ಬುಧವಾರ ಅಧಿಕಾರ ವಹಿಸಿಕೊಂಡ ಯಶಸ್ವಿ ಎಸ್. ಸೋಮಶೇಖರ್ ಅವರನ್ನು ಶಾಸಕ ಎಲ್. ನಾಗೇಂದ್ರ, ಮಾಜಿ ವಿಧಾನಪರಿಷತ್ ಸದಸ್ಯರಾದ ಡಿ. ಮಾದೇಗೌಡ, ತೋಂಟದಾರ್ಯ, ಅರುಣ್‌ಕುಮಾರ್‌ಗೌಡ ಇತರರು ಅಭಿನಂದಿಸಿದರು.

ದಶಪಥ ರಸ್ತೆ ಕಾಮಗಾರಿ ಅವೈಜ್ಞಾನಿಕ



ನವದೆಹಲಿ: ಬೆಂಗಳೂರು–ಮೈಸೂರು ನಡುವಿನ ದಶಪಥ ಕಾಮಗಾರಿವನ್ನು ಅವೈಜ್ಞಾನಿಕವಾಗಿ ನಡೆಸಲಾಗಿದೆ. ಜತೆಗೆ, ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಆರೋಪಿಸಿದರು.

ಲೋಕಸಭೆಯಲ್ಲಿ ಬುಧವಾರ ಈ ಬಗ್ಗೆ ಪ್ರಸ್ತಾಪಿಸಿದ ಅವರು, ಮೈಸೂರು ಮತ್ತು ಬೆಂಗ ಳೂರು ನಡುವಿನ ಪ್ರಯಾಣದ ಅವಧಿ ಕಡಿತ ಮಾಡುವ ಉದ್ದೇಶದಿಂದ ಈ ಕಾಮಗಾರಿ ನಡೆಸಲಾಗುತ್ತಿದೆ. ಮಂಡ್ಯ ಕ್ಷೇತ್ರದ ಮೂಲಕ ಈ ಯೋಜನೆ ಹಾದು ಹೋಗುತ್ತದೆ. ಆದರೆ, ಇತ್ತೀಚೆಗೆ ಸುರಿದ ಮಳೆಯಿಂದಾಗಿ ಸಾಕಷ್ಟು ಅನಾಹುತ ಸಂಭವಿಸಿದೆ ಎಂದರು. ರಸ್ತೆಗೆ ಹಾಕಲಾಗಿದ್ದ ಡಾಂಬರು ಸಂಪೂರ್ಣವಾಗಿ ಕೊಚ್ಚಿ ಹೋಗಿದೆ. ಗುಣಮಟ್ಟದ ರಸ್ತೆ ನಿರ್ಮಿಸಿಲ್ಲ. ಅವೈಜ್ಞಾನಿಕ ವಿಧಾನ ಅಳವಡಿಸಲಾಗಿದೆ ಎಂದರು.

ಮೈಸೂರು–ಬೆಂಗಳೂರು ಹೆದ್ದಾರಿಗೆ 'ಕಾವೇರಿ ಎಕ್ಸ್‌ಪ್ರೆಸ್ ವೇ' ನಾಮಕರಣಕ್ಕೆ ಸಂಸದ ಪ್ರತಾಪ್ ಸಿಂಹ ಮನವಿ

● ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಂದ ಸಕಾರಾತ್ಮಕ ಸ್ಪಂದನೆ
● ರಾಜ್ಯದಲ್ಲಿ ಇನ್ನು 6 ರಾಷ್ಟ್ರೀಯ ಹೆದ್ದಾರಿ ಘೋಷಣೆಗೂ ಮನವಿ



ನವದೆಹಲಿಯಲ್ಲಿ ಬುಧವಾರ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಸಂಸದ ಪ್ರತಾಪ್ ಸಿಂಹ ಭೇಟಿ ಮಾಡಿ ಮನವಿ ಸಲ್ಲಿಸಿದರು.

ಮೈಸೂರು,ಡಿ.21(ಪಿಎಂ)–ಪ್ರಸ್ತುತ ನಿರ್ಮಾಣವಾಗುತ್ತಿರುವ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ 'ಕಾವೇರಿ ಎಕ್ಸ್‌ಪ್ರೆಸ್ ವೇ' ಎಂದು ನಾಮಕರಣ ಮಾಡಬೇಕು ಎಂಬುದು ಸೇರಿದಂತೆ ರಾಜ್ಯದ 6 ರಾಜ್ಯ ಹೆದ್ದಾರಿಗಳನ್ನು 'ರಾಷ್ಟ್ರೀಯ ಹೆದ್ದಾರಿ'ಯಾಗಿ ಘೋಷಿಸಬೇಕೆಂಬ ಸಂಸದ ಪ್ರತಾಪ್‌ಸಿಂಹ ಅವರ ಮನವಿಗೆ ಕೇಂದ್ರ ಭೂ ಸಾರಿಗೆ, ಹೆದ್ದಾರಿ ಹಾಗೂ ಸಾರಿಗೆ ಸಚಿವ ನಿತಿನ್‌ಗಡ್ಕರಿ ಸಕಾರಾತ್ಮಕವಾಗಿ ▶ 9ನೇ ಪುಟಕ್ಕೆ

ಕೇಂದ್ರದಿಂದ ಚಾಮುಂಡಿಬೆಟ್ಟದ ಅಭಿವೃದ್ಧಿಗೆ 48.21 ಕೋಟಿ, ವಸ್ತು ಪ್ರದರ್ಶನ ಪ್ರಾಧಿಕಾರದ ಮೈದಾನ ಅಭಿವೃದ್ಧಿಗೆ ಕನಿಷ್ಠ 100 ಕೋಟಿ ಅನುದಾನ

ಮೈಸೂರು,ಡಿ.21(ಪಿಎಂ)– ಚಾಮುಂಡಿಬೆಟ್ಟ ಮತ್ತು ಮೈಸೂರಿನ ವಸ್ತು ಪ್ರದರ್ಶನ ಪ್ರಾಧಿಕಾರದ ಮೈದಾನದ ಅಭಿವೃದ್ಧಿಗೆ ಅನುದಾನ ನೀಡಲು ಕೇಂದ್ರ ಸರ್ಕಾರ ಅಂಗೀಕಾರ ನೀಡಿದೆ ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ಅಭಿವೃದ್ಧಿಗೆ 'ಪ್ರಸಾದ್' ಯೋಜನೆಯಡಿ 48.21 ಕೋಟಿ ರೂ. ಅನುದಾನ ಮತ್ತು ಮೈಸೂರಿನ ವಸ್ತು ಪ್ರದರ್ಶನ ಪ್ರಾಧಿಕಾರದ ಮೈದಾನದ ಅಭಿವೃದ್ಧಿಗೆ 'ಸ್ವದೇಶ್ ದರ್ಶನ್' ಯೋಜನೆಯಡಿ ಅನುದಾನ (ಕನಿಷ್ಠ 100 ಕೋಟಿ) ನೀಡಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಪ್ರವಾಸೋದ್ಯಮ ಸಚಿವ ಕಿಶನ್ ರೆಡ್ಡಿಯವರಿಗೆ ಧನ್ಯವಾದ ತಿಳಿಸುವುದಾಗಿ ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.



ಕೇಂದ್ರ ಪ್ರವಾಸೋದ್ಯಮ ಸಚಿವ ಕಿಶನ್ ರೆಡ್ಡಿಯವರಿಗೆ ಹೂಗುಚ್ಛ ನೀಡಿ ಸಂಸದ ಪ್ರತಾಪ್ ಸಿಂಹ ಧನ್ಯವಾದ ತಿಳಿಸಿದರು.

ಬೆಂಗಳೂರು–ಮೈಸೂರು ದಶಪಥ ರಸ್ತೆ: ಮಂಡ್ಯ ಜಿಲ್ಲೆಗೆ ಅನ್ಯಾಯ

● ಮದ್ದೂರು ಪ್ರವೇಶಕ್ಕೆ ಚನ್ನಪಟ್ಟಣ ತಾಲೂಕಿನಲ್ಲಿ ಅವಕಾಶ: ಶಾಸಕ ದಿನೇಶ್ ಗೂಳಿಗೌಡ ಅಸಮಾಧಾನ ● ನಿಡಘಟ್ಟದ ಬಳಿ ಹೆದ್ದಾರಿಗೆ ಆಗಮನ–ನಿರ್ಗಮನ ಸಂಪರ್ಕ ವ್ಯವಸ್ಥೆ ಕಲ್ಪಿಸಲು ಆಗ್ರಹ



ಬೆಳಗಾವಿ: ಬೆಂಗಳೂರು–ಮೈಸೂರು ರಸ್ತೆಯ ಅಭಿವೃದ್ಧಿ ಕಾಮಗಾರಿಯಲ್ಲಿ ಮಂಡ್ಯ ಜಿಲ್ಲೆಯ ಗಡಿ ಭಾಗ ನಿಡಘಟ್ಟದ ಬಳಿ ಹೆದ್ದಾರಿಗೆ ಆಗಮನ–ನಿರ್ಗಮನ ಸಂಪರ್ಕ ವ್ಯವಸ್ಥೆ ನೀಡಿರುವುದು ಸಮರ್ಪಕವಾಗಿಲ್ಲ. ಅದೇ ರೀತಿ ಮದ್ದೂರು ಪಟ್ಟಣಕ್ಕೆ ಚನ್ನಪಟ್ಟಣ ತಾಲೂಕಿನ ಚಾಮುಂಡೇಶ್ವರಿ ಆಸ್ಪತ್ರೆ ಬಳಿ ಸಂಪರ್ಕಕ್ಕೆ ಅವಕಾಶ ನೀಡಲಾಗಿದೆ. ಇದು ಸರಿಯಾದ ಕ್ರಮವಲ್ಲ. ತಕ್ಷಣ ಈ ಕುರಿತು ಬಹಿರಂಗ ಚರ್ಚೆ ಆಗಬೇಕು ಎಂದು ಸ್ಥಳೀಯ ಸಂಸ್ಥೆಗಳ ಮಂಡ್ಯ ಕ್ಷೇತ್ರದ ಶಾಸಕ ದಿನೇಶ್ ಗೂಳಿಗೌಡ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಬೆಂಗಳೂರು–ಮೈಸೂರು ಹೆದ್ದಾರಿ ರಸ್ತೆಗೆ ಮಂಡ್ಯ ಜಿಲ್ಲೆಗೆ ಆಗಮನ–ನಿರ್ಗಮನ ನಿಡಘಟ್ಟದ ಬಳಿ ನೀಡಿರುವ ಸಂಪರ್ಕ ವ್ಯವಸ್ಥೆ ಕುರಿತು ಶಾಸಕರು ಕೇಳಿದ ಪ್ರಶ್ನೆಗೆ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ್ ಸದನದಲ್ಲಿ ಉತ್ತರ ನೀಡಿದ್ದಾರೆ.

ಆದರೆ, ಸಚಿವರ ಉತ್ತರಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ಶಾಸಕ ದಿನೇಶ್ ಗೂಳಿಗೌಡ, ಹೆದ್ದಾರಿ ಉದ್ಘಾಟನೆಗೆ ಮೊದಲು ಚರ್ಚೆ ಆಗಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಕೆ.ಗೋಪಾಲಯ್ಯ, ಸಂಸದರು ಹಾಗೂ ನಾನು ಮಂಡ್ಯ ಜಿಲ್ಲೆಯ ಗಡಿ ಭಾಗವಾದ ನಿಡಘಟ್ಟದ ಬಳಿ ಹೆದ್ದಾರಿಗೆ ಆಗಮನ–ನಿರ್ಗಮನ ಸಂಪರ್ಕ ಕಲ್ಪಿಸುವ ಸಂಬಂಧಪಟ್ಟ ಪ್ರಾಜೆಕ್ಟ್ ಡೈರೆಕ್ಟರ್ ಜೊತೆ ಸ್ಥಳ ಪರಿಶೀಲಿಸಲಾಗಿತ್ತು. ಆ ಸಂದರ್ಭದಲ್ಲಿ ಮಂಡ್ಯ ಜಿಲ್ಲೆ ಗಡಿ ವ್ಯಾಪ್ತಿಯಲ್ಲಿ ▶ 9ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 22 ಡಿಸೆಂಬರ್ 2022

ಕುಂಟುತ್ತಾ ಸಾಗಿರುವ ಮಡಿಕೇರಿ ಐತಿಹಾಸಿಕ ಕೋಟೆ ಅರಮನೆ ಕಾಮಗಾರಿ

ಜಿಲ್ಲಾಧಿಕಾರಿ, ಪ್ರಾಚ್ಯ ವಸ್ತು ಇಲಾಖೆ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ



ಮಡಿಕೇರಿ, ಡಿ.21– ಕೊಡಗಿನಲ್ಲಿ ಹಾಲೇರಿ ರಾಜವಂಶಸ್ಥರ ಆಳ್ವಿಕೆಯ ಕುರುಹಾಗಿ ಜಿಲ್ಲಾ ಕೇಂದ್ರ ಮಡಿಕೇರಿಯ ಹೃದಯ ಭಾಗ ದಲ್ಲಿರುವ ಶಿಥಿಲಗೊಂಡಿರುವ ಐತಿಹಾಸಿಕ ಕೋಟೆ ಅರಮನೆಯ ದುರಸ್ತಿ ಕಾರ್ಯ ವಿಳಂಬ ಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಮತ್ತು ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಡಿಕೇರಿ ಕೋಟೆ ಅರಮನೆಯಲ್ಲಿ ಇತ್ತೀಚಿನ ವರ್ಷಗಳವರೆಗೂ ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯ್ತಿ ಹಾಗೂ ಇವುಗಳಿಗೆ ಸಂಬಂಧಿಸಿದ ಕಚೇರಿಗಳು ಕಾರ್ಯ ನಿರ್ವಹಿಸುತ್ತಿದ್ದವು. ಪ್ರಾಚೀನ ಸ್ಮಾರಕವಾಗಿ ಪರಿಗಣಿಸಲ್ಪಟ್ಟಿರುವ ಕೋಟೆ ಅರಮನೆಯನ್ನು ತೆರವುಗೊಳಿಸುವಂತೆ ಕೇಂದ್ರ ಪುರಾತತ್ವ ಇಲಾಖೆ ಸೂಚಿಸಿದ ಹಿನ್ನೆಲೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿಗಳು ಅವುಗಳದ್ದೇ ಆದ ನೂತನ ಭವನಗಳಿಗೆ ಸ್ಥಳಾಂತರಗೊಂಡಿವೆ. ಇಂದು ಕಚೇರಿಗಳಿಲ್ಲದೆ ಖಾಲಿ ಹೊಡೆಯುತ್ತಿರುವ ಅರಮನೆಯ ದುರಸ್ತಿ ಕಾರ್ಯದ ಬಗ್ಗೆ, ಅಂದು ಅರಮನೆ ಖಾಲಿ ಮಾಡಲು ತೋರಿದ್ದ ಚುರುಕುತನವನ್ನು ಪ್ರಾಚ್ಯವಸ್ತು ಇಲಾಖೆ ತೋರದಿರುವುದು ಎದ್ದು ಕಾಣುತ್ತದೆ.

ಕೋಟೆ ಅರಮನೆ ದುರಸ್ತಿಗೆ ಕ್ರಮ ಕೈಗೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಜಿಲ್ಲೆಯ ಕೊಡ್ಲಿಪೇಟೆ ನಿವಾಸಿ ರಾಜ್ಯ ಮಾಹಿತಿ ಹಕ್ಕು ಆಯೋಗದ ಮಾಜಿ ಆಯುಕ್ತ ವಿರೂಪಾಕ್ಷಯ್ಯ ಅವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ನಂತರದ ದಿನಗಳಲ್ಲಿ ರಾಜ್ಯ ಸರ್ಕಾರ ಅರಮನೆ ದುರಸ್ತಿಗೆ 10.93 ಕೋಟಿ ರೂ.ಗಳನ್ನು ಪ್ರಾಚ್ಯವಸ್ತು ಇಲಾಖೆಗೆ ಒದಗಿಸಿತ್ತು. ಇದಕ್ಕೆ ಸಂಬಂಧಿಸಿದಂತೆ ಕಾರ್ಯ ಯೋಜನೆಯ ವಿಸ್ತೃತ ವರದಿ(ಡಿಪಿಆರ್)ಯನ್ನು ಪ್ರಾಚ್ಯವಸ್ತು ಇಲಾಖೆ ಸಿದ್ಧಪಡಿಸಿದ್ದಲ್ಲದೆ, ಇದನ್ನು ನ್ಯಾಯಾಲಯಕ್ಕೂ ಸಲ್ಲಿಸಿತ್ತು.

ಆಮೆ ನಡಿಗೆಯ ಕಾಮಗಾರಿ: ಕೋಟೆ ಅರಮನೆ ರಕ್ಷಣೆಯ ಚಿಂತನೆಯಡಿ ನ್ಯಾಯಾಲಯದ ಮೊರೆ ಹೋಗಿರುವ ವಿರೂಪಾಕ್ಷಯ್ಯ ಕಾಮಗಾರಿಯ ಪ್ರಗತಿಯನ್ನು ವೀಕ್ಷಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಕಳೆದ ಆಗಸ್ಟ್‌ನಿಂದ ಇಲ್ಲಿಯವರೆಗೂ ನಿರೀಕ್ಷಿತ ಕಾಮಗಾರಿ ನಡೆದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು. ಕಾಮಗಾರಿ ಉದ್ದೇಶಿತ ಸ್ವರೂಪದಲ್ಲಿ ನಡೆಯದಿರುವ ಬಗ್ಗೆಯೂ ತಾವು ವಕೀಲ ರವೀಂದ್ರ ಕಾಮತ್ ಅವರ ಮೂಲಕ ನ್ಯಾಯಾಲಯದ ಗಮನ ಸೆಳೆದಿದ್ದೇವೆ. ಈ ಹಿನ್ನೆಲೆ ನ್ಯಾಯಾಲಯ ವರದಿ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚನೆಯನ್ನು ನೀಡಿದೆ. ಪ್ರಸ್ತುತ ಕಾಮಗಾರಿಯ ವಿವರಗಳನ್ನು ಜಿಲ್ಲಾಡಳಿತ ನ್ಯಾಯಾಲಯಕ್ಕೆ ಒದಗಿಸಬೇಕಾಗುತ್ತದೆ ಎಂದು ಹೇಳಿದರು. ಹಾಸನದ ಹಳೇಬೀಡುವಿನ ಯುನೆಸ್ಕೋದಿಂದ ಮಾನ್ಯ ಮಾಡಲಾದ ಸ್ಮಾರಕದ ದುರಸ್ತಿ ಕಾರ್ಯಕ್ಕೆ ಇಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಬಳಸಿಕೊಂಡಿರುವ ಹಿನ್ನೆಲೆಯಲ್ಲಿ ಇಲ್ಲಿನ ಕಾಮಗಾರಿ ಕುಂಟಿತವಾಗಿದೆ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಪ್ರಾಚ್ಯವಸ್ತು ಇಲಾಖೆಯ ಸೂಪರಿಂಟೆಂಡೆಂಟ್ ಆರ್ಕಿಯಾಲಜಿಸ್ಟ್ ಬಿಪಿನ್ ಚಂದ್ರ ನೇಗಿ ಮಾತನಾಡಿ, ಕೋಟೆ ಅರಮನೆಯ ಕಾಮಗಾರಿಯನ್ನು ನಿರೀಕ್ಷಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮವಹಿಸ ಲಾಗುವುದು. ಮಳೆಗಾಲದ ಆರಂಭದ ಒಳಗೆ ಛಾವಣಿಯ ಕಾರ್ಯಗಳನ್ನು ಪೂರ್ಣಗೊಳಿಸಲಾಗುತ್ತದೆ. ನಂತರ ಒಳಾಂಗಣ ಕಾಮಗಾರಿಗಳನ್ನು ಆದಷ್ಟು ಶೀಘ್ರ ಪೂರ್ಣ ಗೊಳಿಸುವುದಾಗಿ ಹೇಳಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಮಾತನಾಡಿ, ಕೋಟೆ ಅರಮನೆ ಕಾಮಗಾರಿಯ ಟೆಂಡರ್ ಕಾಮಗಾರಿಯ ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಿ ವರದಿಯನ್ನು ನ್ಯಾಯಾಲಯಕ್ಕೆ ನೀಡಲಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭ ಅರ್ಜಿದಾರರ ಪರ ವಕೀಲ ರವೀಂದ್ರ ಕಾಮತ್, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ನಾಗರಾಜು, ಮಡಿಕೇರಿ ತಹಶೀಲ್ದಾರ್ ಮಹೇಶ್, ಪ್ರಾಚ್ಯವಸ್ತು ಇಲಾಖೆಯ ಇಂಜಿನಿಯರ್ ಸೋಮ್ಲು ನಾಯಕ್, ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿ ರೇಖಾ ಮತ್ತಿತರರು ಹಾಜರಿದ್ದರು.

ಹಳೇ ವಿಧಾನ ಬಳಕೆ: ಪ್ರಸ್ತುತ ಕೋಟೆ ಅರಮನೆಯ ಶಿಥಿಲಗೊಂಡ ಗೋಡೆಯ ಮೇಲ್ಪದರವನ್ನು ತೆಗೆಯಲಾಗಿದ್ದು, ಇದನ್ನು ಸಿಮೆಂಟ್ ಬದಲಾಗಿ ಹಿಂದಿನ ಕಾಲದ ಪದ್ಧತಿಯಂತೆ ಪ್ಲಾಸ್ಟರಿಂಗ್ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಹಿಂದೆ ಸರ್ಕಾರಿ ಕಚೇರಿಗಳು ನಡೆಯುತ್ತಿದ್ದ ಅವಧಿಯಲ್ಲಿ ಅರಮನೆ ಕೊಠಡಿಗಳನ್ನು ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿದ್ದರು. ಇಂದು ಅವುಗಳನ್ನೆಲ್ಲ ತೆರವುಗೊಳಿಸಿ ಮೂಲ ಸ್ವರೂಪಕ್ಕೆ ತರುವ ಪ್ರಯತ್ನಗಳು ನಡೆಯುತ್ತಿದೆ. ಅರಮನೆಯ ಬಹುತೇಕ ಕಡೆ ಹಳೆಯ ಮರದ ಛಾವಣಿ, ಕಂಬಗಳು ಶಿಥಿಲಗೊಂಡಿವೆ. ಇವುಗಳ ದುರಸ್ತಿ ಸೇರಿದಂತೆ ಒಟ್ಟಾಗಿ ಮೂಲ ಸ್ವರೂಪದಲ್ಲಿ ಅರಮನೆಯ ಸಂರಕ್ಷಣಾ ಕಾರ್ಯ ನಡೆಯಬೇಕಾಗಿದೆ.

ಹುಲಿ ದಾಳಿಗೆ ಗರ್ಭಿಣಿ ಹಸು ಸಾವು



ಗೋಣಿಕೊಪ್ಪ, ಡಿ.21– ಟಿ.ಶೆಟ್ಟಿ ಗೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹರಿಹರ ಗ್ರಾಮದಲ್ಲಿ ಮಂಗಳವಾರ ರಾತ್ರಿ ಹುಲಿ ದಾಳಿಗೆ ಮರಡ ಜಗನ್ ಎಂಬುವರ ಗರ್ಭಿಣಿ ಹಸು ಸಾವಿಗೀ ಡಾಗಿದೆ. ಕೊಟ್ಟಿಗೆ ಸಮೀಪ ಕಟ್ಟಿದ್ದ ಹಸುವಿನ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ. ಸ್ಥಳಕ್ಕೆ ಉಪ ವಲಯ ಅರಣ್ಯ ಅಧಿಕಾರಿ ಗಣೇಶ್, ದಿವಾಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿರಾಜಪೇಟೆ ತಾಲೂಕು ಬಿಜೆಪಿ ಕೃಷಿ ಮೋರ್ಚಾದ ಪದಾಧಿಕಾರಿಗಳು ಸ್ಥಳಕ್ಕೆ ತೆರಳಿ ಹುಲಿ ಸೆರೆಗೆ ಆಗ್ರಹಿಸಿದರು. ಮೋರ್ಚಾ ಅಧ್ಯಕ್ಷ ಕಟ್ಟೇರ ಈಶ್ವರ ತಿಮ್ಮಯ್ಯ ಮಾತನಾಡಿ, ನಿರಂತರ ದಾಳಿಯಿಂದ ರೈತರಿಗೆ ನಷ್ಟ ಹೆಚ್ಚಾಗುತ್ತಿದೆ. ಕಾಫಿ ಕೊಯ್ಲು ಸಮಯವಾಗಿರುವುದರಿಂದ ಭಯದ ವಾತಾವರಣ ವಿದೆ. ಕೋತೂರು, ಹರಿಹರ ಗ್ರಾಮಗಳಲ್ಲಿ ಜನರ ಮೇಲೆ ಹುಲಿ ದಾಳಿ ಮಾಡಿತ್ತು. ಆದರೆ, ಹುಲಿ ಸೆರೆಯಾಗಿಲ್ಲ. ಅಧಿಕಾರಿಗಳು ಭರವಸೆ ನೀಡಿ ಕಾಲಹರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಟಿ.ಶೆಟ್ಟಿಗೇರಿ ಗ್ರಾಪಂ ಸದಸ್ಯರಾದ ಮನ್ನೇರ ಅಜಿತ್, ಮರಡ ವನೀತ, ಮೋರ್ಚಾದ ಪ್ರಮುಖರಾದ ಬಾಚೀರ ರಾಜ, ಬೋಪಣ್ಣ, ಮನ್ನೇರ ರೋಷನ್, ಮನೇರ ಸುನಿ, ಪೆಮ್ಮಣಮಾಡ ಸುನಿ, ಪೆಮ್ಮಣಮಾಡ ಪೊನ್ನಣ್ಣ, ಚಿಮ್ಮಣೀರ ವಿಜು, ಚಿಮ್ಮಣೀರ ಮಿನು, ಪೆಮ್ಮಣಮಾಡ ಸತೀಶ್, ಪೆಮ್ಮಣ್ಣಮಾಡ ಸುರೇಶ್, ತೀತೀರ ಮಂಜು, ತೀತೀರ ಸೋಮಣ್ಣ, ಚಿಂಡಮಾಡ ತರುಣ್ ಇದ್ದರು.

ವಿಶ್ವ ಕರಾಟೆ ತಾಂತ್ರಿಕ ಸಮಾವೇಶದಲ್ಲಿ ಉತ್ತಮ ಸಾಧನೆ

ಕೊಡಗಿನ ಸಮೃದ್ ತಮ್ಮಯ್ಯಗೆ 'ಫಸ್ಟ್ ಡ್ಯಾನ್' ಪ್ರಶಸ್ತಿ



ಮಡಿಕೇರಿ, ಡಿ.21– ಸಿಂಗಾಪುರದಲ್ಲಿ ಜರುಗಿದ ವಿಶ್ವ ಶಿಟೋರಿಯೋ ಕರಾಟೆ ಡೋ ಫೆಡರೇಷನ್ ಆಶ್ರಯದ ತಾಂತ್ರಿಕ ಸಮಾವೇಶದಲ್ಲಿ ಬಿ.ಸಮೃದ್ ತಮ್ಮಯ್ಯ ಹಿರಿಯರ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಿ ಉತ್ತಮ ಸಾಧನೆ ತೋರಿದ್ದಾರೆ. ಅತ್ಯುತ್ತಮ ಸಾಧನೆಗಾಗಿ ಸಮೃದ್ ಅವರಿಗೆ 'ಫಸ್ಟ್ ಡ್ಯಾನ್' ಪ್ರಶಸ್ತಿಯನ್ನು ವಿಶ್ವ ಶಿಟೋರಿಯೋ ಕರಾಟೆಡೋ ಫೆಡರೇಷನ್ ಅಧ್ಯಕ್ಷ ಸೆನ್ಸೆ ಗೆಂಜೋ ಇವಾಟ ಪ್ರದಾನ ಮಾಡಿದರು.

25 ದೇಶಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದ ಈ ಸಮಾವೇಶದಲ್ಲಿ ಭಾರತದ ಸಮೃದ್ ತಮ್ಮಯ್ಯ ಅತ್ಯಂತ ಕಿರಿಯ ಪ್ರತಿನಿಧಿಯಾಗಿದ್ದರು. ಸಮೃದ್ ತಮ್ಮಯ್ಯ ಗೋಣಿಕೊಪ್ಪ ನಿವಾಸಿ ಬೊಮ್ಮಂಡ ಜಯಂತ್ ಬೋಪಣ್ಣ ಮತ್ತು ರೇಷ್ಮಾ (ತಾಮನೆ ಪಟ್ಟಮಾಡ) ದಂಪತಿ ಪುತ್ರನಾಗಿದ್ದಾರೆ.

ಇವರು ಚೆಪ್ಪುಡೀರ ಅರುಣ್ ಮಾಚಯ್ಯ ಮಾರ್ಗದರ್ಶನದಲ್ಲಿ ಬೆಂಗಳೂರಿನ ಶಿಟೋರಿಯೋ ಕರಾಟೆ ಶಾಲೆಯ ತರಬೇತುದಾರ ಜಗದೀಶ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ವಿಧಾನಸೌಧದ ಸಭಾಂಗಣದಲ್ಲಿ ಫೀ.ಮಾ. ಕೆ.ಎಂ. ಕಾರ್ಯಪ್ಪ ಭಾವಚಿತ್ರ ಅಳವಡಿಸಲು ಮನವಿ

ಮಡಿಕೇರಿ, ಡಿ.21– ವಿಧಾನ ಸೌಧದ ಸಭಾಂಗಣದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭಾವಚಿತ್ರ ಅಳವಡಿಸಲು ಶಾಸಕ ಅಪ್ಪಚ್ಚು ರಂಜನ್ ಮನವಿ ಮಾಡಿದ್ದಾರೆ.

ಈ ಕುರಿತು ವಿಧಾನ ಸಭಾ ಅಧ್ಯಕ್ಷರಿಗೆ ಪತ್ರ ಬರೆದಿರುವ ಶಾಸಕ ರಂಜನ್, ಇತರ ಹಲವಾರು ಗಣ್ಯರ ಭಾವಚಿತ್ರ ಅಳವಡಿಸಿದಂತೆ ಭಾರತದ ಸೇನೆಯ ಪ್ರಥಮ ಮಹಾ ದಂಡನಾಯಕ ಕರ್ನಾಟಕದ ಹೆಮ್ಮೆಯ ಕೊಡಗಿನ ವೀರ ಪುತ್ರ ಫೀಲ್ಡ್ ಮಾರ್ಷಲ್ ಕೆ ಎಂ. ಕಾರ್ಯಪ್ಪ ಅವರ ಭಾವಚಿತ್ರ ಅಳವಡಿಸಬೇಕು. ಈ ಮೂಲಕ ಭಾರತದ ವೀರ ಯೋಧರಿಗೆ ಹಾಗೂ ಕೊಡವರಿಗೆ ಗೌರವ ಸಮರ್ಪಿಸಬೇಕೆಂದು ಶಾಸಕ ಅಪ್ಪಚ್ಚು ರಂಜನ್ ಒತ್ತಾಯಿಸಿದ್ದಾರೆ.

ಹೆಲಿಕಾಪ್ಟರ್‌ನಿಂದ ಹೂ ಮಳೆ, ಹೆಚ್‌ಡಿಕೆಗೆ ಬೃಹತ್ ಜೋಳ, ಕಬ್ಬಿನ ಹಾರ

ಮದ್ದೂರಿನಲ್ಲಿ ಪಂಚರತ್ನ ಯಾತ್ರೆಗೆ ಅದ್ದೂರಿ ಸ್ವಾಗತ



ಮದ್ದೂರು, ಡಿ.21– ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಎರಡನೇ ದಿನದ ಪಂಚರತ್ನ ಯಾತ್ರೆ ಇಂದು ಮದ್ದೂರು ತಾಲೂಕಿಗೆ ಆಗಮಿಸಿದ್ದು, ಮದ್ದೂರಿನಲ್ಲಿ ಭರ್ಜರಿ ಪ್ರತಿಕ್ರಿಯೆ ಸಿಕ್ಕಿತು.

ಮಂಗಳವಾರ ಮಳವಳ್ಳಿ ತಾಲೂಕಿನಲ್ಲಿ ಯಶಸ್ವಿಗೊಂಡ ಪಾದಯಾತ್ರೆ ತಡರಾತ್ರಿ ಮುಕ್ತಾಯವಾಗಿ ಹೆಚ್ಡಿಕೆ, ಮಳವಳ್ಳಿ ತಾಲ್ಲೂಕಿನ ದುಗ್ಗನಹಳ್ಳಿ ಗ್ರಾಮದಲ್ಲಿ ಕುಮಾರಸ್ವಾಮಿ ವಾಸ್ತವ್ಯ ಹೂಡಿದ್ದರು. ಇಂದು ದುಗ್ಗನಹಳ್ಳಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ಬಳಿಕ ಉಪಹಾರ ಸೇವಿಸಿ, ಮದ್ದೂರಿನತ್ತ ಹೊರಟರು. ಭಾರತೀನಗರದಿಂದ ಆರಂಭವಾದ ಯಾತ್ರೆ, ಡಿ.ಎ.ಕೆರೆ ಗೇಟ್, ತೊರೆಚಾಕನಹಳ್ಳಿ, ಗುರುದೇವರಹಳ್ಳಿ, ನಗರಕೆರೆ ಮೂಲಕ ಮದ್ದೂರು ಟೌನ್ ಪ್ರವೇಶಿಸಿತು. ಅಲ್ಲಿಂದ ಕೆಸ್ತೂರು, ತೊರೆಶೆಟ್ಟಹಳ್ಳಿ, ಸೋಮನಹಳ್ಳಿ, ಹೆಮ್ಮನಹಳ್ಳಿ ಮಳ್ಳಿ, ಬೆಸಗರಹಳ್ಳಿ, ಚಾಮನಹಳ್ಳಿ ಮೂಲಕ ಮತ್ತೆ ಮದ್ದೂರು ಪ್ರವೇಶಿಸಿ ಗೆಜ್ಜಲಗೆರೆಯಲ್ಲಿ ಅಂತ್ಯವಾಯಿತು. ಹೆಚ್ಡಿಕೆ ಭಾರತೀನಗರ, ಮದ್ದೂರು ಹಾಗೂ ಗೆಜ್ಜಲಗೆರೆಯಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಡಿ.ಸಿ.ತಮ್ಮಣ್ಣ ಉತ್ತಮ ಜನಪ್ರತಿನಿಧಿ: ಮದ್ದೂರು ಕ್ಷೇತ್ರದ ಶಾಸಕರಾಗಿರುವ ಡಿ.ಸಿ.ತಮ್ಮಣ್ಣ ಅವರು ಉತ್ತಮ ಜನಪ್ರತಿನಿಧಿಯಾಗಿದ್ದು, ಉತ್ತಮ ಕೆಲಸಗಾರರಾಗಿದ್ದಾರೆ. ಅವರ ಜನಪರ ಕಾರ್ಯಗಳು ರಾಜ್ಯಕ್ಕೆ ಮಾದರಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಪ್ರಶಂಸೆ ವ್ಯಕ್ತಪಡಿಸಿದರು.

ರಾಜಧಾನಿ ಬೆಂಗಳೂರಿನ ಮೋಹ ಬಿಟ್ಟು ಮದ್ದೂರಿನಲ್ಲೇ ವಾರಕ್ಕೆ ಐದಾರು ದಿನ ವಾಸ್ತವ್ಯವಿದ್ದು ನಿಸ್ವಾರ್ಥ ಸೇವೆಗೆ ಮುಂದಾಗಿದ್ದಾರೆ. ನನ್ನಂತೆ ಅವರು ಸಹ ಆರೋಗ್ಯ ಲೆಕ್ಕಿಸದೆ ಜನ ಸಮುದಾಯಕ್ಕೆ ಒಳಿತು ಮಾಡಲು ಮುಂದಾಗಿದ್ದಾರೆ. ಇಂತಹ ಜನಪ್ರತಿನಿದಿ ವಿರುದ್ಧ ವ್ಯಕ್ತವಾಗಿರುವ ಅಪಪ್ರಚಾರಕ್ಕೆ ಮಣೆಹಾಕದೆ ಅವರನ್ನು ಚುನಾಯಿಸಿ ಕ್ಷೇತ್ರದ ಜನತೆ ಮುಂದಾಗಬೇಕೆಂದು ಮನವಿ ಮಾಡಿದರು.

ಅಸ್ವಸ್ಥರಾದ ತಮ್ಮಣ್ಣ: ಪಂಚರತ್ನ ರಥಯಾತ್ರೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಡಿ.ಸಿ.ತಮ್ಮಣ್ಣ ಅವರು ಬಿಸಿಲಿನ ಝಳಕ್ಕೆ ನಲುಗಿ ಹೆಚ್.ಡಿ.ಕುಮಾರಸ್ವಾಮಿ ಅವರು ಭಾಷಣ ಮಾಡುತ್ತಿದ್ದ ವೇಳೆಯಲ್ಲೇ ಕುಸಿದು ಬಿದ್ದರು. ಇದನ್ನು ಗಮನಿಸಿದ ಪುತ್ರಿ ಸೌಮ್ಯ ರಮೇಶ್ ಆತಂಕಗೊಂಡು ತಂದೆಯನ್ನು ಸಂತೈಸಲು ಮುಂದಾದರು.

ಸ್ಥಳದಲ್ಲಿದ್ದ ವೈದ್ಯರೊಬ್ಬರು ಬಂದು ಪರೀಕ್ಷಿಸಿದರು. ಸಕ್ಕರೆ ಅಂಶ ಕ್ಷೀಣಿಸಿದ ಪರಿಣಾಮ ಅಸ್ವಸ್ಥರಾಗಿದ್ದು ಆತಂಕಪಡುವ ಅಗತ್ಯ ಇಲ್ಲವೆಂದು ಕುಮಾರಸ್ವಾಮಿ ಜನರಲ್ಲಿ ಧೈರ್ಯ ತುಂಬಿದರು. ಅಷ್ಟರಲ್ಲಿ ತಮ್ಮಣ್ಣ ಚೇತರಿಸಿಕೊಂಡರು.

ರಥಯಾತ್ರೆಗೆ ಸ್ವಾಗತ: ರಾಜ್ಯದ ಎಲ್ಲೆಡೆ ಸಂಚರಿಸುತ್ತಿರುವ ಪಂಚರತ್ನ ರಥಯಾತ್ರೆ ಬುಧವಾರ ಮದ್ದೂರು ತಾಲೂಕಿನ ಗಡಿಗ್ರಾಮ ಮೆಳ್ಳಹಳ್ಳಿ ಬಳಿ ಆಗಮಿಸಿದಾಗ ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಜೆಡಿಎಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ನಾಯಕರನ್ನು ಸಂಭ್ರಮದಿಂದ ಸ್ವಾಗತಿಸಿದರು.

ಹೆಲಿಕಾಪ್ಟರ್ ಮೂಲಕ ಹೂಮಳೆ ಸುರಿಸುವ ಮೂಲಕ ಜೈಕಾರ ಹಾಕಿ, ಪಕ್ಷದ ಬಾವುಟ ಹಿಡಿದು ಸಂಭ್ರಮದಿಂದ ಪಂಚರತ್ನ ರಥಯಾತ್ರೆಯನ್ನು ಬರಮಾಡಿಕೊಂಡರು.

30 ಅಡಿ ಉದ್ದದ ಜೋಳ ಹಾಗೂ ಕಬ್ಬಿನ ಜಲ್ಲೆ ಹಾರ: ಅಭಿಮಾನಿಗಳು ಪಂಚರತ್ನ ರಥಯಾತ್ರೆ ಸ್ವಾಗತಿಸಿ ಕುಮಾರಸ್ವಾಮಿಗೆ ಭಾರತೀನಗರದಲ್ಲಿ 30 ಅಡಿ ಉದ್ದದ ಭಾರಿ ಗಾತ್ರದ ಜೋಳದ ಹಾರವನ್ನು ಕ್ರೇನ್ ಮೂಲಕ ಹಾಕಿದರು. ನಂತರ ಭಾರತೀನಗರ ಮಾರ್ಗವಾಗಿ ತೆರಳಿದ ಪಂಚರತ್ನ ರಥಯಾತ್ರೆಯನ್ನು ದೊಡ್ಡರಸಿನಕೆರೆ ಗೇಟ್‌ನಲ್ಲಿ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಹೊನ್ನೇಗೌಡ, ಮಂಚೇಗೌಡ ಹಾಗೂ ಗ್ರಾಮಸ್ಥರು ಸೇರಿ ಗೆಡ್ಡೆಕೋಸಿನ ಹಾರ, ಕಬ್ಬಿನ ಜಲ್ಲೆಹಾರ, ಗುರುದೇವರಹಳ್ಳಿ ಗ್ರಾಮದಲ್ಲಿ ಜೆಡಿಎಸ್ ಯುವಮುಖಂಡ ಅರವಿಂದ್ ಅವರ ನೇತೃತ್ವದಲ್ಲಿ 30 ಅಡಿ ಉದ್ದದ ಸುಮಾರು 800 ಕೆ.ಜಿ. ತೂಕದ ಕಬ್ಬಿನ ಜಲ್ಲೆ ಹಾರವನ್ನು ಕುಮಾರಸ್ವಾಮಿ ಅವರಿಗೆ ಕ್ರೇನ್ ಮೂಲಕ ಸಮರ್ಪಿಸಿದರು.

ಪಂಚರತ್ನದ ಬಗ್ಗೆ ತಾತ್ಸಾರ ಬೇಡ: ಬಡಜನರಿಗಾಗಿ, ಬಡ ಕುಟುಂಬಗಳಿಗಾಗಿ, ರಾಜ್ಯದ ಸುಧಾರಣೆಗಾಗಿ ಹಮ್ಮಿಕೊಂಡಿರುವ ಪಂಚರತ್ನ ಯೋಜನೆ ಬಗ್ಗೆ ಅನ್ಯ ಪಕ್ಷದ ಮುಖಂಡರು, ಕಾರ್ಯಕರ್ತರು ಅಪಪ್ರಚಾರ ಮಾಡುವುದು ಬೇಡ. ಸ್ವತಂತ್ರ ಸರ್ಕಾರ ಬಂದರೆ. ಈ ಪಂಚರತ್ನ ಯೋಜನೆಯನ್ನು ಜಾರಿಗೊಳಿಸಿ ಈ ರಾಜ್ಯದ ಬಡತನ ನಿರ್ಮೂಲನೆ ಮಾಡಲು ಮುಂದಾಗುತ್ತೇನೆ. ಇದು ನನ್ನ ಗುರಿ ಎಂದರು.

ಪಂಚರತ್ನ ಯಾತ್ರೆಯಲ್ಲಿ ಮಾಜಿ ಸಿಎಂಗೆ ಕ್ಷೇತ್ರದ ಶಾಸಕ ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಕೆ.ಟಿ.ಶ್ರೀಕಂಠೇಗೌಡ, ಕಲ್ಪನಾ ಸಿದ್ದರಾಜು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ತಮ್ಮಣ್ಣ ಪುತ್ರಿ ಡಾ.ಸೌಮ್ಯ ರಮೇಶ್ ಸೇರಿದಂತೆ ಸ್ಥಳೀಯ ಮುಖಂಡರು ಸಾಥ್ ನೀಡಿದರು.

ಸಂಪೂರ್ಣ ಬಹುಮತದೊಂದಿಗೆ ಜೆಡಿಎಸ್ ಸರ್ಕಾರ: ಎಚ್‌ಡಿಕೆ ವಿಶ್ವಾಸ

ಮಳವಳ್ಳಿ, ಡಿ.21– ರಾಜ್ಯದಲ್ಲಿ ಮೈತ್ರಿ ಸರ್ಕಾರ ಬರುವ ಸಾಧ್ಯತೆ ಇಲ್ಲ. ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸುತ್ತದೆ. ಇದನ್ನು ರಾಷ್ಟ್ರೀಯ ಪಕ್ಷಗಳಿಂದ ತಡೆಯಲು ಸಾಧ್ಯವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಬುಧವಾರ ತಾಲ್ಲೂಕಿನ ದುಗ್ಗನಹಳ್ಳಿಯಲ್ಲಿ ಗ್ರಾಮ ವಾಸ್ತವ್ಯದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ ಅನ್ನೋ ನಂಬಿಕೆ ಅವರ ಪಕ್ಷದವರಿಗೇ ಇಲ್ಲ. ರಾಜ್ಯದಲ್ಲಿ ಕಾಂಗ್ರೆಸ್ಸಿಗರ ಪರಿಸ್ಥಿತಿ ನೋಡಿದರೆ ಪಾಪ ಎನಿಸುತ್ತದೆ. ಚುನಾವಣಾ ಪೂರ್ವ ಸಮೀಕ್ಷೆಯಲ್ಲಿ ಬಹುಮತ ಬರಲಿದೆ ಎಂದು ಕಾಂಗ್ರೆಸ್ ಹಗಲುಗನಸು ಕಾಣುತ್ತಿದೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಸ್ವತಂತ್ರವಾಗಿ ಮೂರು ಬಾರಿ ಅಧಿಕಾರ ನಡೆಸಿದೆ. ಅದಾದ ನಂತರ ಒಂದು ಬಾರಿ 38, 2ನೇ ಬಾರಿ 62, ಇನ್ನೊಮ್ಮೆ 78 ಸ್ಥಾನ ಪಡೆಯಿತು. ಈ ಬಾರಿ ಅವರಿಗೆ ಗೆಲ್ಲುವ ಶಕ್ತಿ ಇರೋದು 50–70 ಸೀಟ್ ಅಷ್ಟೇ ಎಂದು ಭವಿಷ್ಯ ನುಡಿದರು.

ಮಂಡ್ಯ ಜಿಲ್ಲೆ ಜೆಡಿಎಸ್ ಭದ್ರಕೋಟೆ. ಜಿಲ್ಲೆಯಲ್ಲಿ ಕೆಲವು ವ್ಯತ್ಯಾಸವಾಗಿರಬಹುದು. ಇದಕ್ಕೆ ಜನ ಕಾರಣವಲ್ಲ. ವಿರೋಧ ಪಕ್ಷದ ನಾಯಕರು ಜೆಡಿಎಸ್ ಮುಗಿಸಲು ಹವಣಿಸುತ್ತಿದ್ದಾರೆ. ಕುತಂತ್ರದ ರಾಜಕಾರಣದಿಂದ ನಾವು ಕೆಲವು ಚುನಾವಣೆಯಲ್ಲಿ ಸೋತಿದ್ದೇವೆ ಅಷ್ಟೇ. ಜನರಿಂದ ನಾವು ಸೋತಿಲ್ಲ, ಜನರ ಬೆಂಬಲ ನಮಗೆ ಸದಾ ಇದೆ. ಮಂಡ್ಯ ಜಿಲ್ಲೆಯ ಜನತೆ ಜೆಡಿಎಸ್ ಅನ್ನು ಕೈ ಹಿಡಿಯುತ್ತಾರೆ. ಜನ ಅದಕ್ಕೆ ಈ ಬಾರಿ ತಕ್ಕ ಉತ್ತರ ನೀಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಗೋಷ್ಠಿಯಲ್ಲಿ ಶಾಸಕ ಡಾ.ಕೆ.ಅನ್ನದಾನಿ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ತಾಲೂಕು ಘಟಕದ ಅಧ್ಯಕ್ಷ ವಿಶ್ವನಾಥ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಕಂಸಾಗರ ರವಿ ಸೇರಿದಂತೆ ಇತರರು ಇದ್ದರು.

ನೇಣು ಬಿಗಿದುಕೊಂಡು ಯುವತಿ ಸಾವು

ಪಾಂಡವಪುರ, ಡಿ.21– ಹೊಟ್ಟೆನೋವು ತಾಳಲಾರದೆ ಯುವತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಜಕ್ಕನಹಳ್ಳಿ ಗ್ರಾಮದಲ್ಲಿ ಬುಧವಾರ ನಡೆದಿದೆ. ಗ್ರಾಮದ ಸಿದ್ದೇಗೌಡ ಎಂಬುವರ ಪುತ್ರಿ ತನುಶ್ರೀ(19) ನೇಣಿಗೆ ಶರಣಾದ ಯುವತಿ. ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೃತ ಯುವತಿ ಮೇಲುಕೋಟೆಯ ಶನೇಶ್ವರ ಡಿಪ್ಲೊಮಾ ಕಾಲೇಜಿನಲ್ಲಿ ಮೊದಲ ವರ್ಷದ ಡಿಪ್ಲೊಮಾ ಓದುತ್ತಿದ್ದಳು. ಇಂದು ಹೊಟ್ಟೆ ನೋವು ಇದ್ದ ಕಾರಣ ಕಾಲೇಜಿಗೆ ಹೋಗದೆ ಮನೆಯಲ್ಲಿಯೇ ಇದ್ದಳು ಎನ್ನಲಾಗಿದೆ. ಬುಧವಾರ ಮಧ್ಯಾಹ್ನ ಮನೆಯಲ್ಲಿ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾಳೆ.

ಪಾಂಡವಪುರದಲ್ಲಿ ಯುವಕ ನೇಣಿಗೆ ಶರಣು

ಪ್ರಿಯತಮೆ ಮನೆಯವರೇ ಆತ್ಮಹತ್ಯೆಗೆ ಕಾರಣ ಎಂದು ಆರೋಪಿಸಿ ಸಂಬಂಧಿಕರ ಪ್ರತಿಭಟನೆ



ಪಾಂಡವಪುರ, ಡಿ.21–ಯುವಕನೋರ್ವ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿದ್ದು, ಈತ ಪ್ರೀತಿಸುತ್ತಿದ್ದ ಯುವತಿ ಮನೆಯವರೇ ಆತ್ಮಹತ್ಯೆಗೆ ಕಾರಣ ಎಂದು ಸಂಬಂಧಿಕರು ಪ್ರತಿಭಟಿಸಿದ ಘಟನೆ ನಡೆದಿದೆ.

ತಾಲೂಕಿನ ಚಿಟ್ಟನಹಳ್ಳಿ ಗ್ರಾಮದ ಪುಣ್ಯವತಿ ಎಂಬುವರ ಪುತ್ರ ಪ್ರಜ್ವಲ್(22) ಆತ್ಮಹತ್ಯೆ ಮಾಡಿಕೊಂಡವನಾಗಿದ್ದು, ಈತ ಅದೇ ಗ್ರಾಮದ ಯುವತಿಯೋರ್ವಳನ್ನು ಪ್ರೀತಿಸುತ್ತಿದ್ದ ಎಂದು ಹೇಳಲಾಗಿದೆ. ಈ ವಿಚಾರ ತಿಳಿದು ಯುವತಿ ಮನೆಯವರು ಪ್ರಜ್ವಲ್‌ಗೆ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ನ್ಯಾಯ ಪಂಚಾಯಿತಿಯೂ ಕೂಡ ನಡೆದಿತ್ತಾದರೂ, ಯುವತಿಯೊಂದಿಗಿನ ಒಡನಾಟವನ್ನು ಈತ ಮುಂದುವರೆಸಿದ್ದ ರಿಂದ ಆಕೆಯ ಮನೆಯವರು ಮತ್ತೆ ಬೆದರಿಕೆ ಹಾಕಿದ್ದಾರೆ ಎಂದು ಹೇಳಲಾಗಿದೆ. ಇದರಿಂದ ಮನ ನೊಂದ ಪ್ರಜ್ವಲ್ ಪಾಂಡವಪುರದಲ್ಲಿರುವ ತನ್ನ ಚಿಕ್ಕಪ್ಪನ ಮನೆಗೆ ಬಂದು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಈತ ಪ್ರೀತಿಸಿದ ಯುವತಿಯ ಕುಟುಂಬದವರೇ ಆತ್ಮಹತ್ಯೆಗೆ ಕಾರಣವೆಂದು ಆರೋಪಿಸಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಪ್ರಜ್ವಲ್ ಸಂಬಂಧಿಕರು ಪಾಂಡವಪುರ ಸರ್ಕಾರಿ ಆಸ್ಪತ್ರೆಯ ಶವಾಗಾರದ ಮುಂದೆ ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು ಕ್ರಮ ಕೈಗೊಳ್ಳುವ ಭರವಸೆ ನೀಡಿದ ನಂತರ ಯುವತಿ ಕುಟುಂಬದವರ ವಿರುದ್ಧ ದೂರು ದಾಖಲಿಸಿ, ಪ್ರಜ್ವಲ್ ಸಂಬಂಧಿಕರು ಪ್ರತಿಭಟನೆ ಹಿಂಪಡೆದರು.

ಡಿ.ಕೆ.ಶಿವಕುಮಾರ್ ವಿರುದ್ಧ ಬಿಜೆಪಿ ಪ್ರತಿಭಟನೆ



ಚಾಮರಾಜನಗರ, ಡಿ.21– ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆ ಖಂಡಿಸಿ ನಗರದಲ್ಲಿ ಬಿಜೆಪಿಯಿಂದ ಪ್ರತಿಭಟನೆ ನಡೆಯಿತು.

ಇಲ್ಲಿನ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ಬಿಜೆಪಿ ಮುಖಂಡರು, ಕಾರ್ಯಕರ್ತರು ಡಿ.ಕೆ. ಶಿವಕುಮಾರ್ ವಿರುದ್ಧ ಘೋಷಣೆ ಕೂಗಿದರು. ಕಾಂಗ್ರೆಸ್ ಮುಖಂಡರು ಮತಬ್ಯಾಂಕ್‌ಗಾಗಿ ಮನಸೋಇಚ್ಛೆಯಂತೆ ಹೇಳಿಕೆ ಕೊಡುತ್ತಿದ್ದಾರೆ. ಈ ಮೂಲಕ ಪರೋಕ್ಷವಾಗಿ ಭಯೋತ್ಪಾದನೆಯನ್ನು ಬೆಂಬಲಿಸುತ್ತಿದ್ದಾರೆ. ಇಂತಹ ಹೇಳಿಕೆ ನೀಡುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಡಿ.ಕೆ.ಶಿವಕುಮಾರ್ ಅವರು ಭಯೋತ್ಪಾದಕರನ್ನು ಬೆಂಬಲಿಸುವ ರೀತಿಯಲ್ಲಿ ಮಾತನಾಡುವುದು ಯಾವ ರೀತಿಯಲ್ಲಿ ಸರಿ? ಕೂಡಲೇ ತಮ್ಮ ಹೇಳಿಕೆ ಹಿಂಪಡೆದು ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಜನಪ್ರತಿನಿಧಿ ಆದವರು ತಾವು ನೀಡುವ ಹೇಳಿಕೆಯ ಬಗ್ಗೆ ಸ್ಪಷ್ಟತೆ ಇರಬೇಕು. ಬಾಂಬ್ ಸ್ಫೋಟ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಡಿ.ಕೆ. ಶಿವಕುಮಾರ್ ಅವರು ಈ ರೀತಿ ಹೇಳಿಕೆ ಕೊಟ್ಟರೆ ಜನರಲ್ಲಿ ಗೊಂದಲ ಉಂಟಾಗುತ್ತದೆ. ತಮ್ಮ ಹೇಳಿಕೆ ಹಿಂಪಡೆಯದೆ ಇದ್ದರೆ ಪಕ್ಷದ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಪಂ ಮಾಜಿ ಅಧ್ಯಕ್ಷರಾದ ಜಿ. ನಾಗಶ್ರೀ ಪ್ರತಾಪ್, ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಕಿನಕನಹಳ್ಳಿ ರಾಚಯ್ಯ, ಎಪಿಎಂಸಿ ಅಧ್ಯಕ್ಷ ಎಂ. ಮನೋಜ್ ಪಟೇಲ್, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಮುಖಂಡರಾದ ಡಾ.ಎ.ಆರ್.ಬಾಬು, ಶಿವು ವಿರಾಟ್ ಸೇರಿದಂತೆ ಇತರರು ಇದ್ದರು.

ಸುವರ್ಣ ಸೌಧ ಮುತ್ತಿಗೆಗೆ ಜಿಲ್ಲೆಯ ಲಿಂಗಾಯತ ಸಮುದಾಯ ಸಾಥ್

ಚಾ.ನಗರದಿಂದ ಸಮುದಾಯದವರು ಬೆಳಗಾವಿಗೆ ಪ್ರಯಾಣ



ಚಾಮರಾಜನಗರ, ಡಿ.21– ಗೌಡ ಲಿಂಗಾಯಿತರು, ಪಂಚಮಸಾಲಿಗಳಿಗೆ 2ಎ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿ ಬೆಳಗಾವಿ ಸುವರ್ಣಸೌಧಕ್ಕೆ ಮುತ್ತಿಗೆ ಹಾಕುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಚಾಮರಾಜನಗರದಿಂದ ಐದು ಬಸ್ ಹಾಗೂ 10 ಖಾಸಗಿ ವಾಹನಗಳಲ್ಲಿ ಸಮುದಾಯದವರು ಪ್ರಯಾಣ ಬೆಳೆಸಿದರು.

ಈ ವೇಳೆ ಗೌಡ ಲಿಂಗಾಯತ–ಪಂಚಮಸಾಲಿ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕ ಅಮ್ಮನಪುರ ಮಲ್ಲೇಶ ಮಾತನಾಡಿ, ಗೌಡ ಲಿಂಗಾಯಿತ, ಪಂಚಮಸಾಲಿ, ದೀಕ್ಷೆ ಲಿಂಗಾಯತ ಹಾಗೂ ಮಲೆಗೌಡ ಲಿಂಗಾಯತರು ಒಂದೇ ಆಗಿದ್ದು, ಈ ನಾಲ್ಕು ಪಂಗಡಗಳಿಗೆ 2ಎ ಘೋಷಣೆ ಮಾಡಬೇಕೆಂದು ಒತ್ತಾಯಿಸಲು ಬೆಳಗಾವಿಯಲ್ಲಿ ಡಿ.22ರಂದು ಸುಮಾರು 25 ಲಕ್ಷಕ್ಕೂ ಹೆಚ್ಚಿನ ಸಂಖ್ಯೆ ಯಲ್ಲಿ ಸುವರ್ಣ ಸೌಧದ ಮುಂದೆ ಸಭೆ ನಡೆಯಲಿದ್ದು ಅಲ್ಲಿಗೆ ಮುಖ್ಯಮಂತ್ರಿಗಳು ಆಗಮಿಸಿ 2ಎ ಮೀಸಲಾತಿಯನ್ನು ಘೋಷಿಸಿದರೆ ಸಿಎಂ ಬೊಮ್ಮಾಯಿ ಅವರಿಗೆ ಸನ್ಮಾನ ಮಾಡಲಾಗುವುದು. ತಪ್ಪಿದಲ್ಲಿ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ತಿಳಿಸಿದರು.

ಗೌಡ ಲಿಂಗಾಯಿತ ಪಂಚಮಸಾಲಿಗಳಿಗೆ ಮೀಸಲಾತಿಗಾಗಿ ಕಳೆದ 25 ವರ್ಷಗಳಿಂದ ಸತತವಾಗಿ ಸರ್ಕಾರದೊಂದಿಗೆ ಹೋರಾಟ ಮಾಡುತ್ತಲೇ ಬಂದಿದ್ದು ಎಲ್ಲಾ ಸರ್ಕಾರಗಳು ಈ ಬಗ್ಗೆ ಗಂಭೀರವಾಗಿ ಕ್ರಮ ಕೈಗೊಳ್ಳದೆ ಈ ಜನಾಂಗಗಳಿಗೆ ಮೋಸ ಮಾಡಿವೆ. ಈಗ ಸಿಎಂ ಬೊಮ್ಮಾಯಿ ಅವರೊಂದಿಗೆ ಎರಡ್ಮೂರು ಸುತ್ತಿನ ಮಾತುಕತೆಯಾಗಿದ್ದು, ಆ ಸಂದರ್ಭದಲ್ಲಿ 2ಎ ಮೀಸಲಾತಿ ನೀಡುವುದಾಗಿ ಭರವಸೆ ನೀಡಿದ್ದರು. ಅಂತಿಮವಾಗಿ ಇದೇ ತಿಂಗಳು 19ರೊಳಗೆ ಮೀಸಲಾತಿ ಘೋಷಿಸಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ, ಇನ್ನೂ ಘೋಷಿಸಿಲ್ಲದ ಕಾರಣ ಹೋರಾಟ ಅನಿವಾರ್ಯವಾಗಿದ್ದು, ರಾಜ್ಯಾದಂತ ಲಿಂಗಾಯಿತ ಪಂಚಮಸಾಲಿ ಗೌಡ ಲಿಂಗಾಯಿತರು ಬೆಳಗಾವಿ ಸೌಧಕ್ಕೆ ಮುತ್ತಿಗೆ ಹಾಕಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಗುಂಡ್ಲುಪೇಟೆ, ವರುಣಾ, ನಂಜನಗೂಡು, ಹೆಗ್ಗಡದೇವನಕೋಟೆ, ನರಸೀಪುರ, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಗಳಿಂದ ಗೌಡ ಲಿಂಗಾಯಿತರು ಸಾವಿರಾರು ಸಂಖ್ಯೆಯಲ್ಲಿ ಈಗಾಗಲೇ ಬೆಳಗಾವಿ ತಲುಪಿದ್ದು, ಮಾಡು ಇಲ್ಲವೇ ಮಡಿ ಎಂಬ ಘೋಷಣೆಯೊಂದಿಗೆ ಹೋರಾಟಕ್ಕೆ ಇಳಿಯುತ್ತಿದ್ದೇವೆ ಎಂದು ಮಲ್ಲೇಶ್ ಹೇಳಿದರು.

ಪರಮಪೂಜ್ಯ ಬಸವ ಜಯ ಮೃತ್ಯುಂಜಯ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಬಸವರಾಜ್ ಪಾಟೀಲ್ ಯತ್ನಾಳ್, ವಿಜಯಾನಂದ ಕಾಶಪ್ಪನವರ್, ಬೆಲ್ಲದ್ ಶಿವಶಂಕರ್ ಮುಂತಾದವರ ನೇತೃತ್ವದಲ್ಲಿ ಹೋರಾಟಕ್ಕೆ ಧುಮುಕುತ್ತಿದ್ದೇವೆ ಎಂದು ಹೇಳಿದರು.

ಇಂದು ಜಿಲ್ಲಾ ಮಟ್ಟದ ಉದ್ಯೋಗ ಮೇಳ

ಚಾಮರಾಜನಗರ, ಡಿ.21– ಜಿಲ್ಲಾಡಳಿತ, ಜಿಪಂ ಮತ್ತು ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಕಾರ್ಯಕ್ರಮವನ್ನು ಡಿ.22ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ನಂಜನಗೂಡು, ಮೈಸೂರು ಹಾಗೂ ಬೆಂಗಳೂರಿನ 25ಕ್ಕೂ ಹೆಚ್ಚಿನ ಕಂಪೆನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ. ಎಸ್ಎಸ್ಎಲ್‌ಸಿ, ಪಿಯುಸಿ, ಐಟಿಐ ಹಾಗೂ ಡಿಪ್ಲೊಮಾ, ನರ್ಸಿಂಗ್, ಜಿ.ಡಿ.ಎ ಮತ್ತು ಎಲ್ಲಾ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯುಳ್ಳ 18 ರಿಂದ 35 ವರ್ಷ ವಯೋಮಿತಿಯೊಳಗಿನ ಪುರುಷ ಮತ್ತು ಮಹಿಳಾ ನಿರುದ್ಯೋಗಿಗಳು ಜಿಲ್ಲಾ ಮಟ್ಟದ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರಗಳನ್ನು ಕನಿಷ್ಠ 10 ಪ್ರತಿಗಳೊಂದಿಗೆ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಸಂದರ್ಶನಕ್ಕೆ ಹಾಜರಾಗುವ ಮೊದಲು ನೊಂದಣಿ ಕೌಂಟರ್‌ನಲ್ಲಿ ಕಡ್ಡಾಯವಾಗಿ ನೊಂದಣಿಯಾಗಬೇಕು. https://skillconnect.kaushalkar.com/candidatereg ಲಿಂಕ್ ಮೂಲಕವು ಸಹ ನೊಂದಾಯಿಸಿಕೊಳ್ಳಬಹುದು.

ಬಸ್ ನಿಲ್ದಾಣ ಕಾಮಗಾರಿ ವಿಳಂಬ ಖಂಡಿಸಿ ಕೆಆರ್‌ಎಸ್ ಪಾರ್ಟಿ ಪ್ರತಿಭಟನೆ



ಕೊಳ್ಳೇಗಾಲ, ಡಿ.21– ಕೊಳ್ಳೇಗಾಲ ಪಟ್ಟಣದ ಬಸ್ ನಿಲ್ದಾಣ ಕಾಮಗಾರಿ ಕುಂಟುತ್ತಾ ಸಾಗಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕ ಸೇವೆಗೆ ಸಮರ್ಪಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿಯ ಪದಾಧಿಕಾರಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಬಸ್ ನಿಲ್ದಾಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಡಾ.ವಿಷ್ಣು ರಸ್ತೆ, ಡಾ.ರಾಜ್‌ಕುಮಾರ್ ರಸ್ತೆ, ಮಸೀದಿ ವೃತ್ತ, ಡಾ.ಅಂಬೇಡ್ಕರ್ ರಸ್ತೆಯ ಮೂಲಕ ಸಾಗಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಗರಸಭೆಗೆ ತೆರಳಿ ಮನವಿ ಸಲ್ಲಿಸಿದರು.

ಕಳೆದ ನಾಲ್ಕೈದು ವರ್ಷಗಳ ಹಿಂದೆ ಬಸ್ ನಿಲ್ದಾಣ ಕಾಮಗಾರಿ ಆರಂಭವಾದರೂ ಇನ್ನು ಸಹ ಉದ್ಘಾಟನೆಯಾಗಿಲ್ಲ. ಇದರಿಂದ ಮಹಿಳೆಯರು, ವಿದ್ಯಾರ್ಥಿಗಳು ಬಹಳಷ್ಟು ಸಂಕಷ್ಟ ಎದುರಿಸುತ್ತಿದ್ದಾರೆ. ಕೂಡಲೇ ಬಸ್ ನಿಲ್ದಾಣ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರ ಅನುಕೂಲಕ್ಕೆ ಅನುವು ಮಾಡಿಕೊಡಬೇಕೆಂದು ಆಗ್ರಹಿಸಿದರು. ಸ್ಥಳಕ್ಕೆ ಆಗಮಿಸಿದ್ದ ಕೆಎಸ್‌ಆರ್‌ಟಿಸಿ ಇಂಜಿನಿಯರ್ ಮಹೇಶ್ ಹಾಗೂ ನಗರಸಭೆ ಎಇಇ ಸುರೇಶ್ ಮನವಿ ಸ್ವೀಕರಿಸಿ ಮಾತನಾಡಿ, ಇನ್ನೂ ಮೂರು ತಿಂಗಳಲ್ಲಿ ಬಸ್ ನಿಲ್ದಾಣವನ್ನು ಪೂರ್ಣಗೊಳಿಸುವುದಾಗಿ ಭರವಸೆ ನೀಡಿದ ಹಿನ್ನೆಲೆ ಪ್ರತಿಭಟನೆ ಕೈಬಿಟ್ಟರು. ಈ ವೇಳೆ ಕೆ.ಆರ್.ಎಸ್ ಪಕ್ಷ ಜಿಲ್ಲಾಧ್ಯಕ್ಷ ಶ್ರೀನಿವಾಸ್, ತಾಲೂಕು ಅಧ್ಯಕ್ಷ ಚಂದ್ರಶೇಖರ್, ಜಿಲ್ಲಾ ಉಪಾಧ್ಯಕ್ಷ ಗಣೇಶ್, ಕುಮಾರ್, ರಮೇಶ್, ಪ್ರದೀಪ್, ಮಧು, ಗಿರೀಶ್, ಶ್ರೀನಿವಾಸ್, ಹನೂರು ತಾಲೂಕು ಅಧ್ಯಕ್ಷ ರಾಜೇಂದ್ರ, ಮಹೇಶ್, ಮಧುನಾಯಕ್, ಚಾ.ನಗರ ಸೈಯದ್ ಸಮೀ, ಮಂಡ್ಯ ಅಧ್ಯಕ್ಷ ರಮೇಶ್ ಗೌಡ, ಸಿದ್ದರಾಜು ಇನ್ನಿತರರು ಇದ್ದರು.

ವಿಧಾನಪರಿಷತ್ ಸಭಾಪತಿಯಾಗಿ ಬಸವರಾಜ ಹೊರಟ್ಟಿ ಅವಿರೋಧ ಆಯ್ಕೆ



ಬೆಂಗಳೂರು, ಡಿ.21(ಕೆಎಂಶಿ)– ವಿಧಾನ ಪರಿಷತ್ ನೂತನ ಸಭಾಪತಿಯಾಗಿ ಬಿಜೆಪಿ ಹಿರಿಯ ಸದಸ್ಯ ಬಸವರಾಜ ಹೊರಟ್ಟಿ ಅವಿರೋಧವಾಗಿ ಆಯ್ಕೆಯಾದರು.

ಈ ಮೂಲಕ ಹೊರಟ್ಟಿ ಅವರು 3ನೇ ಸಲ ಸಭಾಪತಿ ಹುದ್ದೆ ಅಲಂಕರಿಸಿದ್ದಾರೆ. ಕುಂದಾನಗರಿ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿ ವೇಶನದಲ್ಲಿ ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ಚುನಾವಣೆ ನಡೆಯಿತು. ಕಲಾಪ ಆರಂಭಗೊಳ್ಳುತ್ತಿದ್ದಂತೆ ಹಂಗಾಮಿ ಸಭಾಪತಿ ರಘುನಾಥ್ ರಾವ್ ಮಲ್ಕಾಪುರೆ ಚುನಾವಣಾ ಪ್ರಕ್ರಿಯೆ ಕೈಗೆತ್ತಿಕೊಂಡರು. ಸಭಾಪತಿ ಸ್ಥಾನಕ್ಕೆ 4 ಪ್ರಸ್ತಾವ ಮಂಡಿಸಲಾಯಿತು.

ಸರ್ಕಾರಿ ಮುಖ್ಯ ಸಚೇತಕ ಡಾ.ವೈ.ಎ ನಾರಾಯಣ ಸ್ವಾಮಿ, ತೇಜಸ್ವಿನಿಗೌಡ, ಶಾಂತಾರಾಮ್ ಬುಡ್ನ ಸಿದ್ದಿ, ಅ.ದೇವೇಗೌಡ ಅವರು ಬಸವರಾಜ ಹೊರಟ್ಟಿ ಅವರನ್ನು ಪರಿಷತ್ತಿನ ಸಭಾಪತಿಯಾಗಿ ಆಯ್ಕೆ ಮಾಡಬೇಕೆಂದು ಸೂಚಿಸಿದರು. ಇದನ್ನು ಬಿಜೆಪಿಯ ಹಿರಿಯ ಸದಸ್ಯರಾದ ಆಯನೂರು ಮಂಜುನಾಥ್, ಆರ್.ಶಂಕರ್, ಸಂಕನೂರು, ಪ್ರದೀಪ್ ಶೆಟ್ಟರ್ ಅನುಮೋದಿಸಿದರು.

ಪ್ರತಿಪಕ್ಷಗಳಿಂದ ಯಾವುದೇ ಅಭ್ಯರ್ಥಿ ಕಣಕ್ಕಿಳಿಯದ ಕಾರಣ ನಾಮಪತ್ರ ಸಲ್ಲಿಸಿದ್ದ ಏಕೈಕ ಅಭ್ಯರ್ಥಿ ಬಸವರಾಜ ಹೊರಟ್ಟಿ ಅವರ ಪರವಿದ್ದ ನಾಲ್ಕೂ ಪ್ರಸ್ತಾವಗಳನ್ನು ಹಂಗಾಮಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಸದನದಲ್ಲಿ ಮಂಡಿಸಿದರು. ನಂತರ ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಲಾಯಿತು.

ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಭಾನಾಯಕ ಕೋಟಾ ಶ್ರೀನಿವಾಸ ಪೂಜಾರಿ, ಪ್ರತಿಪಕ್ಷ ನಾಯಕ ಬಿಕೆ ಹರಿಪ್ರಸಾದ್ ನೂತನ ಸಭಾಪತಿಯನ್ನು ಸಭಾಪತಿ ಪೀಠಕ್ಕೆ ಕರೆದೊಯ್ದರು. ಹಂಗಾಮಿ ಸಭಾಪತಿಗಳು ನೂತನ ಸಭಾಪತಿಗೆ ಹಸ್ತಲಾಘವ ಮಾಡಿ ಸಭಾಪತಿ ಪೀಠವನ್ನು ಹೊರಟ್ಟಿ ಅವರಿಗೆ ಬಿಟ್ಟುಕೊಟ್ಟರು.

ನಂತರ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ವಾತಂತ್ರ್ಯ ನಂತರ ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದ ಅಪಾರ ಅಭಿವೃದ್ಧಿಯಲ್ಲಿ ಬಸವರಾಜ ಹೊರಟ್ಟಿಯವರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು.

ಸದನದ ಹಿರಿಯ ಸದಸ್ಯರಾಗಿ ತಾವು ಹತ್ತು–ಹಲವು ಜವಾಬ್ದಾರಿಗಳನ್ನು ನಿಭಾಯಿಸಿ, ಎಲ್ಲರ ಸ್ನೇಹ ಮತ್ತು ವಿಶ್ವಾಸವನ್ನು ಗಳಿಸಿರುವ ಹಿನ್ನೆಲೆಯಲ್ಲಿ ಪಕ್ಷಾತೀತವಾಗಿ ತಮ್ಮನ್ನು ಆಯ್ಕೆ ಮಾಡಿರುವುದು ಪರಿಷತ್ತಿನ ಸರ್ವ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಿರಿಯರ ಸದನ ಎಂದು ಕರೆಯಲ್ಪಡುವ ವಿಧಾನಪರಿಷತ್ತಿನ ಕೀರ್ತಿಯಂತೆ ಎಲ್ಲರೂ ನಡೆದುಕೊಂಡಿರುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಧನ್ಯವಾದಗಳನ್ನು ಸಲ್ಲಿಸಿದರು. ಹೊರಟ್ಟಿಯವರು ನೇರಮಾತು ಮತ್ತು ನಿಷ್ಠುರವಾಗಿ ಕೆಲವು ಮಾತುಗಳನ್ನಾಡುವ ಸ್ವಭಾವದವರು. ಯಾರ ಬಗ್ಗೆಯೂ ಸಣ್ಣ ಕಲ್ಮಷವಿಲ್ಲದಂತೆ ನಡೆದು ಕೊಂಡಿದ್ದು, ಬಹಳ ಮಿತ್ರರನ್ನು ಸಂಪಾದಿಸಿದ್ದಾರೆ ಎಂದರು.

ಒಕ್ಕಲಿಗರ ಸಂಘದ ನಿರ್ದೇಶಕ ಮಂಜೇಗೌಡ ದಂಪತಿ ವಂಚನೆ ಕೇಸ್‌ಗೆ ಬಿ–ರಿಪೋರ್ಟ್



ಬೆಂಗಳೂರು,ಡಿ.21–ಮೆಡಿಕಲ್ ಸೀಟ್ ಕೊಡಿಸಲು 35 ಲಕ್ಷ ಪಡೆದು ವಂಚಿಸಲಾಗಿದೆ ಎಂಬ ಆರೋಪದಡಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ. ಮಂಜೇಗೌಡ ವಿರುದ್ಧ ದಾಖಲಾಗಿದ್ದ ಪ್ರಕರಣಕ್ಕೆ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ಬಿ–ರಿಪೋರ್ಟ್ (ಸುಳ್ಳು ದೂರು) ಸಲ್ಲಿಸಿದ್ದಾರೆ.

ತಮ್ಮ ಸಂಬಂಧಿಕರ ಮಗನಿಗೆ ಕಿಮ್ಸ್ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ 35 ಲಕ್ಷ ಪಡೆದು ವಂಚಿಸಲಾಗಿದೆ ಎಂದು ಬೆಂಗಳೂರಿನ ಹನುಮಂತನಗರ ನಿವಾಸಿ ಕೆ.ಆರ್.ಶ್ರೀನಿವಾಸ್ ಎಂಬುವರು ನ.23ರಂದು ಹೈಗ್ರೌಂಡ್ಸ್ ಠಾಣೆಯಲ್ಲಿ ಎಂ.ಬಿ.ಮಂಜೇಗೌಡ ಮತ್ತು ಅವರ ಪತ್ನಿ ಮೀನಾ ವಿರುದ್ಧ ದೂರು ದಾಖಲಿಸಿದ್ದರು. ಈ ಪ್ರಕರಣದ ತನಿಖೆ ನಡೆಸಿದ ಪೊಲೀಸರು, ಬೆಂಗಳೂರಿನ 8ನೇ ಹೆಚ್ಚುವರಿ ಸಿಎಂಎಂ ನ್ಯಾಯಾಲಯಕ್ಕೆ ಬಿ–ರಿಪೋರ್ಟ್ ಸಲ್ಲಿಸಿ ದೂರುದಾರ ಕೆಆರ್.ಶ್ರೀನಿವಾಸ್‌ರಿಗೆ ಹಿಂಬರಹ ನೀಡಿದ್ದಾರೆ.

ಮಗನ ಹುಡುಕಿ ಕೊಡಿ



ಮೈಸೂರು,ಡಿ.21 ಹೋಟೆಲ್ ಕೆಲಸಕ್ಕೆ ಹೋಗುತ್ತೇನೆ ಎಂದು ಹೇಳಿ ಹೋದವನು ರಾತ್ರಿ 10 ಗಂಟೆಯಾದರೂ ನನ್ನ ಮಗ ಮನೆಗೆ ಬಂದಿಲ್ಲ. ಹುಡುಕಿಕೊಡುವಂತೆ ಸರಗೂರು ಟೌನ್ ನಿವಾಸಿ ಚಿಕ್ಕ ಹನುಮನಾಯಕ ಎಂಬುವರು ಸರಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸರಗೂರು ಟೌನ್ ನಿವಾಸಿ ಮಂಜು(37) ನಾಪತ್ತೆಯಾಗಿರುವ ವ್ಯಕ್ತಿ. ಇವರು ನಮ್ಮ ಮನೆಯಿಂದ ಹೋಟೆಲ್ ಕೆಲಸಕ್ಕೆ ಹೋಗಿ ಬರುತ್ತೇನೆ ಅಂತ ಹೇಳಿ ಹೋದವನು ರಾತ್ರಿ 10 ಗಂಟೆಯಾದರೂ ನಮ್ಮ ಮನೆಗೆ ಬಂದಿರುವುದಿಲ್ಲ. ತಕ್ಷಣ ನಾನು, ಮಂಜು ಕೆಲಸ ಮಾಡುತ್ತಿದ್ದ ಹೋಟೆಲ್‌ನಲ್ಲಿ ವಿಚಾರಿಸಿದಾಗ ಹೋಟೆಲ್ ಮಾಲೀಕರು ಗೊತ್ತಿಲ್ಲ ಎಂದ ತಿಳಿಸಿರುತ್ತಾರೆ. ಮತ್ತು ಸಂಬಂಧಿಕರ ಮನೆಯಲ್ಲಿ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ಸರಗೂರು ಠಾಣೆ ಆರಕ್ಷಕ ಉಪನಿರೀಕ್ಷಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಯಾರಿಗಾದರು ಇವರ ಗುರುತು ಪತ್ತೆಯಾದಲ್ಲಿ ಪೊಲೀಸ್ ಕಂಟ್ರೋಲ್ ರೂಂ 0821–2418612ಕ್ಕೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ತಾಲ್ಲೂಕು ಪಂಚಾಯತ್, ಹುಣಸೂರು
ಸಂ.ಕಾಅ/ತಾ.ಪಂ./ಹುಣಸೂರು/ಇ–ಪ್ರಕ್ಯೂರ್‌ಮೆಂಟ್/ಸ.ಇಂ–1


ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ. 01/2022–23/ದಿ: 19–12–2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಹುಣಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಬೆಂಗಳೂರುರವರ ಸಹಯೋಗದೊಂದಿಗೆ, CPWD/ /KPWD/WRDO/PRED Registered by Government ನಲ್ಲಿ ನೊಂದಾಯಿತರಾಗಿರುವ 3ನೇ ದರ್ಜೆ ಹಾಗೂ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ನಮೂನೆ KW-1 & KW-2 ಪದ್ಧತಿಯಂತೆ 2022–23ನೇ ಸಾಲಿನ ಸಂಯುಕ್ತ ಅನುದಾನ (ತಾಲ್ಲೂಕು ಪಂಚಾಯಿತಿ) ಲೆಕ್ಕ ಶೀರ್ಷಿಕೆಯ ಅನುದಾನದಡಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಒಟ್ಟು 07 ಕಾಮಗಾರಿಗಳ ಮೊತ್ತವು ರೂ.94.00 ಲಕ್ಷಗಳಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ. ಮೊತ್ತವು ಸದರಿ ನೋಟಿಫಿಕೇಷನ್‌ನಲ್ಲಿ/ಇ–ಪ್ರಕ್ಯೂರ್‌ಮೆಂಟ್ ಕಾಮಗಾರಿಗಳಂತೆ ಇರುತ್ತದೆ. **1)** ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿ: 22.12.2022 ರಿಂದ 29.12.2022 ಸಂಜೆ 16.00 ಘಂಟೆಯವರೆಗೆ. **2)** ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ: 29.12.2022, 16.00 ಘಂಟೆ. **3)** ಟೆಂಡರ್ ತೆರೆಯುವ ದಿ: 30.12.2022ರ ಸಂಜೆ 17.00 ಘಂಟೆಯ ನಂತರ.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) https://eprockarnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದು. ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಹುಣಸೂರು (ಪೋನ್ ನಂ.08222–252028) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

DIPR/DDMYS/MCA/800/2022-23 ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು

ಡಿಸಿ ಕಚೇರಿ ಬಳಿ ಪೈಪ್ ಒಡೆದು ನೀರು ಪೋಲು

ಮಾಹಿತಿ ನೀಡಿದರೂ ಗಮನಿಸದ ಸಿಬ್ಬಂದಿ



ಮೈಸೂರು,ಡಿ.21(ಎಸ್‌ಪಿಎನ್)–ಕುಡಿಯುವ ನೀರು ಪೂರೈಕೆಯ ಪೈಪ್ ಒಡೆದು ಬೃಹತ್ ಪ್ರಮಾಣದ ನೀರು ಜಿಲ್ಲಾಧಿಕಾರಿಗಳ ಕಚೇರಿ ಸಮೀಪದ ಮಹಾರಾಜ ಮಹಿಳಾ ಕಾಲೇಜು ಬಳಿ ಪೋಲಾಗುತ್ತಿದೆ.

ದಿನನಿತ್ಯ ಡಿಸಿ ಕಚೇರಿ, ಈ ಭಾಗದ ಶಾಲಾ–ಕಾಲೇಜುಗಳಿಗೆ ಕುಡಿಯುವ ನೀರು ಪೂರೈಕೆಯಾಗುತ್ತಿದ್ದ ಪೈಪ್ ಒಡೆದು ಬೃಹತ್ ಪ್ರಮಾಣದ ನೀರು ಪೋಲಾಗುತ್ತಿದ್ದರೂ ಇದರ ಬಗ್ಗೆ ಅನೇಕ ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಜಾಗದಲ್ಲಿ ಕಳೆದ ಮೂರು ದಿನಗಳಿಂದ ಬೆಳಗ್ಗೆಯಿಂದ ಸಂಜೆಯವರೆಗೆ ನೀರು ಪೋಲಾಗಿ ಮಹಾರಾಜ ಪ್ರೌಢಶಾಲೆಯ ಮೈದಾನದ ಕಡೆಗೆ ಹರಿದು ಪೋಲಾಗುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ದೇವರಾಜ ಅರಸ್ ರಸ್ತೆ ಮೂಲಕ ಸರಸ್ವತಿಪುರಂ, ಬೋಗಾದಿ 2ನೇ ಹಂತ, ಮಾನಸಗಂಗೋತ್ರಿಗೆ ಹೋಗುವ ವಾಹನ ಸವಾರರು, ಈ ರಸ್ತೆ ಮೂಲಕ ಓಡಾಡುತ್ತಿದ್ದರೂ ಯಾರೊಬ್ಬರಿಗೂ ನೀರು ಪೋಲಾಗುತ್ತಿರುವುದು ಕಾಣಿಸಿಲ್ಲ ಎಂದು ಪಾದಚಾರಿ ಮುರುಗೇಶ್ 'ಮೈಸೂರು ಮಿತ್ರ'ನ ಬಳಿ ಬೇಸರ ವ್ಯಕ್ತಪಡಿಸಿದರು.

ಮೊದಮೊದಲು ಸಣ್ಣದಾಗಿ ನೀರು ಪೋಲಾಗುತ್ತಿತ್ತು. ಆಗ ಈ ರಸ್ತೆಯಲ್ಲಿ ಪಾನಿಪುರಿ ಮತ್ತು ಜಂಕ್‌ಫುಡ್ ವ್ಯಾಪಾರ ಮಾಡುವವರು ಇಲ್ಲಿನ ಪೈಪ್‌ನಲ್ಲಿ ಸೋರಿಕೆಯಾಗುತ್ತಿದ್ದ ಸಣ್ಣ ಪ್ರಮಾಣದ ನೀರನ್ನು ಶೇಖರಿಸಿಕೊಳ್ಳುತ್ತಿದ್ದರು. ಮತ್ತೆ ಅದರ ಮೇಲೆ ಕಲ್ಲು ಬಟ್ಟೆಗಳನ್ನು ತುರುಕಿ ನೀರು ನಿಲ್ಲಿಸುತ್ತಿದ್ದರು. ಹೀಗೆ ಹಲವು ದಿನಗಳಿಂದ ಇದೇ ರೀತಿ ಮಾಡುತ್ತಿದ್ದರು. ಇದೀಗ ನೀರು ನಿಲ್ಲಿಸಲು ಸಾಧ್ಯವಾಗದಂತೆ ಪೈಪ್ ಒಡೆದಿರಬಹುದು ಎಂದು ಮುರುಗೇಶ್ ಅನುಮಾನ ವ್ಯಕ್ತಪಡಿಸಿದರು.

ಸೋರಿಕೆಯಾಗುತ್ತಿರುವ ನೀರನ್ನು ಮೊದಲು ನಿಲ್ಲಿಸಬೇಕು. ಬೇಸಿಗೆಕಾಲದಲ್ಲಿ ಹನಿಹನಿ ನೀರಿಗೂ ಪರದಾಡುವ ನಗರವಾಸಿಗಳು, ನೀರಿಗಾಗಿ ಪ್ರತಿಭಟನೆ ಮಾಡುತ್ತಿದ್ದಾರೆ. ಇದೀಗ ಕಳೆದ 3 ದಿನಗಳಿಂದ ಸಾವಿರಾರು ಲೀಟರ್ ಕುಡಿಯುವ ನೀರು ಪೋಲಾಗುತ್ತಿದ್ದರು ಸಾರ್ವಜನಿಕರು ತಲೆಕೆಡಿಸಿಕೊಳ್ಳದಿರುವುದು ಬೇಸರ ಸಂಗತಿ ಎಂದರು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ ಅಭಿನಂದಿಸಿದರು. ಈ ವೇಳೆ ಮಾಜಿ ಎಂಎಲ್‌ಸಿ ತೋಂಟದಾರ್ಯ, ಮುಖಂಡರಾದ ಹೇಮಂತ್‌ಕುಮಾರ್, ಗೆಜ್ಜಗಳ್ಳಿ ಮಹೇಶ್, ಆನಂದ್, ಸೋಮಶೇಖರ್ ರಾಜು, ರಮೇಶ್ ಉಪಸ್ಥಿತರಿದ್ದರು.

19 ವರ್ಷ ಜೈಲು ಶಿಕ್ಷೆ ನಂತರ ಫ್ರೆಂಚ್ ಸರಣಿ ಹಂತಕ ಚಾರ್ಲ್ಸ್ ಶೋಭರಾಜ್ ಬಿಡುಗಡೆ



ಕಠ್ಮಂಡು: ಫ್ರೆಂಚ್ ಸರಣಿ ಹಂತಕ ಚಾರ್ಲ್ಸ್ ಶೋಭರಾಜ್ ಬಿಡುಗಡೆಗೆ ನೇಪಾಳ ಸುಪ್ರೀಂಕೋರ್ಟ್ ಆದೇಶಿಸಿದೆ. 19 ವರ್ಷ ಜೈಲು ಶಿಕ್ಷೆ ಅನುಭವಿಸಿರುವ ಶೋಭರಾಜ್‌ಗೆ ವಯಸ್ಸಾಗಿರುವುದರಿಂದ ಆತನನ್ನು ಬಿಡುಗಡೆ ಮಾಡಲು ಕೋರ್ಟ್ ಆದೇಶಿಸಿದೆ. ಇಬ್ಬರು ಅಮೆರಿಕನ್ ಪ್ರವಾಸಿಗಳನ್ನು ಹತ್ಯೆಗೈದ ಆರೋಪದಲ್ಲಿ 2003ರಿಂದ ಈತ ನೇಪಾಳದ ಜೈಲಿನಲ್ಲಿದ್ದಾನೆ ಎಂದು ಎಎನ್‌ಐ ಸುದ್ದಿಸಂಸ್ಥೆ ವರದಿ ಮಾಡಿದೆ. ಜೈಲಿನಿಂದ ಬಂಧಮುಕ್ತನಾದ 15 ದಿನಗಳಲ್ಲಿ ಆತನನ್ನು ಗಡಿಪಾರು ಮಾಡಬೇಕೆಂದು ಉಚ್ಚ ನ್ಯಾಯಾಲಯ ಹೇಳಿದೆ.

ಭಾರತ ಮತ್ತು ವಿಯೆಟ್ನಾಮೀಸ್ ದಂಪತಿಗಳ ಮಗ, ಫ್ರಾನ್ಸ್ ಪೌರತ್ವ ಹೊಂದಿರುವ ಚಾರ್ಲ್ಸ್ ಶೋಭರಾಜ್ ನೇಪಾಳಕ್ಕೆ ನಕಲಿ ಪಾಸ್ ಪೋರ್ಟ್ ಬಳಸಿ ಪ್ರವೇಶಿಸಿದ್ದ. 1975ರಲ್ಲಿ ಈತ ಅಮೆರಿಕದ ಪ್ರಜೆಗಳಾದ ಕೋನಿ ಜೋ ಬೊರೊ ಜಿಂಚ್ (29)ಮತ್ತು ಆತನ ಗರ್ಲ್ ಫ್ರೆಂಡ್ ಕೆನಡಾ ಮೂಲದ ಲೌರೆಂಟ್ ಕಾರೆರ್(26) ಅವರನ್ನು ಹತ್ಯೆ ಮಾಡಿದ್ದ. ಚಾರ್ಲ್ಸ್ ಫೋಟೊ ನ್ಯೂಸ್ ಪೇಪರ್‌ನಲ್ಲಿ ಪ್ರಕಟವಾದ ನಂತರ 2003 ಸೆಪ್ಟೆಂಬರ್ 1ರಂದು ನೇಪಾಳದ ಕ್ಯಾಸಿನೋ ಹೊರಗಡೆಯಲ್ಲಿ ಆತನನ್ನು ಬಂಧಿಸಿದ್ದರು. ಬಂಧನದ ನಂತರ ಪೊಲೀಸರು ಆತನ ವಿರುದ್ಧ 1975ರಲ್ಲಿ ಕಠ್ಮಂಡು ಮತ್ತು ಭಕ್ತಪುರ್‌ನಲ್ಲಿ ನಡೆದ 2 ಪ್ರತ್ಯೇಕ ಕೊಲೆ ಪ್ರಕರಣಗಳನ್ನು ದಾಖಲಿಸಿದ್ದರು. ಚಾರ್ಲ್ಸ್ ಶೋಭರಾಜ್‌ಗೆ ಕಠ್ಮಂಡುವಿನ ಸೆಂಟ್ರಲ್ ಜೈಲಿನಲ್ಲಿ 21 ವರ್ಷ ಜೈಲು ವಿಧಿಸಲಾಗಿತ್ತು. ಯುಎಸ್ ಪ್ರಜೆಯನ್ನು ಹತ್ಯೆ ಮಾಡಿದಕ್ಕಾಗಿ 20 ವರ್ಷಗಳು ಮತ್ತು ನಕಲಿ ಪಾಸ್ಪೋರ್ಟ್ ಬಳಸಿದ್ದಕ್ಕಾಗಿ ಒಂದು ವರ್ಷ ಮತ್ತು ರೂ. 2,000 ದಂಡವನ್ನು ವಿಧಿಸಲಾಗಿತ್ತು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೇ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತುಗಳನ್ನು ನನ್ನ ಕಕ್ಷಿದಾರರು, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಲಗಯ್ಯನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಜವರಯ್ಯ ರವರ ಧರ್ಮಪತ್ನಿ ಶ್ರೀಮತಿ ಹೊನ್ನಮ್ಮ ಮತ್ತು ಅವರ ಕುಟುಂಬದವರಿಂದ ಶುದ್ಧ ಕ್ರಯಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ 7 (ಏಳು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.


ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಡಜನ ಗ್ರಾಮದ, ಸರ್ವೆ ನಂಬರು 106/2 ರ ವಿಸ್ತೀರ್ಣ 1 ಎಕರೆ 15 ಗುಂಟೆ ಜಮೀನಿಗೆ ಚಕ್ಕುಬಂಧಿ:
ಪೂರ್ವಕ್ಕೆ: ಸರ್ವೆ ನಂ.104/2ರ ಜಮೀನು,
ಪಶ್ಚಿಮಕ್ಕೆ: ಸರ್ವೆ ನಂ.108 ಮತ್ತು 107ರ ಜಮೀನು,
ಉತ್ತರಕ್ಕೆ: ಸರ್ವೆ ನಂ.106 ಉಳಿಕೆ ಜಮೀನು,
ದಕ್ಷಿಣಕ್ಕೆ: ಸರ್ವೆ ನಂ.106 ಉಳಿಕೆ ಜಮೀನು.

Sd/- Ravikiran B.Sc., LL.B.
Advocate, Office:# 1143/1E, Chankya Circle, Geetha Road, Chamrajapuram Mysuru - 570004, Ph: 0821-4287199, M: 9880776068
ದಿನಾಂಕ: 21.12.2022, ಸ್ಥಳ: ಮೈಸೂರು

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಹೆಚ್.ಎಂ.ಜವರೇಗೌಡರು
(ನಿವೃತ್ತ ಶಿಕ್ಷಕರು)

ಇವರು ದಿನಾಂಕ: 13.12.2022 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 23.12.2022 ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ ಹುಯಿಲಾಳು ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ನಳಿನ ಮತ್ತು ಶ್ರೀ ಜಯಕುಮಾರ್, ಶ್ರೀಮತಿ ಪ್ರತಿಭಾ ಮತ್ತು ಶ್ರೀ ರವಿಶಂಕರ್, ಶ್ರೀಮತಿ ನಳಿನಿ ಮತ್ತು ಹೆಚ್.ಜೆ.ರಾಘವೇಂದ್ರ (ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷರು, ಮೈಸೂರು ಜಿಲ್ಲಾ ಹಾಗೂ ಮಾಜಿ ಗ್ರಾಮ ಉಪಾಧ್ಯಕ್ಷರು)
ಮಗಳು ಅಳಿಯಂದಿರಾದ ಶ್ರೀಮತಿ ಮಾಲತಿ ಮತ್ತು ಶ್ರೀ ನಾಗರಾಜು ಶ್ರೀಮತಿ ಪದ್ಮಿನಿ ಮತ್ತು ಶ್ರೀ ಜಯರಾಮು, ಮೊಮ್ಮಕ್ಕಳು, ಕುಟುಂಬವರ್ಗ ಹಾಗೂ ಹುಯಿಲಾಳು ಗ್ರಾಮಸ್ಥರು

FOND REMEMBRANCE
In Loving Memory of



1943 2015

Sri. H.R.Srinivas Murthy
Words cannot express our Feelings of losing you.
We remember you each moment with utmost respect and love in our hearts. Time can never erase your Presence in our lives. Remembered by : Family Members

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೇ, ನನ್ನ ಕಕ್ಷಿದಾರರಿಗೆ ಸೇರಿದ, ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತಿನ ಹಾಗೂ ಇತರೆ ಸ್ವತ್ತುಗಳ, ದಿನಾಂಕ 25.11.2005 ರಂದ ಕೆ.ಆರ್.ನಗರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ, **CD No.KRND11** ರಲ್ಲಿ **KRN-1-01226-2005-06** ನೇ ಸಂಖ್ಯೆಯಲ್ಲಿ ನಮೂದಾದ ಕ್ರಯ ಪತ್ರದ ಅಸಲು ಪ್ರತಿಯು ಕಳೆದುಕೊಂಡಿರುತ್ತಾರೆ, ಸದರಿ ಪತ್ರವು ಪತ್ತೆಯಾದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು/ಹಕ್ಕುಗಳಿದ್ದಲ್ಲಿ ಕೆಳಗೆ ನಮೂದಿಸಿರುವ ವಿಳಸಕ್ಕೆ ಈ ಪ್ರಕಟಣೆಯ 7 ದಿನಗಳೊಳಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಅಂತೆಯೇ ಸದರಿ ಪತ್ರವು ಕಳೆದು ಹೋಗಿರುವ ಕಾರಣ ಅದರ ಅಡಮಾನ ಇತ್ಯಾದಿಗಳನ್ನು ಬೇರೆ ಯಾರೇ ಮಾಡಿದರೂ, ಅದಕ್ಕೆ ನನ್ನ ಕಕ್ಷಿದಾರರು ಬದ್ಧರಾಗುವುದಿಲ್ಲ.

ಅನುಸೂಚಿ: ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಕೆ.ಆರ್.ನಗರ ಟೌನ್, ಕಸಬಾ ಹೋಬಳಿ, ಕಾಳೇನಹಳ್ಳಿ ಗ್ರಾಮ, ಭಾಗದಲ್ಲಿರುವ ಸ್ವತ್ತು ಸಂ. 187, ಪೂರ್ವ ಪಶ್ಚಿಮ 40ಅಡಿ, ಉತ್ತರ ದಕ್ಷಿಣ 30 ಅಡಿಗೆ ಚಕ್ಕುಬಂದಿ: ಪೂರ್ವಕ್ಕೆ: ಸ್ವತ್ತು ಸಂ. 182, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸ್ವತ್ತು ಸಂ.186, ದಕ್ಷಿಣಕ್ಕೆ : ಸ್ವತ್ತು ಸಂ. 188.

Sd/- Rohith Subbaya
Advocate, # 1230/A, CH-36/A, 2nd cross, Behind Ramamandira, Krishnamurthypuram, Chamaraja Mohalla, Mysore-04, Ph 9480004999

ಸಾರ್ವಜನಿಕರ ತಿಳುವಳಿಕೆಗೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಹಂಚ್ಯಾ ಗ್ರಾಮ, ಮಾನಸಿ ನಗರ, ಬ್ಲಾಕ್ ನಂ. 28, ಮನೆ ನಂ. 2 ಇಲ್ಲಿ ವಾಸವಾಗಿರುವ ಪ್ರಶಾಂತ್.ಸಿ ಬಿನ್ ಶ್ರೀ ಚಲುವರಾಜು, ಪ್ರೊಪ್ರೈಟರ್, ಎಸ್.ಎಲ್.ವಿ ಡೆವಲಪರ್ಸ್ ಇವರ ಇರಾದೆ ಮೇರೆಗೆ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ:

ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತಿನ ಸಂಬಂಧ ನಮ್ಮ ಕಕ್ಷಿದಾರರು ಹಾಗೂ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಆಲನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ 1) ಶ್ರೀ ನಾಗರಾಜು ಬಿನ್ ಲೇಟ್ ಶ್ರೀ ಕೆಂಪಯ್ಯನ ಚೌಡಯ್ಯ, (2) ಶ್ರೀಮತಿ ಚಂದ್ರಮ್ಮ ಕೋಂ ಶ್ರೀ ನಾಗರಾಜು, (3) ಶ್ರೀ ಎನ್. ಮಹದೇವಸ್ವಾಮಿ ಬಿನ್ ಶ್ರೀ ನಾಗರಾಜು, (4) ಶ್ರೀ ಸುರೇಶ್ ಬಿನ್ ಶ್ರೀ ನಾಗರಾಜು, (5) ಶ್ರೀಮತಿ ಭಾಗ್ಯ ಬಿನ್ ಶ್ರೀ ನಾಗರಾಜು, (6) ಶ್ರೀಮತಿ ಎನ್. ಜ್ಯೋತಿ ಬಿನ್ ಶ್ರೀ ನಾಗರಾಜು ಇವರೊಂದಿಗೆ ಷೆಡ್ಯೂಲ್ ಸ್ವತ್ತಿನ ಸಂಬಂಧ 30–03–2017 ರಂದು ಜಂಟಿ ಅಭಿವೃದ್ಧಿಯ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಸಂಬಂಧ ನಮ್ಮ ಕಕ್ಷಿದಾರರು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು ಇಲ್ಲಿ ಅಸಲು ದಾವ ಸಂಖ್ಯೆ: 411/2018 ಎಂಬುದಾಗಿ ದಾಖಲಾಗಿದ್ದು ವಿಚಾರಣೆಗೆ ಬಾಕಿ ಇರುತ್ತದೆ. ಸದರಿ ದಾವೆಯಲ್ಲಿ ಘನ ನ್ಯಾಯಾಲಯವು ಷೆಡ್ಯೂಲ್ ಸ್ವತ್ತನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ತಾತ್ಕಾಲಿಕ ನಿರ್ಭಂದಕಾ ಯನ್ನು ನೀಡಿರುತ್ತದೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾರೇ ಆಗಲೀ, ಯಾವುದೇ ರೀತಿಯಲ್ಲಿಯೂ ಸಹಾ ವ್ಯವಹರಿಸಬಾರದೆಂದು ಈ ಮೂಲಕ ತಿಳಿಸಲಾಗಿದೆ. ವಸ್ತುಸ್ಥಿತಿ ಹೀಗಿದ್ದು, ಯಾವುದೇ ಮೂರನೇ ವ್ಯಕ್ತಿಗಳು ಕ್ರಯ, ವಗೈರೆ ವ್ಯವಹಾರಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಷೆಡ್ಯೂಲ್ ಸ್ವತ್ತಿನ ಸಂಬಂಧ ಮುಂದುವರೆಯುವ ಯಾವುದೇ ಬಗೆಯ ವ್ಯವಹಾರಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲಾ ಎಂದು ತಿಳಿಯುವುದು.

ಷೆಡ್ಯೂಲ್: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಆಲನಹಳ್ಳಿ ಗ್ರಾಮದ ಸರ್ವೆ ನಂ. 141/2 ರ ವಿಸ್ತೀರ್ಣ 1 ಎಕರೆ 4 ಗುಂಟೆ ಜಮೀನು ಮತ್ತು ಸರ್ವೆ ನಂ. 141/3 ರ ವಿಸ್ತೀರ್ಣ 1 ಎಕರೆ 4 ಗುಂಟೆ ಜಮೀನು ಹೀಗೆ ಒಟ್ಟು ವಿಸ್ತೀರ್ಣ 2 ಎಕರೆ 8 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಬಡಾವಣೆ, ಪಶ್ಚಿಮಕ್ಕೆ: ಪಟೇಲ್ ಮಹದೇವರವರ ಸ್ವತ್ತು ; ಉತ್ತರಕ್ಕೆ: ಭುಗತಗಳ್ಳಿ ಶಿವಣ್ಣ ರವರ ಸ್ವತ್ತು ; ದಕ್ಷಿಣಕ್ಕೆ: ಕೂಸಪ್ಪ ರವರ ಸ್ವತ್ತು.

ಸಹಿ/– ಎಸ್. ವಿವೇಕ್ BAL, LL.B.
ವಕೀಲರು, ಕಛೇರಿ: 452, 1ನೇ ಮಹಡಿ, ಕೊಠಡಿ ಸಂ. 452, 1ನೇ ಮಹಡಿ, ಕೊಠಡಿ ಸಂಖ್ಯೆ 5, ಶ್ರೀ ನಂಜುಂಡೇಶ್ವರ ಕಾಂಪ್ಲೆಕ್ಸ್, ಎಂ.ಜಿ. ರಸ್ತೆ, ಫೋರ್ಟ್ ಮೊಹಲ್ಲಾ, ಮೈಸೂರು–4
ದಿನಾಂಕ: 21–12–2022, ಮೈಸೂರು

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ,
ಮೈಸೂರು ಜಿಲ್ಲೆ – 571107
Email: itstaff_ulb_periyapatna@yahoo.com
Ph: 08223-273036
ಸಂಖ್ಯೆ: ಪಿಪುಕಾ/ಆ.ಶಾ/ಘ.ತ್ಯಾನಿ/ಸಿ.ಆರ್/01/2022–23 ದಿ: 12.12.2022

NOTIFICATION REGARDING DOOR SEGREGATED WASTE COLLECTION

ಪಿರಿಯಾಪಟ್ಟಣ ಪುರಸಭೆಯಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಘನತ್ಯಾಜ್ಯ ವಸ್ತು ವಿಲೇವಾರಿ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿದ್ದು, ಅದರಂತೆ ಪ್ರತಿ ಮನೆಯಿಂದ (RESIDENTIAL) ಮತ್ತು ವಾಣಿಜ್ಯ ಮಳಿಗೆಗಳಿಂದ (COMMERCIAL) ಉತ್ಪತ್ತಿಯಾಗುವ ತ್ಯಾಜ್ಯವನ್ನು ಪ್ರತ್ಯೇಕವಾಗಿ ಹಸಿ ತ್ಯಾಜ್ಯ (WET WASTE), ಒಣ ತ್ಯಾಜ್ಯ (DRY WASTE) ಅಪಾಯಕಾರಿ ತ್ಯಾಜ್ಯ (HAZARDOUS WASTE), ಸ್ಯಾನಿಟರಿ ಮತ್ತು ಬಯೋ ಮೇಡಿಕಲ್ ತ್ಯಾಜ್ಯ (DOMESTIC SANITARY AND BIO-MEDICAL WASTE) ಮತ್ತು ಎಲೆಕ್ಟ್ರಾನಿಕ್ ತ್ಯಾಜ್ಯ (E-WASTE) ಸಂಗ್ರಹಿಸಲು ವಾಹನವನ್ನು ನಿಯೋಜಿಸಲಾಗಿದ್ದು, ಅದರಂತೆ ಸಾರ್ವಜನಿಕರು ಹಾಗೂ ವರ್ತಕರು ಕಸವನ್ನು ಪ್ರತ್ಯೇಕವಾಗಿ ವಿಂಗಡಿಸಿ ವಾಹನಕ್ಕೆ ನೀಡಲು ಈ ಮೂಲಕ ಕೋರಿದೆ ಹಾಗೂ ನಿಗಧಿ ಪಡಿಸಿದ ಘನತ್ಯಾಜ್ಯ ಉಪಯುಕ್ತ ಶುಲ್ಕವನ್ನು ವಾರ್ಷಿಕವಾಗಿ ಆಸ್ತಿ ತೆರಿಗೆಯೊಂದಿಗೆ ಪಾವತಿಸಿ ಘನತ್ಯಾಜ್ಯ ನಿಯಮ 2016 ರನ್ನು ಅನುಷ್ಠಾನಕ್ಕೆ ಸಹಕರಿಸುವುದು.

ವಿಶೇಷ ಸೂಚನೆ: 1) ಎಲ್ಲಾ ವರ್ತಕರು ಹಸಿರು ಮತ್ತು ನೀಲಿ ಬಣ್ಣದ ಢಸ್ಟ್ ಬಿನ್‌ಗಳನ್ನು ಅಂಗಡಿ ಮುಂದೆ ಕಡ್ಡಾಯವಾಗಿ ಇಡುವುದು ಹಾಗೂ ಹಸಿ ಮತ್ತು ಒಣ ಕಸವನ್ನು ವಿಂಗಡಿಸಿ ವಾಹನಕ್ಕೆ ನೀಡುವುದು ತಪ್ಪಿದಲ್ಲಿ ರೂ.350 ದಂಡ ವಿಧಿಸಲಾಗುವುದು. **2)** ತ್ಯಾಜ್ಯವನ್ನು ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ತಪ್ಪಿದಲ್ಲಿ ರೂ.250/– ದಂಡ ವಿಧಿಸಲಾಗುವುದು. **3)** ತ್ಯಾಜ್ಯವನ್ನು ವಿಂಗಡಿಸದೆ ನೀಡಿದಲ್ಲಿ ರೂ.200/– ದಂಡ ವಿಧಿಸಲಾಗುವುದು. **4)** ತ್ಯಾಜ್ಯವನ್ನು ರಸ್ತೆ ಅಥವಾ ಸಾರ್ವಜನಿಕ ಸ್ಥಳದಲ್ಲಿ ಹಾಕಿದಲ್ಲಿ ರೂ.250 ದಂಡ ವಿಧಿಸಲಾಗುವುದು. **5)** ಸಾರ್ವಜನಿಕ ಸ್ಥಳದಲ್ಲಿ ಮಲ–ಮೂತ್ರ ವಿಸರ್ಜಿಸಿದಲ್ಲಿ ರೂ.250/– ದಂಡ ವಿಧಿಸಲಾಗುವುದು. **6)** ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ಬಳಕೆ/ದಾಸ್ತಾನು/ಮಾರಾಟ ಮಾಡಿದಲ್ಲಿ ರೂ.2500/– ವರೆಗೆ ದಂಡ ವಿಧಿಸಲಾಗುವುದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ.
DIPR/DDMYS/MCA/792/2022-23

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005


ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–6:554:2022–23

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಕಲಂ 69(2)(3) & (4)ರಡಿ

ಮೈಸೂರು ತಾಲ್ಲೋಕು, ಇಲವಾಲ ಹೋಬಳಿ, ಶ್ಯಾದನಹಳ್ಳಿ ಗ್ರಾಮದ ಸರ್ವೆ ನಂ. 122/1ರ 01 ಎಕರೆ 32.08 ಗುಂಟೆ ಪೈಕಿ 00–24.08ಗುಂಟೆ ಮತ್ತು 122/2ರ 01 ಎಕರೆ 32.08 ಗುಂಟೆ ಪೈಕಿ 00–33.08 ಗುಂಟೆ ಒಟ್ಟು 01 ಎಕರೆ 18 ಗುಂಟೆ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 69(2)(3)&(4)ರಡಿ ಉದ್ಯಾನವನ ಮತ್ತು ಬಯಲು ಜಾಗ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ನಿಗಧಿಪಡಿಸುವಂತೆ ಶ್ರೀ ಎಸ್.ಕೃಷ್ಣ ಮತ್ತು ಎಸ್. ಮಹದೇವ ಇವರುಗಳ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ " **ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸಿರುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಮತ್ತು ಸಾರ್ವಜನಿಕರಿಗೆ ನಿವೇಶನ ಹಂಚಲು ಅನುಕೂಲವಾಗುತ್ತದೆ. ಬಡಾವಣೆ ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಉದ್ಯೋಗ ದೊರಕುತ್ತದೆ ಮತ್ತು ಬಡಾವಣೆ ಅಭಿವೃದ್ಧಿಪಡಿಸುವುದರಿಂದ ಮೈಸೂರಿನ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ** " ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗೆ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570 005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಸಂಖ್ಯೆ.ಮೈ.ನ.ಪ್ರಾ/ವಕ–4/2022–23 ದಿನಾಂಕ: 19–12–2022
ಪತ್ರಿಕಾ ಪ್ರಕಟಣೆ

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಸಿ.ಐ.ಟಿ.ಬಿ. ಯಿಂದ ಶ್ರೀಮತಿ ಡಿ. ಜಯಲಕ್ಷ್ಮಿ ರವರಿಗೆ ಗೋಕುಲಂ 2ನೇ ಹಂತ ಬಡಾವಣೆಯಲ್ಲಿ ನಿ.ಸಂ. 217, ಅಳತೆ **35x50** ಅಡಿಗಳ ನಿವೇಶನವನ್ನು ದಿ. 15–04–1968 ರಲ್ಲಿ ಮಂಜೂರಾಗಿದ್ದು, ದಿ. 21–11–1972 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ಶ್ರೀಮತಿ ಡಿ. ಜಯಲಕ್ಷ್ಮಿ ರವರು ಸದರಿ ನಿವೇಶನ ಸಂಖ್ಯೆ 217, ಅಳತೆ **35x50** ಅಡಿಗಳನ್ನು ಕೆಳಕಂಡವರಿಗೆ ಮಾರಾಟ ಮಾಡಿರುತ್ತಾರೆ.

1) ಶ್ರೀಮತಿ ಮೋಹಾನಾದೇವಿ ಕೋಂ ಆರ್. ಘನ ಶ್ಯಾಮದಾಸ್ ರವರಿಗೆ ದಿ. 28–03–1981 ರಲ್ಲಿ ಅಳತೆ **$17^1/_2$ x 50** ಅಡಿಗಳ ಮೂಲ ನಿವೇಶನವನ್ನು ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

2) ಶ್ರೀಮತಿ ಪ್ರೇಮಾದೇವಿ ಕೋಂ ಎಸ್.ಪಿ. ಪಾಂಡೆ ರವರಿಗೆ ದಿ. 27–12–1984 ರಲ್ಲಿ ಅಳತೆ **$17^1/_2$ x 50** ಅಡಿಗಳ ಮೂಲಕ ನಿವೇಶನವನ್ನು ಮಾರಾಟ ಮಾಡಿರುವುದು ದಾಖಲೆಗಳಿಂದ ತಿಳಿದುಬರುತ್ತದೆ.

ಕ್ರಯಕ್ಕೆ ಪಡೆದ ಮೋಹನಾದೇವಿ ರವರು ಸದರಿ ನಿವೇಶನ ಸಂಖ್ಯೆ 217/, ಅಳತೆ **$17^1/_2$ x 50** ಅಡಿಗಳ ನಿವೇಶನವನ್ನು ಶ್ರೀ ಬಿ. ನವೀನ್ ಕುಮಾರ್ ಬಿನ್ ಭೂಪೇಂದ್ರ ಲಾಲ್ ರವರ ಹೆಸರಿಗೆ ವಿಲ್ ಯಾ ಮರಣ ಶಾಸನ ಪತ್ರವನ್ನು ದಿ. 30–11–2015 ರಲ್ಲಿ ನೋಂದಾಯಿಸಿ, ಮಾಲೀಕತ್ವ ವರ್ಗಾಯಿಸಿರುತ್ತಾರೆ. ಇವರು ದಿನಾಂಕ: 10–10–2016 ರಲ್ಲಿ ಮರಣ ಹೊಂದಿರುತ್ತಾರೆ. ವಿಲ್ ಯಾ ಮರಣ ಶಾಸನದ ಮೂಲಕ ನಿವೇಶನ ಸಂಖ್ಯೆ: 217/1 ರ ಅರ್ಧಭಾಗ ಅಂದರೆ, **$17^1/_2$ x 50** ಅಡಿಗಳ ಮಾಲೀಕರಾದ ಶ್ರೀ ಬಿ. ನವೀನ್ ಕುಮಾರ್ ರವರು ದಿ. 08–06–2022 ರಂದು ನಿವೇಶನವನ್ನು ಶ್ರೀ ಕೃಷ್ಣ ಬಿನ್ ಲೇಟ್ ಬೋರಯ್ಯ ಇವರಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಶ್ರೀಮತಿ ಡಿ. ಜಯಲಕ್ಷ್ಮಿ ಇವರು ದಿ. 27–12–1984 ರಂದು ನಿವೇಶನ ಸಂಖ್ಯೆ 217 ರ ಅರ್ಧಭಾಗ ಅಂದರೆ, **$17^1/_2$ x 50** ಅಡಿಗಳನ್ನು ಮಾರಾಟ ಮಾಡಿದ್ದು, ಕ್ರಯಕ್ಕೆ ಪಡೆದ ಶ್ರೀಮತಿ ಪ್ರೇಮಾದೇವಿ ರವರು ಸದರಿ ನಿವೇಶನವನ್ನು ಶ್ರೀ ಕೃಷ್ಣ ಬಿನ್ ಲೇಟ್ ಬೋರಯ್ಯ ರವರಿಗೆ ದಿ. 02–04–1987 ರಂದು ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಪ್ರಸ್ತುತ, ಶ್ರೀ ಕೃಷ್ಣ ಬಿನ್ ಲೇಟ್ ಬೋರಯ್ಯ ರವರು ಮೇಲ್ಕಂಡಂತೆ ನಿವೇಶನವನ್ನು ಕ್ರಯಕ್ಕೆ ಪಡೆದಿದ್ದು, ಪ್ರಾಧಿಕಾರಕ್ಕೆ ಹಕ್ಕುಪತ್ರ ಪಡೆಯಲು ಕೋರಿರುವುದರಿಂದ ಸದರಿಯವರ ಹೆಸರಿಗೆ ವರ್ಗಾವಣೆ ಪತ್ರ ಹಾಗೂ ಹಕ್ಕುಪತ್ರ ನೀಡಲು ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 10 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್, ವಲಯ ಕಛೇರಿ–4
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸೀಮಾ ಲಾಟ್ಕರ್ ಮೈಸೂರು ಜಿಲ್ಲಾ ನೂತನ ಎಸ್ಪಿ, ಎಂ.ಮುತ್ತುರಾಜ್ ಡಿಸಿಪಿ

ಎಸ್ಪಿ ಆರ್.ಚೇತನ್, ಡಿಸಿಪಿ ಪ್ರದೀಪ್ ಗುಂಟಿ ವರ್ಗಾವಣೆ



ನೂತನ ಎಸ್ಪಿ ಸೀಮಾ ಲಾಟ್ಕರ್ ಅವರು ನಿರ್ಗಮಿತ ಎಸ್ಪಿ ಆರ್.ಚೇತನ್ ಅವರಿಂದ ಅಧಿಕಾರ ವಹಿಸಿಕೊಂಡರು.

ಮೈಸೂರು,ಡಿ.21(ಆರ್‌ಕೆ)– ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಬೆಂಗಳೂರು ನಗರ ಅಪರಾಧ ವಿಭಾಗದ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಎಐಜಿಪಿ) ಶ್ರೀಮತಿ ಸೀಮಾ ಲಟ್ಕರ್ ಅವರನ್ನು ನಿಯೋಜಿಸಲಾಗಿದೆ.

ಮೈಸೂರು ನಗರ ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿಯಾಗಿ ರಾಜ್ಯ ಗುಪ್ತ ವಾರ್ತಾ ವಿಭಾಗದ ಎಸ್ಪಿ ಎಂ. ಮುತ್ತುರಾಜ್ ನಿಯೋಜಿತರಾಗಿದ್ದಾರೆ.



ಎಂ.ಮುತ್ತುರಾಜ್

ಮೈಸೂರು ಜಿಲ್ಲಾ ಎಸ್ಪಿಯಾಗಿದ್ದ ಆರ್. ಚೇತನ್ ಅವರನ್ನು ರಾಜ್ಯ ಗುಪ್ತ ವಾರ್ತಾ ವಿಭಾಗದ ಎಸ್ಪಿಯಾಗಿ ವರ್ಗಾಯಿಸಲಾಗಿದ್ದು, ಮೈಸೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಪ್ರದೀಪ್ ಗುಂಟಿ ವರ್ಗಾವಣೆಯಾದರೂ, ಸ್ಥಳ ನಿಯೋಜನೆಯಾಗಿಲ್ಲ.

ನೂತನ ಎಸ್ಪಿ ಸೀಮಾ ಲಟ್ಕರ್ ಅವರು ಇಂದು ಸಂಜೆ ನಿರ್ಗಮಿತ ಎಸ್ಪಿ ಆರ್. ಚೇತನ್ ಅವರಿಂದ ಅಧಿಕಾರ ವಹಿಸಿಕೊಂಡರು. ಎಂ.ಮುತ್ತುರಾಜ್ ನಾಳೆ (ಡಿ.22) ಬೆಳಗ್ಗೆ ಮೈಸೂರು ನಗರ ಕಾನೂನು–ಸುವ್ಯವಸ್ಥೆ ಡಿಸಿಪಿಯಾಗಿ ಅಧಿಕಾರ ವಹಿಸಿಕೊಳ್ಳುವರು.

ಉಳಿದಂತೆ ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಪ್ರಕಾಶ್ ದೇವರಾಜು ಅವರನ್ನು ಬೆಂಗಳೂರು ನಗರ ಅಪರಾಧ ವಿಭಾಗದ ಎಐಜಿಪಿಯಾಗಿ, ಲೋಕಾಯುಕ್ತ ಎಸ್ಪಿಯಾಗಿದ್ದ ಬಾಬಾ ಸಾಬ್ ನೇಮಗೌಡ ಅವರನ್ನು ಗದಗ ಎಸ್ಪಿಯಾಗಿ ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರಿನ ಜನತೆ ಸುಸಂಸ್ಕೃತರು ಹಾಗೂ ಶಾಂತಿ ಪ್ರಿಯರಾಗಿದ್ದು, ಇದರಿಂದ ಇಲ್ಲಿನ ಪೊಲೀಸ್ ವ್ಯವಸ್ಥೆಯೂ ಬಹಳಷ್ಟು ವಿಭಿನ್ನವಾಗಿದೆ. ಮೈಸೂರಿನಲ್ಲಿ ನಾನು ಕಾರ್ಯನಿರ್ವಹಿಸಿದ್ದ ಇಷ್ಟು ದಿನ ಸಾರ್ವಜನಿಕರು, ಜನಪ್ರತಿನಿಧಿಗಳು, ಸಹೋದ್ಯೋಗಿಗಳ ಮತ್ತು ಗ್ರಾಮಾಂತರ ಜನತೆ ಸಹಕಾರ ನೀಡಿದ್ದು, ಅವರಿಗೆಲ್ಲರಿಗೂ ಧನ್ಯವಾದ ತಿಳಿಸುತ್ತೇನೆ.
ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಕೋವಿಡ್ ನಂತರ, ಹಾಗೂ ಕೊರೊನಾ 3ನೇ ಅಲೆ, ದಸರಾ ಮಹೋತ್ಸವದಲ್ಲಿ ಭಾಗವಹಿಸಿ ಯುವ ದಸರಾ ಯಶಸ್ವಿಯಾಗಿ ನಿರ್ವಹಿಸಿದ್ದು, ಸೇರಿದಂತೆ ಪ್ರಮುಖ ಪ್ರಕರಣಗಳನ್ನು ಪತ್ತೆ ಹಚ್ಚಿದ ವಿಚಾರಗಳು ಬಹಳ ಕಾಲ ನೆನಪಿನಲ್ಲಿ ಉಳಿಯುತ್ತವೆ.
–ಆರ್.ಚೇತನ್, ನಿರ್ಗಮಿತ ಎಸ್‌ಪಿ

ಕಾರ್ಯನಿಮಿತ್ತ ಮೈಸೂರಿಗೆ ಅನೇಕ ಬಾರಿ ಭೇಟಿ ನೀಡಿದ್ದೇನೆ. ಈಗ ಮೈಸೂರಿನ ಎಸ್ಪಿಯಾಗಿ ಬಂದಿರುವುದು ತುಂಬಾ ಸಂತೋಷವಾಗಿದ್ದು, ಮೈಸೂರು ಜನತೆಗೆ ಶಕ್ತಿ ಮೀರಿ ನಾನು ಸೇವೆ ಸಲ್ಲಿಸುತ್ತೇನೆ. ಚೇತನ್ ಅವರು ಈಗಾಗಲೇ ಜಿಲ್ಲೆಯಲ್ಲಿ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ನಾನು ಅದನ್ನು ಮುಂದುವರೆಸಿಕೊಂಡು ಮೈಸೂರು ಜನತೆ ಹಾಗೂ ಸಿಬ್ಬಂದಿ ವಿಶ್ವಾಸವನ್ನು ಉಳಿಸಿಕೊಳ್ಳುತ್ತೇನೆ.
–ಸೀಮಾ ಲಾಟ್ಕರ್, ನೂತನ ಎಸ್‌ಪಿ

ಮೈಸೂರು ವಿವಿ ಕುಲಪತಿ ಸ್ಥಾನಕ್ಕೆ ಮೂವರ ಹೆಸರು ಶಿಫಾರಸು

ಮೈಸೂರು ವಿವಿಯ ಪ್ರೊ. ಡಿ.ಎಸ್.ಗುರು, ಪ್ರೊ. ಜಿ.ವೆಂಕಟೇಶ್‌ಕುಮಾರ್, ಹೈದರಾಬಾದ್ ವಿವಿಯ ಡಾ.ಶರತ್ ಅನಂತಮೂರ್ತಿ



ಪ್ರೊ. ಡಿ.ಎಸ್.ಗುರು | ಪ್ರೊ. ವೆಂಕಟೇಶ್‌ಕುಮಾರ್ | ಡಾ. ಶರತ್

ಮೈಸೂರು,ಡಿ.21(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಸ್ಥಾನಕ್ಕೆ ಮೂವರು ಹಿರಿಯ ಪ್ರಾಧ್ಯಾಪಕರ ಹೆಸರನ್ನು ಶೋಧನಾ ಸಮಿತಿಯು ಅಂತಿಮವಾಗಿ ಶಿಫಾರಸು ಮಾಡಿದೆ.

ಬೆಂಗಳೂರಿನ ಸಿಎಂಆರ್ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಎಂ.ಎಸ್.ಶಿವಕುಮಾರ್ ನೇತೃತ್ವದ ಶೋಧನಾ ಸಮಿತಿಯು ಮೈಸೂರು ವಿಶ್ವವಿದ್ಯಾನಿಲಯದ ಸೈಕಾಲಜಿ ವಿಭಾಗದ ಮುಖ್ಯಸ್ಥ ಜಿ.ವೆಂಕಟೇಶ್‌ಕುಮಾರ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಪ್ರೊ. ಡಿ.ಎಸ್.ಗುರು ಹಾಗೂ ಹೈದರಾಬಾದ್ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಪ್ರಾಧ್ಯಾಪಕ ಡಾ. ಶರತ್ ಅನಂತಮೂರ್ತಿ ಅವರ ಹೆಸರನ್ನು ಅಂತಿಮಗೊಳಿಸಿದೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ. ಯು.ಆರ್.ಅನಂತಮೂರ್ತಿ ಅವರ ಪುತ್ರ ಪ್ರೊ. ಶರತ್ ಅನಂತಮೂರ್ತಿ ಹೆಸರನ್ನು ಈ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಸ್ಥಾನಕ್ಕೆ ಶಿಫಾರಸು ಮಾಡಲಾಗಿತ್ತಾದರೂ, ಕಡೇ ಗಳಿಗೆಯಲ್ಲಿ ಅವಕಾಶ ಕೈತಪ್ಪಿತ್ತು. ಪ್ರೊ. ಯು.ಆರ್. ಅನಂತಮೂರ್ತಿ ಅವರು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಮಾತ್ರವಲ್ಲ ಇಲ್ಲಿಯೇ ಪ್ರಾಧ್ಯಾಪಕರಾಗಿದ್ದರು. ನಂತರವಷ್ಟೇ ಅವರು ಉನ್ನತ ವ್ಯಾಸಂಗಕ್ಕೆ ಇಂಗ್ಲೆಂಡಿಗೆ ತೆರಳಿದ್ದರು.

ನಾಲ್ಕು ವರ್ಷಗಳ ಕಾಲ ಕುಲಪತಿಯಾಗಿ ಸೇವೆ ಸಲ್ಲಿಸಿದ ಪ್ರೊ. ಜಿ. ಹೇಮಂತಕುಮಾರ್ ಅವರ ಅವಧಿ ನವೆಂಬರ್ 15ಕ್ಕೆ ಅಂತ್ಯಗೊಂಡಿದ್ದರಿಂದ ಪ್ರೊ.ಹೆಚ್.ರಾಜಶೇಖರ್ ಪ್ರಭಾರ ಕುಲಪತಿಗಳಾಗಿ ಮುಂದುವರಿದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಗಾಗಿ ಪ್ರೊ. ಹೆಚ್.ರಾಜಶೇಖರ್, ಪ್ರೊ.ಜಿ.ವೆಂಕಟೇಶ್‌ಕುಮಾರ್, ಪ್ರೊ. ಡಿ.ಎಸ್.ಗುರು, ಪ್ರೊ.ಶರತ್ ಅನಂತಮೂರ್ತಿ, ಪ್ರೊ.ಹೆಚ್.ಟಿ. ಬಸವರಾಜಪ್ಪ, ಪ್ರೊ.ಹೆಚ್.ಎಸ್.ಬೋಜ್ಯ ನಾಯಕ, ಪ್ರೊ. ಎಂ.ಚಂದ್ರಶೇಖರ್, ಪ್ರೊ.ಕೆ. ಚೆನ್ನಕೇಶವುಲು, ಪ್ರೊ.ಎಂ.ಧನಂಜಯ ಸೇರಿದಂತೆ ಒಟ್ಟು 71 ಮಂದಿ ಅರ್ಜಿ ಸಲ್ಲಿಸಿದ್ದರು.



ಮೈಸೂರಿನ ಅಮ್ಮಕೊಡವ ಸಮಾಜದ ವತಿಯಿಂದ ಇತ್ತೀಚೆಗೆ ಮೈಸೂರಿನ ದಾಸಪ್ರಕಾಶ ಪ್ಯಾರಡೈಸ್ ಹೋಟೆಲಿನಲ್ಲಿ ಕಾವೇರಿ ಪೂಜೆ ಮತ್ತು ಹುತ್ತರಿ ಹಬ್ಬವನ್ನು ಕದಿರು ತೆಗೆಯುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು. ಜನಾಂಗದ ಎಲ್ಲಾ ಬಾಂಧವರು ಉಪಸ್ಥಿತರಿದ್ದರು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಬುಧವಾರ ಅಧಿಕಾರ ವಹಿಸಿದ ಯಶಸ್ವಿ ಎಸ್.ಸೋಮಶೇಖರ್ ದಂಪತಿಯನ್ನು ಯುವ ಮುಖಂಡರಾದ ಸಿ.ಭಾಸ್ಕರ್, ವಿಜಯಕುಮಾರ್, ಶಶಿಕುಮಾರ್, ಅಭಿ, ಅನಿಲ್ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ನಕಲಿ ವಿಳಾಸ ನೀಡಿ ಒಂದೇ ಫೋಟೋಗೆ ಹಲವು ಸಿಮ್ ಮಾರಾಟ ಸಂಬಂಧ ಪ್ರಕರಣ ದಾಖಲು

ಮೈಸೂರು, ಡಿ.21–ನಕಲಿ ವಿಳಾಸ ನೀಡಿ ರಿಲಯನ್ಸ್ ಜಿಯೋ ಸಿಮ್ ಮಾರಾಟದ ಅಸೋಸಿಯೇಟ್ ಆಗಿ ನೇಮಕಗೊಂಡು ಒಂದೇ ಫೋಟೋಗೆ ಹಲವರ ಹೆಸರಿನಲ್ಲಿ ಸಿಮ್ ಮಾರಾಟ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಮೈಸೂರಿನ ವಾಣಿವಿಲಾಸ ಮೊಹಲ್ಲಾ ನಿವಾಸಿಯೆಂದು ಹೇಳಲಾದ ನೀಲೇಶ್ ಆರೋಪಕ್ಕೆ ಒಳಗಾದವನಾಗಿದ್ದು, ಈತ ಡೆಲ್ಲಿಯಲ್ಲಿ ಖರೀದಿಸಿದ್ದ ಜಿಯೋ ಮೊಬೈಲ್ ನಂ.9310309762 ಅನ್ನು ಹೊಂದಿದ್ದು, ಮೈಸೂರಿನ ವಿಳಾಸ ನೀಡಿ ಸಿಮ್‌ಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡುವ ಜಿಯೋ ಅಸೋಸಿಯೇಟ್ ಆಗಿ ನೇಮಕಗೊಂಡಿದ್ದಾನೆ.

ಈತ ಒಂದೇ ಭಾವಚಿತ್ರವಿರುವ ವ್ಯಕ್ತಿಗೆ ಶಾರೂಕ್ ಸನ್ ಆಫ್ ಅನ್ವರ್ ಹೆಸರಿನಲ್ಲಿ 2, ಗಂಗಾಧರ್ ಸನ್ ಆಫ್ ಬಾಚೂಸಿಂಗ್ ಹೆಸರಿನಲ್ಲಿ 3, ಹರಿಶಂಕರ್ ಸನ್ ಆಫ್ ಪುರುಷೋತ್ತಮ್ ಹೆಸರಿನಲ್ಲಿ 1 ಸಿಮ್ ಸೇರಿದಂತೆ 6 ಸಿಮ್‌ಗಳನ್ನು ನೀಡಿದ್ದಾನೆ. ಅಲ್ಲದೇ ಸೋನು ಸನ್ ಆಫ್ ಓಂ ಪ್ರಕಾಶ್ ಹೆಸರಲ್ಲಿ 2, ಓಂ ಪ್ರಕಾಶ್ ಸನ್ ಆಫ್ ಬಾಬುಲಾಲ್, ವಚೋಸಿಂಗ್ ಸನ್ ಆಫ್ ರಾಮ್‌ಸಿಂಗ್ ಮತ್ತು ರಾಮಕೃಷ್ಣ ಸನ್ ಆಫ್ ಕೃಷ್ಣ ಎಂಬ ಹೆಸರಲ್ಲಿ ತಲಾ ಒಂದು ಸಿಮ್ ಸೇರಿದಂತೆ ಎರಡು ಭಾವಚಿತ್ರಗಳಿಗೆ ವಿವಿಧ ಹೆಸರು ಹಾಗೂ ವಿಳಾಸಗಳನ್ನೊಳಗೊಂಡ 13 ಸಿಮ್‌ಗಳನ್ನು ಮಾರಾಟ ಮಾಡಿದ್ದಾನೆ. ಇದು ಗೊತ್ತಾಗುತ್ತಿದ್ದಂತೆಯೇ ಅಧಿಕಾರಿಗಳು ಎಲ್ಲಾ ಸಿಮ್‌ಗಳನ್ನು ಬ್ಲಾಕ್ ಮಾಡಿದ್ದಾರೆ. ಇದೇ ವ್ಯಕ್ತಿ ಮಂಗಳೂರಿನಲ್ಲಿ ಗಣೇಶನ್ ರಮೇಶ್ ಸನ್ ಆಫ್ ರಮೇಶ್ ಹೆಸರಿನಲ್ಲಿ ಮಂಗಳೂರು ವಿಳಾಸ ನೀಡಿ ಡೆಲ್ಲಿಯ ಬೇರೊಂದು ಮೊಬೈಲ್ ನಂಬರ್ ಮೂಲಕ ಜಿಯೋ ಅಸೋಸಿಯೇಟ್ ಆಗಿ ನೇಮಕಗೊಂಡು ಅಲ್ಲಿಯೂ ಕೂಡ ಇದೇ ರೀತಿ ಒಂದೇ ಭಾವಚಿತ್ರಕ್ಕೆ ನಕಲಿ ಆಧಾರ್ ನಂಬರ್ ಹಾಗೂ ವಿಳಾಸದೊಂದಿಗೆ ಹಲವರಿಗೆ ಸಿಮ್‌ಗಳನ್ನು ಮಾರಾಟ ಮಾಡಿದ್ದಾನೆ ಎಂದು ಡಿಯೋ ಡಿಜಿಟಲ್ ಫೈಬರ್ ಪ್ರೈ. ಕಂಪನಿ ಎಕ್ಸಿಕ್ಯೂಟಿವ್ ಎ.ವೈ.ಆನಂದ ಜಯಲಕ್ಷ್ಮೀಪುರಂ ಠಾಣೆಯಲ್ಲಿ ದೂರು ನೀಡಿದ್ದಾರೆ.

ಬಸ್‌ನಲ್ಲಿ ಗೃಹಿಣಿಯ ಚಿನ್ನಾಭರಣ, ಹಣ ಕಳವು

ಮೈಸೂರು, ಡಿ.21–ಬೆಂಗಳೂರಿಂದ ಮೈಸೂರಿಗೆ ಪ್ರಯಾಣಿಸಿದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಗೃಹಿಣಿಯ ಚಿನ್ನಾಭರಣ ಹಾಗೂ ಹಣ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಕೆ.ಆರ್.ಮೊಹಲ್ಲಾ ಬನುಮಯ್ಯ ರಸ್ತೆ ನಿವಾಸಿ ನರ್ಮದಾ(58) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಅಣ್ಣನ ಮನೆಯ ದೇವರ ಕಾರ್ಯಕ್ರಮಕ್ಕಾಗಿ ಡಿ.14ರಂದು ಬೆಂಗಳೂರಿಗೆ ತೆರಳಿದ್ದಾರೆ. ಡಿ.16ರಂದು ಸಂಜೆ 5.30ರಲ್ಲಿ ಬೆಂಗಳೂರಿನ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ರಾತ್ರಿ 9 ಗಂಟೆಗೆ ಮೈಸೂರು ತಲುಪಿದ್ದಾರೆ. ಈ ವೇಳೆ ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 75 ಗ್ರಾಂ ತೂಕದ ಚಿನ್ನಾಭರಣ ಹಾಗೂ 3 ಸಾವಿರ ರೂ. ನಗದು ಕಳುವಾಗಿದೆ. ಡಿ.18ರಂದು ಲಷ್ಕರ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವೇಶ್ಯಾವಾಟಿಕೆ: ಯುವತಿ ರಕ್ಷಣೆ

ಮೈಸೂರು,ಡಿ.21–ತಾಲೂಕು ಭುಗತಹಳ್ಳಿ ಹೊರವಲಯದ ವೆಂಕಟಗಿರಿ ಬಡಾವಣೆಯಲ್ಲಿರುವ ಮನೆಯೊಂದರಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಮಾಹಿತಿ ಮೇರೆಗೆ ದಾಳಿ ನಡೆಸಿದ ಮೈಸೂರು ಜಿಲ್ಲಾ ಮಹಿಳಾ ಠಾಣೆ ಪೊಲೀಸರು ಯುವತಿಯನ್ನು ರಕ್ಷಿಸಿ, ವೇಶ್ಯಾವಾಟಿಕೆ ನಡೆಸುತ್ತಿದ್ದ ಅಭಿ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಮೈಸೂರು ಗ್ರಾಮಾಂತರ ವಿಭಾಗದ ಡಿವೈಎಸ್‌ಪಿ ಪೂರ್ಣಚಂದ್ರ ತೇಜಸ್ವಿ ಮಾರ್ಗದರ್ಶನದಲ್ಲಿ ಮಹಿಳಾ ಠಾಣೆ ಇನ್ಸ್‌ಪೆಕ್ಟರ್ ಮಮತಾ, ಸಿಬ್ಬಂದಿಗಳಾದ ರಾಮಪ್ರಸಾದ್, ಸುನೀಲ್, ಹರೀಶ್‌ಕುಮಾರ್, ದಾಕ್ಷಾಯಿಣಿ, ಚಾಲಕ ಚಿಕ್ಕಲಿಂಗಯ್ಯ ಅವರನ್ನೊಳಗೊಂಡ ತಂಡ ದಾಳಿ ನಡೆಸಿತು. ಈ ವೇಳೆ ವೇಶ್ಯಾವಾಟಿಕೆ ನಡೆಸುತ್ತಿದ್ದ ಅಭಿ ಪರಾರಿಯಾಗಿದ್ದು, ಮನೆಯಲ್ಲಿ ಇಬ್ಬರು ಗ್ರಾಹಕರು ಮತ್ತು ಓರ್ವ ಸಂತ್ರಸ್ತ ಯುವತಿ ಇದ್ದಳೆಂದು ಹೇಳಲಾಗಿದ್ದು, ಯುವತಿಯನ್ನು ಪೊಲೀಸರು ರಕ್ಷಿಸಿದ್ದಾರೆ.

ಯುವತಿಗೆ ಹೋಟೆಲ್ ಸಿಬ್ಬಂದಿ ಲೈಂಗಿಕ ಕಿರುಕುಳ

ಮೈಸೂರು, ಡಿ.21–ಮೈಸೂರಿನ ಖಾಸಗಿ ಹೋಟೆಲ್‌ವೊಂದರ ರೂಂನಲ್ಲಿ ಭಾವೀಪತಿ ಜೊತೆ ಮಲಗಿದ್ದ ಯುವತಿಗೆ ಹೋಟೆಲ್ ಸಿಬ್ಬಂದಿಯೋರ್ವ ಲೈಂಗಿಕ ಕಿರುಕುಳ ನೀಡಿದ ಬಗ್ಗೆ ಪ್ರಕರಣ ದಾಖಲಾಗಿದೆ. ಬೆಂಗಳೂರಿನ ಕಸುವಿನಹಳ್ಳಿಯಿಂದ ತನ್ನ ಭಾವೀಪತಿ ಜೊತೆ ಡಿ.16ರಂದು ಮೈಸೂರಿಗೆ ಪ್ರವಾಸ ಬಂದಿದ್ದ 26 ವರ್ಷ ವಯಸ್ಸಿನ ಯುವತಿ ಖಾಸಗಿ ಹೋಟೆಲ್‌ವೊಂದರಲ್ಲಿ ಕೊಠಡಿ ಪಡೆದಿದ್ದರು. ಡಿ.18ರಂದು ರಾತ್ರಿ ಈಕೆ ಭಾವೀಪತಿ ಜೊತೆ ರೂಂನಲ್ಲಿ ಮಲಗಿದ್ದಾಗ ರೂಂಗೆ ನುಗ್ಗಿದ ಹೋಟೆಲ್ ಸಿಬ್ಬಂದಿ, ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದಾನೆ. ನಿದ್ದೆಯಿಂದ ಎಚ್ಚರಗೊಂಡ ಯುವತಿ ಕೂಗಿಕೊಂಡಾಗ ಪಕ್ಕದಲ್ಲೇ ಮಲಗಿದ್ದ ಭಾವೀಪತಿ ಹೋಟೆಲ್ ಸಿಬ್ಬಂದಿಯ ಕತ್ತಿನ ಪಟ್ಟಿ ಹಿಡಿದುಕೊಂಡಾಗ ಆತ ಟೀ–ಶರ್ಟ್ ಅನ್ನು ಬಿಚ್ಚಿ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಷ್ಟ್ರೀಯ ಸೇವಾ ಯೋಜನೆ; ಕೌಶಲಾಭಿವೃದ್ಧಿ ಕಾರ್ಯಾಗಾರ

ಮೈಸೂರು, ಡಿ.21– ಮಹಾರಾಜ ಕಾಲೇಜು, ಜಿಲೆಟ್ ಕಂಪನಿ ಮತ್ತು ವಿಜಯ ಕರ್ನಾಟಕ ಸಹಯೋಗದೊಂದಿಗೆ ಡಿ.22ರಂದು ಬೆಳಗ್ಗೆ 10.30 ಗಂಟೆಗೆ ಮಹಾರಾಜ ಕಾಲೇಜಿನ ಜೂನಿಯರ್ ಬಿ.ಎ ಹಾಲ್‌ನಲ್ಲಿ 2022–23ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ಉದ್ಘಾಟನಾ ಸಮಾರಂಭ ಹಾಗೂ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಸಿ.ಎ.ಶ್ರೀಧರ್ ಉದ್ಘಾಟನೆಯನ್ನು ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಮಹಾರಾಜ ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಜಿ.ಹೆಚ್.ನಾಗರಾಜ, ಜಿಲೆಟ್ ಕಂಪನಿ ತರಬೇತಿದಾರ ಸೈಯದ್ ಹಜೀಪ್, ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್ ಉಪಸ್ಥಿತರಿರುವರೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಸಮಾಜದ ಸಾಮರಸ್ಯ ಹಾಳು ಮಾಡುತ್ತಿರುವ ಬಿಜೆಪಿ: ಮರೀಗೌಡ



ಮೈಸೂರು,ಡಿ.21– ಬಿಜೆಪಿ ಸರ್ಕಾರ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೆ ಮುಸ್ಲಿಮರ ಮೇಲೆ ಹಿಂದುಗಳನ್ನು ಎತ್ತಿಕಟ್ಟಿ ಸಮಾಜದ ಸಾಮರಸ್ಯವನ್ನು ಹಾಳು ಮಾಡುತ್ತ ರಾಜಕಾರಣ ಮಾಡುತ್ತಿದ್ದು, ಇವರಿಗೆ ತಕ್ಕಪಾಠ ಕಲಿಸಲು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ.ಮರೀಗೌಡರು ಕರೆ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಭಾರತ್‌ನಗರದಲ್ಲಿ ಕೆ.ಮರೀಗೌಡರ ಹುಟ್ಟುಹಬ್ಬದ ಅಂಗವಾಗಿ ನಡೆದ ಸಮಾರಂಭದಲ್ಲಿ ಮಹಿಳೆಯರಿಗೆ ಸೀರೆ ಹಾಗೂ ಗ್ಯಾಸ್‌ಸ್ಟೌವ್, ಸಿಲಿಂಡರ್‌ಗಳನ್ನು ವಿತರಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದಾಗಿನಿಂದಲೂ ಮುಸ್ಲಿಂ ಬಾಂಧವರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿಕೊಂಡು ಬಂದಿದ್ದೀರಿ. ಮೈಸೂರು ಹುಲಿ ಟಿಪ್ಪು ಸುಲ್ತಾನ್ ಬ್ರಿಟಿಷರ ವಿರುದ್ಧ ಹೋರಾಡಿ ಈ ದೇಶಕ್ಕೆ ಸ್ವಾತಂತ್ರ ಬರಲು ಕಾರಣರಾಗಿದ್ದಾರೆ. ನಾವೆಲ್ಲರು ಅಣ್ಣತಮ್ಮಂದಿರಂತೆ ಬದುಕುತ್ತಿದ್ದೇವೆ. ಆದರೆ ಈ ಬಿಜೆಪಿ ಸರ್ಕಾರ ಬಂದ ಮೇಲೆ ಜಾತಿ ಜಾತಿಗಳಲ್ಲಿ, ಧರ್ಮ–ಧರ್ಮಗಳಲ್ಲಿ ವಿಷಬೀಜವನ್ನು ಬಿತ್ತಿ ಕೋಮುಗಲಭೆಗಳನ್ನು ಸೃಷ್ಟಿಸಿ ಗಲಭೆಗಳಲ್ಲಿ ಸಾಯುವ ಅಮಾಯಕರ ಹೆಣದ ಮೇಲೆ ರಾಜಕೀಯ ಮಾಡುತ್ತಿದ್ದಾರೆ. ಇಂತಹ ದುಷ್ಟ ಸರ್ಕಾರವನ್ನು ನೀವೆಲ್ಲರೂ ಒಂದಾಗಿ ಕಿತ್ತೊಗೆಯಬೇಕು ಎಂದರು. ಸಮಾರಂಭದಲ್ಲಿ ಮುಖಂಡರಾದ ಅಜ್ಮಲ್ ರಿಯಾಜ್, ರಫಿಕ್‌ಪಾಷ, ಕೃಷ್ಣಕುಮಾರ್‌ಸಾಗರ್, ನಾಡನಹಳ್ಳಿ ರವಿ, ರಮ್ಮನಹಳ್ಳಿ ವೆಂಕಟಯ್ಯ, ಚಿಕ್ಕೇರಿ, ಮಾಕಿ ಮಹಾದೇವ, ಧನಗಳ್ಳಿ ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಸತೀಶ್‌ಕುಮಾರ್, ಸ್ವಾಮಿ ಹಾಜರಿದ್ದರು.

ಸ್ವಚ್ಛನಗರಿಯ ಪ್ರತಿಷ್ಠಿತ ಬಡಾವಣೆಯಲ್ಲಿದೆ ಬಯಲು ಕಟ್ಟಡ ತ್ಯಾಜ್ಯ ಸಂಗ್ರಹ ಘಟಕ!



ಮೈಸೂರು,ಡಿ.21(ಎಂಕೆ)–ಸ್ವಚ್ಛನಗರಿ ಎಂದು ಕೊಚ್ಚಿಕೊಳ್ಳುವ ಮೈಸೂರಿನ ವಿಜಯನಗರ 1ನೇ ಹಂತದಲ್ಲಿ ಸದ್ದಿಲ್ಲದೆ ವಿಸ್ತಾರವಾಗಿ ಬೆಳೆಯುತ್ತಿದೆ ಬಯಲು ಕಟ್ಟಡ ತ್ಯಾಜ್ಯ ಸಂಗ್ರಹಣಾ ಘಟಕ...!

ಇಲ್ಲಿನ ರಾಜ್ಯ ಒಕ್ಕಲಿಗರ ಸಂಘದ ವಿದ್ಯಾರ್ಥಿನಿಯರ ಉಚಿತ ವಸತಿನಿಲಯದ ಹಿಂಭಾಗದಲ್ಲಿನ ರಸ್ತೆ ಹಾಗೂ ಪಾಳು ಬಿದ್ದಿರುವ ವಿಶಾಲ ಜಾಗದಲ್ಲಿ ಕಟ್ಟಡ ತ್ಯಾಜ್ಯ ದಿನೇ ದಿನೆ ವಿಸ್ತಾರವಾಗುತ್ತಿದೆ. ಇನ್ನೂ ಸ್ವಲ್ಪ ದಿನ ಕಳೆದರೆ ರಸ್ತೆಯೇ ಸಂಪೂರ್ಣವಾಗಿ ತ್ಯಾಜ್ಯದಿಂದಲೇ ಮುಚ್ಚಿ ಹೋಗುವ ಸಾಧ್ಯತೆ ಇದೆ.

ಬೆಳಗ್ಗೆಯಿಂದ ಸಂಜೆವರೆಗೆ ಕಡಿಮೆ ಎಂದರೂ 5–10 ಗೂಡ್ಸ್ ಆಟೋಗಳು, ಟ್ರ್ಯಾಕ್ಟರ್‌ಗಳಲ್ಲಿ ಕಟ್ಟಡ ತ್ಯಾಜ್ಯ ತಂದು ಸುರಿಯುತ್ತಿದ್ದರೂ ಕೇಳುವವರೇ ಇಲ್ಲದಂತಾಗಿದೆ. ಇಡೀ ಪ್ರದೇಶವೇ ಕಟ್ಟಡ ತ್ಯಾಜ್ಯದಿಂದ ತುಂಬಿ ತುಳುಕುತ್ತಿದ್ದು, ರಾತ್ರಿ ವೇಳೆ ಇತ್ತ ಸಾರ್ವಜನಿಕರು ಸುಳಿಯದಂತಾಗಿದೆ. ಕಟ್ಟಡ ತ್ಯಾಜ್ಯವಷ್ಟೇ ಅಲ್ಲದೆ ಅವಧಿ ಮುಗಿದ ಔಷಧಿ–ಮಾತ್ರೆಗಳು, ಸೌಂದರ್ಯವರ್ಧಕಗಳು, ಹಳೇ ಪ್ಲಾಸ್ಟಿಕ್ ಪದಾರ್ಥಗಳು, ಕೊಳೆತ ಗಿಡ–ಗಂಟಿಗಳ ಗುಡ್ಡೆಯೇ ಕಣ್ಣಿಗೆ ರಾಚುತ್ತಿದೆ. ಡಾಂಬರೀಕರಣಗೊಂಡು ಸಂಚಾರಕ್ಕೆ ಅಚ್ಚುಕಟ್ಟಾಗಿರುವ ರಸ್ತೆ ಕಟ್ಟಡ ತ್ಯಾಜ್ಯದಿಂದ ಆವೃತವಾಗುತ್ತಿದ್ದು, ವಾಹನಗಳ ಸಂಚಾರಕ್ಕೆ ಇಲ್ಲದಂತಾಗುತ್ತಿದೆ.

ಕಟ್ಟಡ ತ್ಯಾಜ್ಯ ಸಂಗ್ರಹಣಾ ಘಟಕ: ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲೊಂದಾಗಿರುವ ವಿಜಯನಗರದ 1ನೇ ಹಂತದ ಕಟ್ಟಡ ತ್ಯಾಜ್ಯ ಸಂಗ್ರಹಣಾ ಘಟಕ ಇದಾಗಿದೆ. ನಿತ್ಯ ತ್ಯಾಜ್ಯ ತಂದು ಸುರಿಯುತ್ತಲೇ ಇರುತ್ತಾರೆ. ಇಲ್ಲಿ ಯಾರು ಕೇಳುವವರು ಇಲ್ಲ ಎಂದು ಸ್ಥಳೀಯ ನಿವಾಸಿಗಳು ಕಿಡಿಕಾರಿದ್ದಾರೆ.



ಸಮೀಪದಲ್ಲಿಯೇ ಐದಾರು ವಿದ್ಯಾಸಂಸ್ಥೆಗಳಿವೆ, ವಿದ್ಯಾರ್ಥಿನಿಯರ ವಸತಿ ನಿಲಯವಿದೆ. ನೂರಾರು ಮನೆಗಳಿದ್ದು, ಸಾಕಷ್ಟು ಮಂದಿ ಇದೇ ರಸ್ತೆಯಲ್ಲಿ ವಾಯುವಿಹಾರಕ್ಕೆ ತೆರಳುತ್ತಾರೆ. ಲೋಡ್‌ಗಟ್ಟಲೇ ಕಸತಂದು ಸುರಿಯುತ್ತಿದ್ದರೆ ನಮ್ಮ ಆರೋಗ್ಯ ಗತಿಯೇನು? ಚಳಿಗಾಲದಲ್ಲಿ ಸಾಂಕ್ರಾಮಿಕ ರೋಗಗಳು ಬಾಧಿಸುವುದು ಹೆಚ್ಚು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಪರಾರಿ: ಗೂಡ್ಸ್ ಆಟೋ(ಕೆಎ–09 ಬಿ 7538)ದಲ್ಲಿ ಕಟ್ಟಡ ತ್ಯಾಜ್ಯ ತಂದು ಸುರಿಯುತ್ತಿದ್ದ ವ್ಯಕ್ತಿಯೊಬ್ಬರು, 'ಮೈಸೂರು ಮಿತ್ರ' ಫೋಟೋ ಕ್ಲಿಕ್ಕಿಸುತ್ತಿದ್ದಂತೆ ಸ್ಥಳದಿಂದ ಪರಾರಿಯಾದರು. ಆಟೋದಲ್ಲಿ ಇನ್ನೂ ಸ್ವಲ್ಪ ತ್ಯಾಜ್ಯವಿದ್ದರೂ ತಾವು ಮಾಡುತ್ತಿರುವುದು ತಪ್ಪೆಂದೆ ಕಾಲ್ಕಿತ್ತರು. ಆಟೋದಿಂದ ಗುದ್ದಲಿ ಮೂಲಕ ತ್ಯಾಜ್ಯ ಎಳೆದು ಕೆಳಗೆ ಬಿಸಾಡುತ್ತಿದ್ದ ವ್ಯಕ್ತಿ, ನಾನು ಮೊದಲೇ ಹೇಳಿದ್ದೆ. ಇಲ್ಲಿ ಕಸ ಸುರಿಯುವುದು ಬೇಡ ಎಂದು. ಆದರೆ ಆತ ಇಲ್ಲಿ ಯಾರು ಕೇಳುವುದಿಲ್ಲ ಎಂದು ನನ್ನನ್ನೇ ಸುಮ್ಮನಿರಿಸಿದ ಎಂದರು.

ಚೆರಸ್ ಮಾರಾಟ: ತಂದೆ, ಮಗನ ಬಂಧನ

ಮೈಸೂರು,ಡಿ.21–ಮಾದಕ ವಸ್ತು ಚೆರಸ್ ಮಾರಾಟದಲ್ಲಿ ತೊಡಗಿದ್ದ ತಂದೆ ಮತ್ತು ಮಗನನ್ನು ಮೈಸೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಸಿಬಿ ಇನ್ಸ್‌ಪೆಕ್ಟರ್ ಜಿ.ಶೇಖರ್ ನೇತೃತ್ವದ ತಂಡ ತಿ.ನರಸೀಪುರ ರಸ್ತೆಯ ಆಲನಹಳ್ಳಿ ಕೆರೆಯ ಪಕ್ಕದ ಅರಳೀಮರದ ಬಳಿ ಸುಜುಕಿ ಆಕ್ಸೆಸ್ ಸ್ಕೂಟರ್ (ಕೆಎ 09 ಇಎಸ್ 7011) ಮೇಲೆ ಕುಳಿತಿದ್ದ ಸುರೇಶ್ ಅಲಿಯಾಸ್ ಸೂರಿ ಎಂಬಾತನನ್ನು ವಶಕ್ಕೆ ಪಡೆದು, ತಪಾಸಣೆ ನಡೆಸಿದಾಗ ಒಟ್ಟು 8 ಸ್ಟೀಲ್ ಡಬ್ಬಿಗಳಲ್ಲಿದ್ದ 283 ಗ್ರಾಂ ಚೆರಸ್ ಮತ್ತು 2 ಖಾಲಿ ಸ್ಟೀಲ್ ಡಬ್ಬಿಗಳು ಹಾಗೂ ಡಿಜಿಟಲ್ ತೂಕದ ಯಂತ್ರ ದೊರೆತಿದೆ. ಆತನನ್ನು ತೀವ್ರವಾಗಿ ವಿಚಾರಿಸಿದಾಗ ಆತನ ತಂದೆ ಎಂ.ಶ್ರೀನಿವಾಸ ಅಲಿಯಾಸ್ ಗಾಂಜಾ ಸೀನಾ ಎಂಬಾತ ಚೆರಸ್ ಅನ್ನು ಮಗನಿಗೆ ಕೊಟ್ಟು ಮಾರಾಟ ಮಾಡಿಸುತ್ತಿದ್ದ ಎಂಬುದು ಗೊತ್ತಾಗಿದೆ. ಇಬ್ಬರನ್ನೂ ಬಂಧಿಸಿರುವ ಸಿಸಿಬಿ ಪೊಲೀಸರು ಅವರನ್ನು ಆಲನಹಳ್ಳಿ ಠಾಣೆಗೆ ಒಪ್ಪಿಸಿ ಪ್ರಕರಣ ದಾಖಲಿಸಿದ್ದಾರೆ. ಬಂಧಿತರಲ್ಲಿ ಶ್ರೀನಿವಾಸ್ ಅಲಿಯಾಸ್ ಗಾಂಜಾ ಸೀನಾ ಈ ಹಿಂದೆ ಗಾಂಜಾ ಮಾರಾಟ ಮಾಡುತ್ತಿದ್ದ. ಇದೀಗ ಚೆರಸ್ ಮಾರಾಟದಲ್ಲಿ ತೊಡಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಮತಿ ಶಾಲೆಯ ವಾರ್ಷಿಕೋತ್ಸವ

ಕಣ್ಣಿಗೆ ಹಬ್ಬದ ಸಂಭ್ರಮ ತಂದ ಮಕ್ಕಳ ಹಾಡು, ನೃತ್ಯ



ಮೈಸೂರು,ಡಿ.21(ಎಂಕೆ)–ಬಣ್ಣ ಬಣ್ಣದ ವಸ್ತ್ರತೊಟ್ಟು ಕಂಗೊಳಿಸುತ್ತಿದ್ದ ವಿದ್ಯಾರ್ಥಿಗಳ ವಿವಿಧ ಬಗೆ ಹಾಡು–ನೃತ್ಯ ಪೋಷಕ ವೃಂದದ ಹೃನ್ಮನ ತಣಿಸಿತು.

ಕಲಾಮಂದಿರದಲ್ಲಿ ಪ್ರಮತಿ ಹಿಲ್‌ವ್ಯೂ ಅಕಾಡೆಮಿ ಶಾಲೆಯ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನದಲ್ಲಿ ಮಿಂದೆದ್ದ ವಿದ್ಯಾರ್ಥಿಗಳ ಸಮೂಹ ನಾಡಿನ ಕಲೆ–ಸಾಹಿತ್ಯ, ಸಂಸ್ಕೃತಿಯನ್ನು ಅನಾವರಣಗೊಳಿಸಿದರು.

ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಸಂಭ್ರಮವನ್ನು ಇಮ್ಮಡಿಗೊಳಿಸಿದ ಖ್ಯಾತ ಚಿತ್ರನಟಿ ಹರ್ಷಿಕಾ ಪೂಣಚ್ಚ, ವಿದ್ಯಾರ್ಥಿಗಳಿಗೆ ಬದುಕಿನ ಪಾಠ ತಿಳಿಸಿಕೊಟ್ಟರು. ನಾನು ಕೂಡ ಬಿಇ ಎಲೆಕ್ಟ್ರಾನಿಕ್ ವಿದ್ಯಾರ್ಥಿನಿ. ಎಲ್ಲಾ ಸೆಮಿಸ್ಟರ್‌ಗಳಲ್ಲಿ ಪ್ರಥಮ ಸ್ಥಾನ ಪಡೆದು, ಅಂತಿಮ ವರ್ಷದಲ್ಲಿ ಗೋಲ್ಡ್ ಮೆಡಲ್ ಗಳಿಸಿದ್ದೆ. ಆದರೆ ನಂತರ ಆಯ್ಕೆ ಮಾಡಿಕೊಂಡಿದ್ದು ಕಲಾಸೇವೆ ಎಂದರು. ಮನುಷ್ಯ ಸದಾ ಸತ್ಯದ ಜೊತೆಯಿರಬೇಕು. ಪರಸ್ಪರ ಸಹಕಾರ, ಸಹಾಯ ನೀಡುವ ಮಮಕಾರದ ಮನೋಭಾವನೆ ಬೆಳೆಸಿಕೊಳ್ಳಬೇಕು. ಓದುವುದು ಜ್ಞಾನಕ್ಕಾಗಿ. ಆದರೆ ಬದುಕು ಕಟ್ಟಿಕೊಳ್ಳಲು ಸಾಕಷ್ಟು ಒಳ್ಳೆಯ ಮಾರ್ಗಗಳಿವೆ. ಸದಾ ಸತ್ಯದ ಜೊತೆಗಿದ್ದು, ಸಾಧನೆ ಮಾಡುವ ಸಂಕಲ್ಪವಿದ್ದರೆ ಸಾಧಿಸುವುದು ಸುಲಭ ಎಂದರು. ಪ್ರಮತಿ ಹಿಲ್‌ವ್ಯೂ ಅಕಾಡೆಮಿ ಕಾರ್ಯದರ್ಶಿ ಹೆಚ್.ವಿ.ರಾಜೀವ್, ಖಜಾಂಚಿ ಫಣಿರಾಜ್, ಪ್ರಾಂಶುಪಾಲರಾದ ಸುನೀಲ್ ಧಯಾಕರ್ ಮತ್ತು ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.


ನಾಗರತ್ನಮ್ಮ ನಿಧನ



ಮೈಸೂರು, ಡಿ.21(ಆರ್‌ಕೆ)–ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ಲೇಟ್ ರಂಗಪ್ಪ ಅವರ ಪತ್ನಿ ಶ್ರೀಮತಿ ನಾಗರತ್ನಮ್ಮ(82) ಅವರು ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ನಾಳೆ(ಡಿ.22) ಬೆಳಗ್ಗೆ 11.30 ಗಂಟೆಗೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಡಾ.ಬಿ.ಆರ್.ಅಂಬೇಡ್ಕರ್ ಕಾರ್ಮಿಕ ಲೋಕದ ಧ್ರುವತಾರೆ

ಬ್ರಿಟಿಷ್ ಆಡಳಿತದಲ್ಲೇ ಕಾರ್ಮಿಕರ ಪರ ಕಾನೂನು ತಂದರು; ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ



ಮೈಸೂರು,ಡಿ.21(ಪಿಎಂ)–ಸ್ವಾತಂತ್ರ್ಯ ಪೂರ್ವದಲ್ಲೇ ದೇಶದ ಅಂದಿನ ಬ್ರಿಟಿಷ್ ಕೌನ್ಸಿಲ್‌ನಲ್ಲಿ ಕಾರ್ಮಿಕ ಮಂತ್ರಿಯಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್, ಕಾರ್ಮಿಕ ಪರ ಕಾನೂನುಗಳನ್ನು ಜಾರಿಗೊಳಿಸಿದರು. ಅವರು ಕಾರ್ಮಿಕ ಲೋಕದ ಧ್ರುವತಾರೆ ಎಂದು ಮೈಸೂರಿನ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಕುವೆಂಪು ನಗರ ಘಟಕದ ಡಾ.ಬಿ.ಆರ್.ಅಂಬೇಡ್ಕರ್ ಬಳಗದಿಂದ ಹೊರತಂದಿರುವ ಬುದ್ಧ, ಬಸವ, ಅಂಬೇಡ್ಕರ್ ಭಾವಚಿತ್ರಗಳನ್ನು ಒಳಗೊಂಡ 2023ರ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಡಾ.ಅಂಬೇಡ್ಕರ್ ಭಾರತದ ಪ್ರಜಾಪ್ರಭುತ್ವದ ಪಿತಾಮಹ. ಇಡೀ ವಿಶ್ವವೇ ಇಂದು ಅಂಬೇಡ್ಕರ್ ಅವರ ಮಾನವೀಯ ಚಿಂತನೆಗಳತ್ತ ಮುಖ ಮಾಡುತ್ತಿದೆ. ಬ್ರಿಟಿಷ್ ಕೌನ್ಸಿಲ್‌ನಲ್ಲಿ ಅವರು ಕಾರ್ಮಿಕ ಮಂತ್ರಿಯಾಗಿದ್ದರು. 1942ರಿಂದ 46ರವರೆಗೆ ಮಂತ್ರಿಯಾಗಿದ್ದ ಅವರು ಕಾರ್ಮಿಕ ಪರವಾದ 9 ಮಸೂದೆಗಳನ್ನು ಮಂಡಿಸಿದ್ದರು. ಅವು ಕಾನೂನುಗಳಾಗಿ ಜಾರಿಗೊಳ್ಳಲು ಕಾರಣರಾದರು ಎಂದರು.

ಅಂದು 12ರಿಂದ 13 ಗಂಟೆ ಕಾಲ ಕಾರ್ಮಿಕರಿಂದ ದುಡಿಸಿಕೊಳ್ಳಲಾಗುತ್ತಿತ್ತು. ಇದಕ್ಕೆ ಕಡಿವಾಣ ಹಾಕಲು ಅಂಬೇಡ್ಕರ್ ಅವರು ದಿನಕ್ಕೆ 8 ಗಂಟೆ ಅವಧಿಯಷ್ಟೇ ಕೆಲಸ ಮಾಡಬೇಕೆಂದು ಕಾನೂನು ತಂದರು. ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ನೀಡಬೇಕೆಂಬುದು ಸೇರಿದಂತೆ ಅನೇಕ ಕಾರ್ಮಿಕರ ಪರವಾದ ಕಾನೂನುಗಳನ್ನು ಅವರು ಜಾರಿಗೊಳಿಸಿದರು. ಹಾಗಾಗಿ ಅವರು ಕಾರ್ಮಿಕ ಲೋಕದ ಧ್ರುವತಾರೆ ಎಂದು ಬಣ್ಣಿಸಿದರು.

ಅಂಬೇಡ್ಕರ್ ಅಂದರೆ ಮನುಷ್ಯನಿಗೆ ಅಗತ್ಯವಿರುವ ಆಮ್ಲಜನಕ ಇದ್ದಂತೆ ಎಂದು ಫ್ರಾನ್ಸ್‌ನ ಪತ್ರಕರ್ತರೊಬ್ಬರು ಬಣ್ಣಿಸಿದ್ದಾರೆ. ಅಂಬೇಡ್ಕರ್ ಅವರು ಜಾತಿ, ವರ್ಗ, ವರ್ಣ ರಹಿತ ಸಮಾನತೆ ಸಮಾಜ ಕಟ್ಟುವ ಕೆಲಸ ಮಾಡಿದ್ದಾರೆ. ಆದಾಗ್ಯೂ ಇಂದಿಗೂ ಅಸಮಾನತೆ ಜೀವಂತವಾಗಿದ್ದು, ಈ ಎಲ್ಲವನ್ನೂ ಸರಿಪಡಿಸಲು ಅಂಬೇಡ್ಕರ್ ಅವರೇ ಉತ್ತರ ಎಂದು ತಿಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಕಾರ್ಮಿಕ ಸಮುದಾಯದ ಹಕ್ಕುಗಳನ್ನು ಪ್ರತಿಪಾದಿಸಿ ಅವುಗಳನ್ನು ಸಂರಕ್ಷಣೆ ಮಾಡಿದವರು ಡಾ.ಅಂಬೇಡ್ಕರ್. ಅವರು ಭಾರತ ಮಾತ್ರವಲ್ಲ, ಪ್ರಪಂಚದ ಜ್ಞಾನ ಶಿಖರ. ದುಡಿಯುವ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಸ್ವಾತಂತ್ರ್ಯ ಪೂರ್ವದಲ್ಲೇ ಅವರು ಶ್ರಮಿಸಿದರು ಎಂದು ಸ್ಮರಿಸಿದರು.

ಸಾವರ್ಕರ್ ಫೋಟೋಗೆ ಅಸಮಾಧಾನ: ಪ್ರಜಾಪ್ರಭುತ್ವದ ವಿರೋಧಿ, ಬ್ರಿಟಿಷರ ಏಜೆಂಟ್ ಆಗಿದ್ದವರ ಫೋಟೋವನ್ನು ಸುವರ್ಣಸೌಧದಲ್ಲಿ ಹಾಕಲಾಗಿದ್ದು, ಅವರು ನಿಜಕ್ಕೂ ದೇಶಕ್ಕಾಗಿ ಸೇವೆ ಸಲ್ಲಿಸಿದ್ದರೆ ಸಂಸತ್ ಭವನ, ವಿಧಾನಸೌಧದಲ್ಲಿ ಅವರ ಫೋಟೋವನ್ನು ಈವರೆಗೆ ಏಕೆ ಹಾಕಿರಲಿಲ್ಲ ಎಂದು ಸಾವರ್ಕರ್ ಹೆಸರು ಉಲ್ಲೇಖಿಸದೇ ಪ್ರಶ್ನಿಸಿದರು.

ಮುಂದಿನ 2023ರ ರಾಜ್ಯ ವಿಧಾನಸಭಾ ಚುನಾವಣೆ, 2024ರ ಲೋಕಸಭಾ ಚುನಾವಣೆಯಲ್ಲಿ ಆಸೆ ಆಮಿಷಕ್ಕೆ ಒಳಗಾಗದೇ ಅತ್ಯಂತ ವಿವೇಚನೆಯಿಂದ ಮತದಾನ ಮಾಡಬೇಕಿದೆ ಎಂದರು. ಕೆಎಸ್‌ಆರ್‌ಟಿಸಿ ಕುವೆಂಪುನಗರ ಘಟಕದ ವ್ಯವಸ್ಥಾಪಕ ಕೆ.ಶ್ರೀನಿವಾಸ್, ಮೈಸೂರು ಜಿಲ್ಲಾ ಎಸ್‌ಸಿ–ಎಸ್‌ಟಿ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ರಮೇಶ್‌ಬಾಬು, ಬಳಗದ ಕೆ.ಮಹದೇವಸ್ವಾಮಿ ಹಾಜರಿದ್ದರು.

ಐದನೇ ಪುಟದಿಂದ

ಮತ್ತೆ ಕೋವಿಡ್ ಪರೀಕ್ಷೆ ಆರಂಭ

ಮಾಂಡವಿಯಾ ಅವರ ಅಧ್ಯಕ್ಷತೆಯಲ್ಲಿ ನಡೆದ ತಜ್ಞರ ಸಭೆಯು ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಚೀನಾ ಸೇರಿದಂತೆ ವಿವಿಧ ದೇಶಗಳಿಂದ ಆಗಮಿಸುವ ಅಂತರರಾಷ್ಟ್ರೀಯ ವಿಮಾನ ಪ್ರಯಾಣಿಕರಿಗೆ ರ್‍ಯಾಂಡಮ್ ಸ್ಯಾಂಪಲ್ ಪರೀಕ್ಷೆ ಮಾಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮಾಂಡವಿಯಾ ಅವರು, ದೇಶದಲ್ಲಿ ಕೋವಿಡ್ ಇನ್ನೂ ಮುಗಿದಿಲ್ಲ. "ಸಂಬಂಧಿತ ಎಲ್ಲರಿಗೂ ಎಚ್ಚರಿಕೆ ನೀಡುವಂತೆ ಮತ್ತು ಕಣ್ಗಾವಲು ಹೆಚ್ಚಿಸುವಂತೆ ನಾನು ಸೂಚಿಸಿದ್ದೇನೆ. ಯಾವುದೇ ಪರಿಸ್ಥಿತಿಯನ್ನು ನಿರ್ವಹಿಸಲು ನಾವು ಸಿದ್ಧರಿದ್ದೇವೆ ಎಂದು ಹೇಳಿದ್ದಾರೆ.

ಎಚ್ಚರವಿರಲಿ; ಆತಂಕ ಬೇಡ

ಮತ್ತು ಕುಟುಂಬ ಕಲ್ಯಾಣ ಸಚಿವ ಡಾ. ಸುಧಾಕರ್, ಎಲ್ಲಾ ರೋಗಿಗಳ ಮಾದರಿಗಳನ್ನು ಜಿನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ. ಅದನ್ನು ಅನುಷ್ಠಾನಗೊಳಿಸುವುದಾಗಿ ತಿಳಿಸಿದ್ದಾರೆ. ಚೀನಾ, ಜಪಾನ್ ಸೇರಿದಂತೆ ಕೆಲ ದೇಶಗಳಲ್ಲಿ ಕೋವಿಡ್‌ನ ಹೆಚ್ಚು ಪ್ರಕರಣಗಳು ಕಂಡುಬರುತ್ತಿವೆ. ಚೀನಾದಲ್ಲಿ ಆಸ್ಪತ್ರೆ ದಾಖಲಾತಿ ಕೂಡ ಹೆಚ್ಚಾಗುತ್ತಿದೆ. ಆದ್ದರಿಂದ ಲಸಿಕೆಯ ಮೂರನೇ ಡೋಸ್ ಪಡೆಯಲು ಆದ್ಯತೆ ನೀಡಬೇಕಿದೆ. ಹೊಸದಾಗಿ ಸೋಂಕಿಗೊಳಗಾಗುವವರ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸ್ ಪರೀಕ್ಷೆಗೆ ನೀಡಲು ಕೇಂದ್ರ ಸರ್ಕಾರದಿಂದ ಸೂಚನೆ ಬಂದಿದೆ. ಇದಕ್ಕೆ ಈಗಾಗಲೇ ಕ್ರಮ ವಹಿಸಲಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ ಕೆಲ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕಿದೆ. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಅತೀ ಹೆಚ್ಚು ಪ್ರಯಾಣಿಕರು ಬರುತ್ತಿದ್ದಾರೆ. ಇಲ್ಲಿಯೂ ನಿಗಾ ಇರಿಸಲು ಆರಂಭಿಸಲಾಗುವುದು. ಎರಡು ಡೋಸ್‌ಗಳಲ್ಲಿ ಶೇ.100ರಷ್ಟು ಸಾಧನೆಯಾಗಿದೆ. ಆದರೆ ಅನೇಕರು ಮೂರನೇ ಡೋಸ್ ಪಡೆದಿಲ್ಲ. ಅಂತಹವರು ಮುಂದೆ ಬಂದು ಮೂರನೇ ಲಸಿಕೆ ಪಡೆಯಬೇಕು ಎಂದು ಮನವಿ ಮಾಡಿದರು.

ಕೋವಿಡ್ ಬೂಸ್ಟರ್ ಡೋಸ್ ತೆಗೆದುಕೊಳ್ಳಿ

ತಜ್ಞರು ಮತ್ತು ಅಧಿಕಾರಿಗಳೊಂದಿಗೆ ಪರಿಸ್ಥಿತಿಯನ್ನು ಪರಿಶೀಲಿಸಿದ್ದೇನೆ. ಕೋವಿಡ್ ಇನ್ನೂ ಮುಗಿದಿಲ್ಲ. ಎಲ್ಲರು ಎಚ್ಚರದಿಂದ ಇರುವಂತೆ ಮತ್ತು ಕಣ್ಗಾವಲು ಬಲಪಡಿಸುವಂತೆ ಸೂಚಿಸಿದ್ದೇನೆ. ಯಾವುದೇ ಪರಿಸ್ಥಿತಿಯನ್ನು ನಿಭಾಯಿಸಲು ನಾವು ಸಿದ್ಧರಿದ್ದೇವೆ' ಎಂದು ಮಾಂಡವಿಯಾ ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ಆರೋಗ್ಯ ಕಾರ್ಯದರ್ಶಿಗಳು, ಔಷಧೀಯ ಇಲಾಖೆ, ಜೈವಿಕ ತಂತ್ರಜ್ಞಾನ ಇಲಾಖೆ, ಆಯುಷ್, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮಹಾನಿರ್ದೇಶಕ ರಾಜೀವ್ ಬಹ್ಲ್, ಪೌಲ್ ಮತ್ತು ಇಮ್ಯುನೈಸೇಶನ್ ಕುರಿತಾದ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪು (ಎನ್‌ಟಿಎಜಿಐ) ಅಧ್ಯಕ್ಷ ಡಾ ಎನ್.ಕೆ. ಅರೋರಾ ಸೇರಿದಂತೆ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

ಪರಿವರ್ತಿಸುವ ವಿಧಾನ ಸರಳ

ಭಾಗವನ್ನು ಕೃಷಿ ಯೇತರ ಉದ್ದೇಶಕ್ಕಾಗಿ ಪರಿವರ್ತಿ ಸಲು ಇಚ್ಛಿಸಿದರೆ ಜಿಲ್ಲಾಧಿಕಾರಿಯ ವರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾಧಿಕಾರಿಯು ನಿಯಮಗಳಿಗೆ ಒಳಪಟ್ಟು ಅನುಮತಿ ಯನ್ನು ನಿರಾಕರಿಸಬಹುದು ಅಥವಾ ತಾನು ಯುಕ್ತವೆಂದು ಆಲೋಚಿಸು ವಂತಹ ಷರತ್ತುಗಳಿಗೆ ಒಳಪಟ್ಟು ಕೊಡ ಬಹುದಾಗಿದೆ ಎಂದು ಹೇಳಿದರು. ಅರ್ಜಿದಾರರು ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿದಾಗ ಕರ್ನಾಟಕ ಭೂ ಕಂದಾಯ ಕಾಯ್ದೆ (Karnataka Land Revenue Act), 1964ರ ಕಲಂ 96(4)ರನ್ವಯ ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಕಂದಾಯ ವಿಧಿಸಲಾಗಿರುವ ಅಥವಾ ಬೇಸಾಯದ ಉದ್ದೇಶಕ್ಕೆ ಹೊಂದಿರುವ ಯಾವುದೇ ಭೂಮಿಯನ್ನು ಯಾವುದೇ ಇತರೆ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಯ ಅನುಮತಿಯಿಲ್ಲದೇ ಕಟ್ಟಡಗಳನ್ನು ಕಟ್ಟುವುದು ಅಥವಾ ಉಪಯೋಗ ಮಾಡಿದ್ದಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 96(4)ರನ್ವಯ ದಂಡ ವಿಧಿಸಿ, ಭೂ ಪರಿವರ್ತನೆಗೊಳಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆ ನಡೆಸಿದ ಕೇಂದ್ರ ಆರೋಗ್ಯ ಸಚಿವ

ಜಿನೋಮ್ ಸೀಕ್ವೆನ್ಸಿಂಗ್ ಪ್ರಮಾಣವು ಹೆಚ್ಚಾದರೆ ಮಾತ್ರ ದೇಶದಲ್ಲಿ ಹರಡುತ್ತಿರುವ ಹೊಸ ರೂಪಾಂತರಿಗಳನ್ನು ಪತ್ತೆ ಮಾಡಲು ಹಾಗೂ ಸಮುದಾಯ ಆರೋಗ್ಯಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಕೇಂದ್ರ ಆರೋಗ್ಯ ಇಲಾಖೆ ಕಾರ್ಯದರ್ಶಿ ರಾಜೇಶ್ ಭೂಷಣ್ ರಾಜ್ಯಗಳಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ. ಕೊವಿಡ್ ತಪಾಸಣೆಯನ್ನು ಹೆಚ್ಚಿಸಬೇಕು. ಪಾಸಿಟಿವ್ ಬಂದ ಎಲ್ಲ ಮಾದರಿಗಳನ್ನೂ ಜಿನೋಮ್ ಸೀಕ್ವೆನ್ಸಿಂಗ್‌ಗಾಗಿ ಇನ್‌ಸಾಕಾಗ್ ಪ್ರಯೋಗಾಲಯಗಳಿಗೆ ಕಡ್ಡಾಯವಾಗಿ ಕಳುಹಿಸಿಕೊಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಚೀನಾ ಸೇರಿದಂತೆ ವಿಶ್ವದ ಇತರ ದೇಶಗಳ ಕೊವಿಡ್ ಸೋಂಕು ಪ್ರಕರಣಗಳ ಅಂಕಿಅಂಶ ಮತ್ತು ಆರೋಗ್ಯ ಪರಿಸ್ಥಿತಿಯನ್ನು ಗಮನಿಸಲು ಕೇಂದ್ರ ಸರ್ಕಾರವು ಆಂತರಿಕ ಕಾರ್ಯಪಡೆಯೊಂದನ್ನು ರಚಿಸಿದೆ. ಈ ಸಮಿತಿಯಲ್ಲಿ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳಿದ್ದು, ಭಾರತದ ಮೇಲಿನ ಪರಿಣಾಮ ಮತ್ತು ಸ್ಥಳೀಯವಾಗಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಕಣ್ಗಾವಲು ಇರಿಸಲು, ತುರ್ತು ನಿರ್ಧಾರ ತೆಗೆದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

ಯಶಸ್ವಿ ಎಸ್.ಸೋಮಶೇಖರ್ ಅಧಿಕಾರ ಸ್ವೀಕಾರ

ಅನುಷ್ಠಾನಕ್ಕೆ ಒತ್ತು ಕೊಟ್ಟು ನನ್ನ ಅಧಿಕಾರಾವಧಿಯಲ್ಲಿ ಉತ್ತಮ ಕೆಲಸ ಮಾಡುವ ಮೂಲಕ ಮೈಸೂರು ನಗರ ಮತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ತರಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿಯೂ ಸೋಮಶೇಖರ್ ತಿಳಿಸಿದರು. ನನ್ನ ಮೇಲಿನ ವಿಶ್ವಾಸ, ನಂಬಿಕೆ ಯಿಂದ ಮುಡಾ ಅಧ್ಯಕ್ಷರನ್ನಾಗಿ ನೇಮಕ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಹಕರಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದರು, ಶಾಸಕರು ಹಾಗೂ ಬಿಜೆಪಿ ಎಲ್ಲಾ ಮುಖಂಡರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮುಡಾ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ ಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಳ್ಳೆಯ ಕೆಲಸಗಳನ್ನು ಮಾಡಲು ಪ್ರಯತ್ನಿಸುವುದಾಗಿ ತಿಳಿಸಿದರು. ಶಾಸಕ ಎಲ್.ನಾಗೇಂದ್ರ, ಮಾಜಿ ವಿಧಾನಪರಿಷತ್ ಸದಸ್ಯರಾದ ಡಿ.ಮಾದೇಗೌಡ, ತೋಂಟದಾರ್ಯ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣ ಗೌಡ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಸೂಪ ರಿಂಟೆಂಡಿಂಗ್ ಇಂಜಿನಿಯರ್ ಚೆನ್ನಕೇಶವ ಸೇರಿದಂತೆ ಇತರರು ನೂತನ ಅಧ್ಯಕ್ಷರಿಗೆ ಪುಷ್ಪಗುಚ್ಛ ನೀಡಿ ಶುಭ ಕೋರಿದರು.

ಸಂಸದ ಪ್ರತಾಪ್ ಸಿಂಹ ಮನವಿ

ಸ್ಪಂದಿಸಿದ್ದಾರೆ. ನವದೆಹಲಿಯಲ್ಲಿ ಬುಧವಾರ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಸಂಸದರು, ಭೇಟಿ ಮಾಡಿ ಸಲ್ಲಿಸಿದ ಸದರಿ ಮನವಿಗೆ ಅವರು ಸಕರಾತ್ಮಕ ಸ್ಪಂದಿಸಿದ್ದಾರೆ. ಸಂಸದರು ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ. ಉತ್ತರ ಪ್ರದೇಶದ ಯಮುನಾ ಎಕ್ಸ್‌ಪ್ರೆಸ್ ವೇ, ಗಂಗಾ ಎಕ್ಸ್‌ಪ್ರೆಸ್ ವೇ, ಮಧ್ಯಪ್ರದೇಶದ ನರ್ಮದಾ ಎಕ್ಸ್‌ಪ್ರೆಸ್ ವೇ' ಇರುವಂತೆಯೇ ಮೈಸೂರು–ಬೆಂಗಳೂರು ಹೆದ್ದಾರಿಗೆ 'ಕಾವೇರಿ ಎಕ್ಸ್‌ಪ್ರೆಸ್ ವೇ' ಎಂದು ನಾಮಕರಣ ಮಾಡುವಂತೆ ಕೇಂದ್ರ ಸಚಿವ ನಿತಿನ್‌ಗಡ್ಕರಿ ಅವರಿಗೆ ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದರು. ಗಂಗಾ, ಯಮುನಾ, ಗೋದಾವರಿ, ಸರಸ್ವತಿ, ನರ್ಮದಾ, ಸಿಂಧು ಮತ್ತು ಕಾವೇರಿ ನದಿಗಳನ್ನು ಭಾರತದ ಏಳು ಅತ್ಯಂತ ಪವಿತ್ರ ನದಿಗಳೆಂದು ಪರಿಗಣಿಸಲಾಗಿದೆ. ಕಾವೇರಿ ನದಿಯು ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ತಲಕಾವೇರಿಯ ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ ತನ್ನ ಮೂಲ ಹೊಂದಿದೆ. ಈ ನದಿಯು ಭಗವಾನ್ ವಿಷ್ಣುವಿನ ದಂತಕಥೆಯನ್ನು ಹೊಂದಿದೆ.

ಭಾರತಮಾಲಾ ಪರಿಯೋಜನೆ ಹಂತ–ಎಲ್ ಅಡಿಯಲ್ಲಿ ಸದರಿ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಕಾರ್ಯಗತಗೊಳಿಸಲಾಗುತ್ತಿದೆ. ಈ ಹೆದ್ದಾರಿ ನಿರ್ಮಾಣದಿಂದ ಆರ್ಥಿಕ, ಸಾಮಾಜಿಕ ಪ್ರಗತಿ ಸೇರಿದಂತೆ ಬಹು ಉಪಯೋಗಗಳು ಆಗಲಿವೆ. ಈ ಹೆದ್ದಾರಿಗೆ 'ಕಾವೇರಿ ಎಕ್ಸ್‌ಪ್ರೆಸ್ ವೇ' ಎಂಬ ನಾಮಕರಣದ ಮೂಲಕ ಪವಿತ್ರ ಕಾವೇರಿ ನದಿಗೆ ಗೌರವ ಸಲ್ಲಿಸಬಹುದು ಎಂದು ಸಂಸದರು ತಮ್ಮ ಮನವಿಯಲ್ಲಿ ಪ್ರಸ್ತಾಪಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸಿ: ಚನ್ನರಾಯಪಟ್ಟಣ–ಹೊಳೆನರಸೀಪುರ–ಅರಕಲಗೂಡು–ಕೊಡ್ಲಿಪೇಟೆ–ಮಡಿಕೇರಿ–ವಿರಾಜಪೇಟೆ ಮಾರ್ಗವಾಗಿ ಮಾಕುಟ್ಟ (ಕೇರಳ ಬಾರ್ಡರ್) ಸಂಪರ್ಕಿಸುವ ಹೆದ್ದಾರಿ (198 ಕಿ.ಮೀ.) ಸೇರಿದಂತೆ ರಾಜ್ಯದ 6 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆಯೂ ಸಂಸದರು ಮನವಿ ಸಲ್ಲಿಸಿದರು. ಮೈಸೂರು–ಹುಣಸೂರು–ಗೋಣಿಕೊಪ್ಪ ಮಾರ್ಗವಾಗಿ ಕಣ್ಣೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ (160 ಕಿ.ಮೀ.) ಹೆದ್ದಾರಿ, ಕೆಳಪಟ್ಟ–ಮಾನಂದವಾಡಿ–ಹೆಚ್.ಡಿ.ಕೋಟೆ–ಜಯಪುರ ಮಾರ್ಗವಾಗಿ ಮೈಸೂರು ಸಂಪರ್ಕಿಸುವ (90 ಕಿ.ಮೀ.) ಹೆದ್ದಾರಿ, ಶ್ರೀರಂಗಪಟ್ಟಣ–ಕೆ.ಆರ್.ಪೇಟೆ–ಚನ್ನರಾಯಪಟ್ಟಣ ಮಾರ್ಗವಾಗಿ ಅರಸೀಕೆರೆ ಸಂಪರ್ಕಿಸುವ (56.04 ಕಿ.ಮೀ.) ಹೆದ್ದಾರಿ, ಮಳವಳ್ಳಿಯಿಂದ ಮೈಸೂರು ಸಂಪರ್ಕಿಸುವ (50 ಕಿ.ಮೀ.) ಹೆದ್ದಾರಿ ಮತ್ತು ಪಾಂಡವಪುರ–ಅರಸೀಕೆರೆ ಮಾರ್ಗವಾಗಿ ಕೆ.ಆರ್.ಪೇಟೆ ಸಂಪರ್ಕಿಸುವ (110 ಕಿ.ಮೀ.) ಹೆದ್ದಾರಿ ಸೇರಿದಂತೆ 6 ರಾಜ್ಯ ಹೆದ್ದಾರಿಗಳನ್ನು 'ರಾಷ್ಟ್ರೀಯ ಹೆದ್ದಾರಿ' ಯಾಗಿ ಘೋಷಿಸುವಂತೆ ಸಂಸದರು ಮನವಿಯಲ್ಲಿ ಕೋರಿದ್ದಾರೆ.

ಮಂಡ್ಯ ಜಿಲ್ಲೆಗೆ ಅನ್ಯಾಯ

ಆಗಮನ–ನಿರ್ಗಮನಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಉಸ್ತುವಾರಿ ಸಚಿವರಿಗೆ ಅಧಿಕಾರಿಗಳು ತಿಳಿಸಿದ್ದರು. ಆದರೆ, ಇಂದು ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣಕ್ಕೆ ಚನ್ನಪಟ್ಟಣ ತಾಲೂಕಿನ ಚಾಮುಂಡೇಶ್ವರಿ ಆಸ್ಪತ್ರೆ ಬಳಿ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ. ಇದು ಸರಿಯಾದ ಕ್ರಮವಲ್ಲ ಎಂದು ದಿನೇಶ್ ಗೂಳಿಗೌಡ ಹೇಳಿದ್ದಾರೆ. ಮದ್ದೂರು ಮಾರ್ಗವಾಗಿ ಕೆಸ್ತೂರು–ಕುಣಿಗಲ್–ಕೆ.ಎಂ.ದೊಡ್ಡಿ–ಮಳವಳ್ಳಿ–ಬೆಸಗರಹಳ್ಳಿ–ಕೊಪ್ಪಕ್ಕೆ ಹೋಗುವ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ. ಮಂಡ್ಯ ಜಿಲ್ಲೆಗೆ ಪ್ರವೇಶವನ್ನು ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಕಲ್ಪಿಸಿರುವುದು ಸರಿಯಾದ ಕ್ರಮವಲ್ಲ. ಈ ಬಗ್ಗೆ ಸರ್ಕಾರ ತಪ್ಪು ಉತ್ತರವನ್ನೇ ನೀಡುತ್ತಿದೆ ಎಂದು ಶಾಸಕರು ಅಸಮಾಧಾನ ಹೊರಹಾಕಿದ್ದಾರೆ.

ಜನವರಿ ಮೊದಲ ವಾರ ದೇವರಾಜ ಪೊಲೀಸ್ ಠಾಣೆ ನೂತನ ಕಟ್ಟಡ ಉದ್ಘಾಟನೆ

ಮೈಸೂರು, ಡಿ.21(ಆರ್‌ಕೆ)– ಮೈಸೂರಿನ ದೇವರಾಜ ಮೊಹಲ್ಲಾದ ದೇಶಿಕ ರಸ್ತೆಯ ಡಾ.ಅಂಬೇಡ್ಕರ್ ಭವನದ ಹಿಂಭಾಗ ನಿರ್ಮಿಸಿರುವ ದೇವರಾಜ ಪೊಲೀಸ್ ಠಾಣೆ ನೂತನ ಕಟ್ಟಡವನ್ನು 2023ರ ಜನವರಿ ಮೊದಲ ವಾರ ಉದ್ಘಾಟಿಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ಸೋಮವಾರ ನೂತನ ಕಟ್ಟಡಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದ ಆಲನಹಳ್ಳಿ, ಹೆಬ್ಬಾಳು ಠಾಣೆಗಳು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ಮಿಸಿರುವ ನೂತನ ಕಟ್ಟಡಗಳಿಗೆ ಸ್ಥಳಾಂತರಗೊಂಡಿವೆ ಎಂದರು.



ಮೈಸೂರಿನ ದೇವರಾಜ ಮೊಹಲ್ಲಾದ ದೇಶಿಕ ರಸ್ತೆಯಲ್ಲಿ ನಿರ್ಮಿಸಿರುವ ದೇವರಾಜ ಪೊಲೀಸ್ ಠಾಣೆ ನೂತನ ಕಟ್ಟಡದ ಕಾಮಗಾರಿ ಪ್ರಗತಿಯನ್ನು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಸೋಮವಾರ ಪರಿಶೀಲಿಸಿದರು.

ಇದೀಗ ದೇವರಾಜ ಸಿವಿಲ್ ಮತ್ತು ಸಂಚಾರ ಠಾಣೆಗಳಿಗೂ ಹೊಸ ಕಟ್ಟಡ ನಿರ್ಮಿಸಲಾಗಿದ್ದು, ಕಾಮಗಾರಿ ಪೂರ್ಣಗೊಂಡಿದೆ. ಬೆಳಗಾವಿ ಅಧಿವೇಶನ ಮುಗಿಯುತ್ತಿದ್ದಂತೆಯೇ ರಾಜ್ಯ ಪೊಲೀಸ್ ಮಹಾನಿರ್ದೇಶಕರ ನಿರ್ದೇಶನದಂತೆ 2023ರ ಜನವರಿ ಮೊದಲ ವಾರ ಕಟ್ಟಡವನ್ನು ಉದ್ಘಾಟಿಸಲಾಗುವುದು ಎಂದರು.

ನೆಲಮಹಡಿಯಲ್ಲಿ ದೇವರಾಜ ಕಾನೂನು–ಸುವ್ಯವಸ್ಥೆ ಠಾಣೆ ಹಾಗೂ ಮೊದಲ ಮಹಡಿಯಲ್ಲಿ ಸಂಚಾರ ಠಾಣೆ ಸ್ಥಳಾಂತರಿಸಲಾಗುವುದು. ಪ್ರತೀ ಠಾಣೆಗೆ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಕೊಠಡಿ, ಮಹಿಳಾ ಸಿಬ್ಬಂದಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ, ಲಾಕಪ್, ಕಂಪ್ಯೂಟರ್ ರೂಂ ಸೇರಿದಂತೆ ಪೊಲೀಸ್ ಠಾಣಾ ಮ್ಯಾನುಯಲ್ ಪ್ರಕಾರ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಪೊಲೀಸ್ ಆಯುಕ್ತ ತಿಳಿಸಿದರು.


ಡಾ. ಅಂಬೇಡ್ಕರ್ ಭವನದ ಹಿಂಭಾಗ ಇದ್ದ ದೇವರಾಜ ಸಂಚಾರ ಠಾಣೆ ಹಳೇ ಕಟ್ಟಡವನ್ನು ನೆಲಸಮಗೊಳಿಸಿ ಅದೇ ಸ್ಥಳದಲ್ಲಿ ಹೊಸ ಕಟ್ಟಡ ನಿರ್ಮಿಸಲಾಗಿದೆ.

ಪ್ರಸ್ತುತ ಧನ್ವಂತರಿ ರಸ್ತೆಯ ಕೆ.ಆರ್. ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಕ್ವಾರ್ಟರ್ಸ್ ಹಳೇ ಕಟ್ಟಡದಲ್ಲಿ ನಡೆಯುತ್ತಿರುವ ದೇವರಾಜ ಠಾಣೆಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು ಎಂದು ಬಿ. ರಮೇಶ್ ತಿಳಿಸಿದರು.

ಹಿಂದುತ್ವ ಅಜೆಂಡಾದಡಿ ಐವರು ಸ್ವಾಮೀಜಿಗಳು ಸೇರಿ 25 ಮಂದಿಗೆ ಟಿಕೆಟ್ ನೀಡುವಂತೆ ಬಿಜೆಪಿಗೆ ಮನವಿ

- ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಮಾಹಿತಿ
- ಬಿಜೆಪಿ ಟಿಕೆಟ್ ನೀಡದಿದ್ದರೆ ಪಕ್ಷೇತರರಾಗಿ ಸ್ಪರ್ಧೆ

ಮೈಸೂರು, ಡಿ.21(ಎಂಟಿವೈ)– ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಹಿಂದುತ್ವದ ಆಧಾರದಲ್ಲಿ ಐವರು ಸ್ವಾಮೀಜಿಗಳು ಸೇರಿದಂತೆ 25 ಮಂದಿಗೆ ಟಿಕೆಟ್ ನೀಡುವಂತೆ ಬಿಜೆಪಿ ನಾಯಕರಲ್ಲಿ ಮನವಿ ಸಲ್ಲಿಸಿದ್ದೇವೆ. ಟಿಕೆಟ್ ದೊರೆಯದಿದ್ದರೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದು ಖಚಿತ ಎಂದು ಶ್ರೀರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ತಿಳಿಸಿದ್ದಾರೆ.



ಮೈಸೂರಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದುತ್ವವನ್ನು ಪ್ರತಿಪಾದಿಸಿ, ಹಿಂದೂಗಳ ರಕ್ಷಣೆಯೊಂದಿಗೆ ಹಿಂದು ಧರ್ಮಕ್ಕಾಗಿ ಹೋರಾಡುತ್ತಿರುವವರಿಗೆ ಮನ್ನಣೆ ನೀಡುವಂತೆ ಬಿಜೆಪಿಯನ್ನು ಕೋರಲಾಗಿದೆ. 2023ರ ಚುನಾವಣೆಯಲ್ಲಿ ಹಿಂದುತ್ವದ ಆಧಾರದ ಮೇಲೆ 25 ಮಂದಿಗೆ ಟಿಕೆಟ್ ನೀಡುವಂತೆ ಬಿಜೆಪಿ ನಾಯಕರನ್ನು ಕೇಳಿದ್ದೇವೆ. ಅದರಲ್ಲಿ ಐವರು ಸ್ವಾಮೀಜಿಗಳೂ ಸೇರಿದ್ದಾರೆ. ಒಂದು ವೇಳೆ ಕೊಡದಿದ್ದರೆ, ಪಕ್ಷೇತರರಾಗಿ ಸ್ಪರ್ಧೆ ಮಾಡುತ್ತೇವೆ. ಎಸ್ಸಿ–ಎಸ್ಟಿ, ಮಹಿಳಾ ಮೀಸಲಾತಿ ಹಾಗೂ ಪದವೀಧರರಿಗೆ ಮೀಸಲಾತಿಯಂತೆ ಬಿಜೆಪಿಯಲ್ಲಿ ಹಿಂದುಗಳಿಗೂ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿದರು.

ನನ್ನ ಸ್ಪರ್ಧೆ ಖಚಿತ: ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದು ಖಚಿತ. ಜಮಖಂಡಿ, ತೇರದಾಳ, ಬಾಗಲಕೋಟೆ, ಧಾರವಾಡ ನಗರ, ಶೃಂಗೇರಿ ಹಾಗೂ ಕಾರ್ಕಳ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿದ್ದೇನೆ. ಈ ಐದು ಕ್ಷೇತ್ರಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿ ಈ ತಿಂಗಳ ಅಂತ್ಯಕ್ಕೆ ಪ್ರಕಟಿಸುತ್ತೇನೆ. ನನಗೂ ಟಿಕೆಟ್ ನೀಡುವಂತೆ ಬಿಜೆಪಿಗೆ ಕೇಳಿದ್ದೇವೆ. ಒಂದು ವೇಳೆ ಕೊಡದಿದ್ದರೆ ನಾನೂ ಪಕ್ಷೇತರನಾಗಿ ಸ್ಪರ್ಧೆ ಮಾಡುತ್ತೇನೆ. ಹಿಂದುತ್ವ ಅಜೆಂಡಾದ ಮೂಲಕ ಗೆದ್ದು ಬರುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಗಡಿ ವಿವಾದದ ಬಗ್ಗೆ ಮುತಾಲಿಕ್ ಜಾಣ ಮೌನ: ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ವಿಚಾರ ಈಗಾಗಲೇ ಸುಪ್ರೀಂಕೋರ್ಟ್‌ನಲ್ಲಿದೆ. ಹೀಗಾಗಿ ಇದರ ಬಗ್ಗೆ ಮಾತನಾಡುವುದು ನ್ಯಾಯಾಂಗ ನಿಂದನೆ ಆಗುತ್ತದೆ. ನಾವು ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದರೆ ಯಾರು ಬೇಕಾದರೂ ನ್ಯಾಯಾಂಗ ನಿಂದನೆ ಕೇಸ್ ಹಾಕಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಕೀಲರೊಂದಿಗೆ ಚರ್ಚೆ ಮಾಡುತ್ತೇನೆ ಎಂದರು.

ಬೆಳಗಾವಿ ಕರ್ನಾಟಕದ ಆಸ್ತಿ: ಮಹಾಜನ್ ವರದಿಯಂತೆ ಬೆಳಗಾವಿ ಕರ್ನಾಟಕಕ್ಕೆ ಸೇರಿದೆ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಮಹಾರಾಷ್ಟ್ರದ ಕಾಂಗ್ರೆಸ್ ಮತ್ತು ಬಿಜೆಪಿಗರೂ ಬೆಳಗಾವಿ ನಮ್ಮದು ಎನ್ನುತ್ತಿದ್ದಾರೆ. ಇತ್ತ ಕರ್ನಾಟಕದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನವರು ಬೆಳಗಾವಿ ನಮ್ಮದು ಎನ್ನುತ್ತಾರೆ.

ರಾಷ್ಟ್ರೀಯ ಪಕ್ಷಗಳು ತಮ್ಮ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಈ ರೀತಿಯ ದ್ವಂದ್ವ ನೀತಿ ಅನುಸರಿಸುತ್ತಿವೆ. ಇವರ ವಿರುದ್ಧ ಸುಪ್ರೀಂ ಕೋರ್ಟ್ ಸುಮೋಟೋ ಕೇಸ್ ದಾಖಲಿಸಿ ಕೊಂಡು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಾವರ್ಕರ್‌ಗೆ ವಿರೋಧ ಸಲ್ಲ: 25 ವರ್ಷಗಳ ಕಾಲ ಅಂಡಮಾನ್‌ನಲ್ಲಿ ಶಿಕ್ಷೆ ಅನುಭವಿಸಿದ ವ್ಯಕ್ತಿಯನ್ನು ಪದೇ ಪದೆ ಅವಮಾನಿಸುವುದು ಸಹಿಸಲಾಗದು. ನಿಮಗೆ ತಾಕತ್ತಿದ್ದರೆ ಒಂದೇ ಒಂದು ವರ್ಷ ಅಂಡಮಾನ್ ಜೈಲಿನಲ್ಲಿ ಇದ್ದು ಬನ್ನಿ. ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರನ್ನು ಕಾಂಗ್ರೆಸ್ ಯಾವ ಕಾರಣಕ್ಕಾಗಿ ವಿರೋಧಿಸುತ್ತಿದೆ ಎಂದು ತಿಳಿಯುತ್ತಿಲ್ಲ. ಒಂದು ಕಡೆ ಇಂದಿರಾ ಗಾಂಧಿ, ಸಾವರ್ಕರ್ ಅವರನ್ನು ಹೊಗಳುತ್ತಾರೆ, ಮತ್ತೊಂದು ಕಡೆ ಮಹಾರಾಷ್ಟ್ರ ಕಾಂಗ್ರೆಸ್ ಕೂಡ ಅವರನ್ನು ಹೊಗಳುತ್ತಿದೆ. ಆದರೆ ಕರ್ನಾಟಕದ ಕಾಂಗ್ರೆಸ್ ಏಕೆ ದ್ವೇಷ ಮಾಡುತ್ತಿದೆ ಎಂಬುದು ತಿಳಿಯುತ್ತಿಲ್ಲ ಎಂದು ಕಿಡಿಕಾರಿದರು.

ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವೆ: ಸಾವರ್ಕರ್ ಅವರ ಭಾವಚಿತ್ರವನ್ನು ಬೆಳಗಾವಿಯ ಸುವರ್ಣಸೌಧದಲ್ಲಿ ಹಾಕಿದ್ದಕ್ಕೆ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಇದೇ ವಿಚಾರ ಇಟ್ಟುಕೊಂಡು ಸಿದ್ದರಾಮಯ್ಯ ಅವರು ಕರ್ನಾಟಕಕ್ಕೂ, ಸಾವರ್ಕರ್‌ಗೂ ಏನು ಸಂಬಂಧ ಎಂದು ಕೇಳುತ್ತಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಆರಂಭದ ವರ್ಷದಲ್ಲಿ ಪಾಕಿಸ್ತಾನದ ಅಧ್ಯಕ್ಷರು ಭಾರತಕ್ಕೆ ಆಗಮಿಸುತ್ತಿದ್ದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಅಂದಿನ ಪ್ರಧಾನಿ ನೆಹರು ಅವರು ಸಾವರ್ಕರ್ ಅವರನ್ನು ಬಂಧಿಸಿ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ 100 ದಿನ ಇಟ್ಟಿದ್ದರು. ಹಾಗಾಗಿ ಬೆಳಗಾವಿಗೂ ಸಾವರ್ಕರ್ ಅವರಿಗೂ ಸಂಬಂಧ ಇದೆ. ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಯಾವುದೋ ಒಂದು ಭಾಷೆ, ರಾಜ್ಯಕ್ಕೆ ಸೀಮಿತವಾಗಿರುವುದಿಲ್ಲ. ಇಡೀ ದೇಶಕ್ಕೆ ಸೀಮಿತವಾಗಿರುತ್ತಾರೆ. ಈ ದೇಶಕ್ಕೆ ಹೋರಾಟ ಮಾಡಿರುವ ವ್ಯಕ್ತಿಗೂ ರಾಜ್ಯಕ್ಕೂ ಏನು ಸಂಬಂಧ ಎಂದು ಪ್ರಶ್ನಿಸುವ ನಿಮ್ಮನ್ನು ಭಾರತೀಯರು ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಡಿ.24ರಂದು ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ

ಮೈಸೂರು,ಡಿ.21– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ 2022–23ನೇ ಸಾಲಿನಲ್ಲಿ ಡಿಸೆಂಬರ್ 24 ರಂದು ಮಹಾರಾಜ ಪದವಿ ಪೂರ್ವಕಾಲೇಜಿನಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ತಾಲೂಕು ಹಂತದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಹಿರಿಯ ಪ್ರಾಥಮಿಕ ವಿಭಾಗಕ್ಕೆ 15 ಮತ್ತು ಪ್ರೌಢ ವಿಭಾಗಕ್ಕೆ 19 ಸ್ಪರ್ಧೆಗಳಿರುತ್ತವೆ. ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನವನ್ನು ಅವರ ಖಾತೆಗೆ ಜಮಾ ಮಾಡಲಾಗುವುದು. ಹಿರಿಯ ಪ್ರಾಥಮಿಕ ವಿಭಾಗದಿಂದ 135 ವಿದ್ಯಾರ್ಥಿಗಳು ಮತ್ತು ಪ್ರೌಢ ವಿಭಾಗದಿಂದ 306 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ಜಿಲ್ಲಾ ಹಂತದಲ್ಲಿ ಪ್ರಥಮ ಸ್ಥಾನ ಪಡೆಯುವ ಪ್ರೌಢಶಾಲಾ ವಿಭಾಗ ವಿದ್ಯಾರ್ಥಿಗಳು ಶಿವಮೊಗ್ಗದಲ್ಲಿ ನಡೆಯುವ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲ್ಲಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಬುಧವಾರ ಅಧಿಕಾರ ವಹಿಸಿಕೊಂಡ ಯಶಸ್ವಿ ಸೋಮಶೇಖರ್ ಅವರನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮುಡಾ ಸದಸ್ಯೆ ಲಕ್ಷ್ಮಿದೇವಿ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ವಂದೇ ಭಾರತ್, ಶತಾಬ್ದಿ ಸೂಪರ್‌ಫಾಸ್ಟ್ ರೈಲುಗಳ ವೇಳಾಪಟ್ಟಿ ಬದಲಾವಣೆಗೆ ಪರಿಶೀಲಿಸಿ ಕ್ರಮ

ಬೆಳಗಾವಿ: ವಂದೇ ಭಾರತ್ ಎಕ್ಸ್‌ಪ್ರೆಸ್ ಹಾಗೂ ಶತಾಬ್ದಿ ಸೂಪರ್ ಫಾಸ್ಟ್ ರೈಲುಗಳ ವೇಳಾಪಟ್ಟಿ ಬದಲಾವಣೆಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ವಿ.ಸೋಮಣ್ಣ ತಿಳಿಸಿದರು. ರೈಲುಗಳ ವೇಳಾಪಟ್ಟಿಯ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವಂತೆ ರೈಲ್ವೆ ಮಂತ್ರಾಲಯವನ್ನು ಪತ್ರ ಮುಖೇನ ಕೋರಲಾಗಿದೆ. ರೈಲ್ವೆ ಅಧಿಕಾರಿಗಳು ಇದು ಕಷ್ಟ ಅನ್ನುತ್ತಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ರೈಲ್ವೆ ಸಚಿವರೊಂದಿಗೆ ಚರ್ಚಿಸಿ ಜನತೆಗೆ ಅನುಕೂಲ ಕಲ್ಪಿಸಿಕೊಡಲಾಗುವುದು ಎಂದು ಸಚಿವರು ತಿಳಿಸಿದರು. ವಿಧಾನಪರಿಷತ್ತಿನಲ್ಲಿ ಸದಸ್ಯ ಮರಿತಿಬ್ಬೇಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಂಡ್ಯದಲ್ಲಿ ಈ ಎರಡೂ ರೈಲುಗಳಿಗೂ ಸಹ ನಿಲುಗಡೆ ಒದಗಿಸಬೇಕೆಂಬ ಸದಸ್ಯರ ಕೋರಿಕೆಯ ಬಗ್ಗೆಯೂ ಅಗತ್ಯ ಕ್ರಮಕೈಗೊಳ್ಳುವಂತೆ ಮಂತ್ರಾಲಯಕ್ಕೆ ಪತ್ರದ ಮುಖೇನ ತಿಳಿಸಲಾಗಿದೆ ಎಂದು ವಿವರಿಸಿದರು.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆಯು ಆರಂಭವಾದ ನಂತರ ಶತಾಬ್ದಿ ಹಾಗೂ ವಂದೇ ಭಾರತ್ ಎರಡು ರೈಲುಗಳಲ್ಲೂ ಬಹುತೇಕ ಪೂರ್ಣ ಪ್ರಮಾಣದಲ್ಲಿ ಪಯಾಣಿಕರು ಪ್ರಯಾಣಿಸುತ್ತಿದ್ದಾರೆ. ಆದ್ದರಿಂದ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದು ನೈರುತ್ಯ ರೈಲ್ವೆ ತಿಳಿಸಿರುವುದಾಗಿ ಸಚಿವರು ಸ್ಪಷ್ಟಪಡಿಸಿದರು.

ಪಂಚಮಸಾಲಿ ಸಮಾಜಕ್ಕೆ 2ಎಗೆ ಆಗ್ರಹಿಸಿ

ಇಂದು ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ

ಬೆಳಗಾವಿ: ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಡಿ. 22ರಂದು ಬೃಹತ್ ಸಮಾವೇಶ ನಡೆಯುವುದು ಶತಸಿದ್ಧ. ಬುತ್ತಿ ಕಟ್ಟಿಕೊಂಡು ಬರುವ ನಮ್ಮ ಜನ ಸುವರ್ಣ ವಿಧಾನಸೌಧ ಬಿಟ್ಟು ಕದಲುವುದಿಲ್ಲ. ಮೀಸಲಾತಿ ಪಡೆದೇ ಮನೆಗೆ ಹೋಗುತ್ತೇವೆ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.



ಸುವರ್ಣ ಸೌಧದ ಬಳಿ ಸಮಾವೇಶಕ್ಕೆ ಗುರುತಿಸಿದ ಜಾಗದಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಇಲ್ಲಿ ನೂರು ಎಕರೆಯಷ್ಟು ವಿಶಾಲ ಜಾಗ ಸಿದ್ಧಮಾಡಿದ್ದೇವೆ. ಸಮಾವೇಶದ ಸ್ವಾಗತ ಸಮಿತಿ ಅಧ್ಯಕ್ಷ ಎ.ಬಿ.ಪಾಟೀಲ ಅವರು ಜಾಗ ಗುರುತಿಸಿದ್ದಾರೆ. ಹರಿಹರದ ಮಾಜಿ ಶಾಸಕ ಶಿವಶಂಕರ ಅವರು 1000 ಕ್ವಿಂಟಲ್ ಅಕ್ಕಿ ತರಿಸಿದ್ದಾರೆ. ಸಿ.ಸಿ. ಪಾಟೀಲ ಅವರು ಪದಾರ್ಥ ತರಿಸಿದ್ದಾರೆ. ರಾಷ್ಟ್ರೀಯ ಅಧ್ಯಕ್ಷ ಕಾಶಪ್ಪನವರ, ಜಿಲ್ಲಾ ಘಟಕದ ಅಧ್ಯಕ್ಷ ಆರ್.ಕೆ.ಪಾಟೀಲ ಎಲ್ಲರೂ ಸಿದ್ಧತೆ ಮಾಡಿದ್ದಾರೆ. ಸಮಾಜದ ಜನ ಯಾವುದೇ ಹಿಂಜರಿಕೆ ಪಡೆದೇ ಬನ್ನಿ ಕರೆ ನೀಡಿದರು ಎಂದರು.

ಕನಿಷ್ಠ 20 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ವೇದಿಕೆಗೆ ರಾಣಿ ಚನ್ನಮ್ಮನ ಹೆಸರು, ಮಹಾದ್ವಾರಕ್ಕೆ ಬೆಳವಡಿ ಮಲ್ಲಮ್ಮನ ಹೆಸರು, ಪ್ರದೇಶಕ್ಕೆ ರಾವ್ ಬಹಾದ್ದೂರ ಅರಟಾಳ ರುದ್ರಗೌಡರ ಹೆಸರು ಇಡಲಾಗಿದೆ. ಲಿಂಗಾಯತ ಪಂಚಮಸಾಲಿ ಸಮಾಜದ ಐದೂ ಪಂಗಡಗಳ ಜನ ಸೇರುವ ಕಾರಣ 'ವಿರಾಟ ಪಂಚಶಕ್ತಿ' ಹೋರಾಟ ಎಂದು ಕರೆಯಲಾಗಿದೆ ಎಂದರು.

ಸಮಾವೇಶ ವಿಫಲಗೊಳಿಸುವ ಉದ್ದೇಶದಿಂದ ಆಯಾ ಜಿಲ್ಲೆಗಳ ಗಡಿಯಲ್ಲೇ ಜನರನ್ನು ತಡೆಯಲು ಬ್ಯಾರಿಕೇಡ್ ಹಾಕಲಾಗುತ್ತಿದೆ ಎಂಬ ಮಾಹಿತಿ ಬಂದಿದೆ. ನಾವು ಶಾಂತರೀತಿಯ ಹೋರಾಟ ಮಾಡುವವರು. ಯಾರನ್ನೂ ತಡೆಯಕೂಡದು ಎಂದೂ ಅವರು ಹೇಳಿದರು. ಗುರುವಾರ ಬೆಳಿಗ್ಗೆ 11ಕ್ಕೆ ಸಮಾವೇಶ ಆರಂಭವಾಗುತ್ತದೆ. ಮೀಸಲಾತಿ ಘೋಷಿಸಿದರೆ ಮುಖ್ಯಮಂತ್ರಿ ಅವರನ್ನು ಕರೆದು ಕಲ್ಲುಸಕ್ಕರೆ ತುಲಾಭಾರ ಮಾಡಿ, ಸಿಹಿ ತಿನ್ನಿಸುತ್ತೇವೆ. ಇಲ್ಲದಿದ್ದರೆ ಬಂಡಾಯದ ಧ್ವಜ ಎತ್ತುತ್ತೇವೆ ಎಂದರು.

ಮುಖ್ಯಮಂತ್ರಿ ಅವರನ್ನು ಬಹಳ ನಂಬಿದ್ದೇವೆ. ಗುರುವಾರ ವರದಿ ತರಿಸಿಕೊಳ್ಳಲಿದ್ದಾರೆ ಎಂಬ ಸೂಚನೆಗಳು ಬಂದಿವೆ ಎಂದೂ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಂಚಮಸಾಲಿ ಸಮಾವೇಶಕ್ಕೆ ಬರುವವರ ತಡೆಯುವುದಿಲ್ಲ: ಡಿ.22 ರಂದು ನಡೆಯಲಿರುವ ಲಿಂಗಾಯತ ಪಂಚಮಸಾಲಿ ಸಮಾಜದ ಪಂಚಶಕ್ತಿ ವಿರಾಟ ಸಮಾವೇಶಕ್ಕೆ ಬರುವವರನ್ನು ತಡೆಯೊಲ್ಲ. ಹೋರಾಟ ಶಾಂತರೀತಿಯಲ್ಲಿ ನಡೆಸಬೇಕು ಎಂದು ಎಡಿಜಿಪಿ ಅಲೋಕ್ ಕುಮಾರ ಹೇಳಿದರು. ಬೈಲಹೊಂಗಲ ಚನ್ನಮ್ಮನ ಸಮಾಧಿ ಸ್ಥಳದಿಂದ ಬುಧವಾರ ಆರಂಭವಾದ ಪಾದಯಾತ್ರೆ ಸಾಣಿಕೊಪ್ಪ ಗ್ರಾಮ ಪ್ರವೇಶಿಸಿದ ವೇಳೆ ಅವರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರೊಂದಿಗೆ ಮಾತುಕತೆ ನಡೆಸಿದರು.

ಪ್ರಜಾಪ್ರಭುತ್ವದಲ್ಲಿ ವ್ಯವಸ್ಥೆಯಲ್ಲಿ ಶಾಂತ ರೀತಿಯಲ್ಲಿ ಪ್ರತಿಭಟನೆ ಮಾಡಲು ಎಲ್ಲರಿಗೂ ಹಕ್ಕಿದೆ. ನಾವು ಬಂದುಬಸ್ತ್ ನೀಡುತ್ತೇವೆ. ಸಮಾವೇಶಕ್ಕೆ ಬರುವವರನ್ನು ಯಾರಾದರೂ ಎಲ್ಲಿಯಾದರೂ ತಡೆದರೆ ಆಯಾ ಜಿಲ್ಲಾ ಎಸ್ಪಿ, ನಗರ ಪೊಲೀಸ್ ಕಮಿಷನರ್ ಅಥವಾ 112 ಸಂಖ್ಯೆಗೆ ಕರೆ ಮಾಡಬೇಕು. ಯಾರನ್ನೂ ತಡೆಯಬಾರದು ಎಂದು ಈಗಾಗಲೇ ನಿರ್ದೇಶನ ನೀಡಲಾಗಿದೆ ಎಂದರು.

ಸರ್ಕಾರದ ನಡೆ ನೋಡಿ ಪ್ರತಿಕ್ರಿಯೆ: ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ನೀಡುವ ವಿಚಾರವಾಗಿ ಸರ್ಕಾರ ಯಾವ ನಿಲುವು ತಾಳುತ್ತದೆ ನೋಡಿಕೊಂಡು ನಾವು ಪ್ರತಿಕ್ರಿಯಿಸುತ್ತೇವೆ. ನಮ್ಮನ್ನಂತೂ ಯಾರೂ ಸಂಪರ್ಕ ಮಾಡಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಹೇಳಿದರು. ಹಲವು ಸಮಾಜಗಳು ಮೀಸಲಾತಿಗೆ ಹೋರಾಟ ನಡೆಸಿವೆ. ಅದಕ್ಕೆ ಕಾನೂನು ಅಡಚಣೆಗಳೇನು ಎಂಬುದು ಗೊತ್ತಿಲ್ಲ. ಈ ವಿಚಾರವಾಗಿ ಆಡಳಿತ ಪಕ್ಷ ತೀರ್ಮಾನ ಮಾಡಬೇಕು ಎಂದರು.


ಮಹಿಳೆಯರೇ ಭಾರತೀಯ ಸಂಸ್ಕೃತಿಯ ರಕ್ಷಕರು

ವಿಧುಷಿ ವಸುಂಧರ ದೊರೆಸ್ವಾಮಿ ಅಭಿಮತ

ಮೈಸೂರು, ಡಿ.21(ಆರ್‌ಕೆಬಿ)– ಮಹಿಳೆಯರೇ ನಮ್ಮ ಭಾರತೀಯ ಸಂಸ್ಕೃತಿಯ ರಕ್ಷಕರು. ನಮ್ಮ ಸಂಸ್ಕೃತಿ ಉಳಿವು, ಬೆಳವಣಿಗೆ ಮಹಿಳೆಯರಿಂದ ಮಾತ್ರ ಸಾಧ್ಯ ಎಂದು ವಸುಂಧರ ಪರ್ಫಾಮಿಂಗ್ ಆರ್ಟ್ ಸೆಂಟರ್‌ನ ಸಂಸ್ಥಾಪಕಿ, ನಿರ್ದೇಶಕಿ, ವಿಧುಷಿ ಡಾ.ವಸುಂಧರಾ ದೊರೆಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಬುಧವಾರ ಕಾಲೇಜು ಶಿಕ್ಷಣ ಇಲಾಖೆ ಮತ್ತು ಕಾಲೇಜು ಜಂಟಿಯಾಗಿ ಆಯೋಜಿಸಿದ್ದ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್ ಹಾಗೂ ರೇಂಜರ್ಸ್ ಅಂಡ್ ರೋವರ್ಸ್ ಚಟುವಟಿಕೆಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಇಷ್ಟೊಂದು ಜನ ಮಹಿಳೆಯರು ನಮ್ಮ ಸಂಸ್ಕೃತಿಯನ್ನು ಉಳಿಸುತ್ತಿದ್ದಾರೆಂದರೆ ಮಹಿಳೆಯರಾದ ನಾವು ನಿಜಕ್ಕೂ ಹೆಮ್ಮೆ ಪಡಲೇಬೇಕು. ಲಲಿತ ಕಲೆಗಳ ಮೂಲಕ ನಾವು ಮನುಷ್ಯರಾಗಿ ಬಾಳಲು ಅವಕಾಶವಿದೆ. ಹೆಣ್ಣಿಗೆ ತಾಳ್ಮೆ ಶಕ್ತಿ ಇದೆ. ಸಾಧಿಸುವ ಛಲವೂ ಇದೆ ಎಂದರು. ಹೊರದೇಶಕ್ಕೆ ಹೋದರೆ ನಮ್ಮ ಸಂಸ್ಕೃತಿಗೆ ಇರುವ ಬೆಲೆ ಗೊತ್ತಾಗುತ್ತದೆ. ಅಲ್ಲಿಯ ಪ್ರತಿಯೊಬ್ಬರಿಗೂ ನಮ್ಮ ಪುರಾಣದ ಕಥೆಗಳು ತಿಳಿದಿದೆ. ಅವರು ಸಹ ಆಸಕ್ತಿಯಿಂದ ಕೇಳಿ ತಿಳಿದುಕೊಳ್ಳುತ್ತಿದ್ದಾರೆ ಎಂದು ಹೇಳಿದರು.



ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಚಲನಚಿತ್ರ ನಟಿ ತಪಸ್ವಿನಿ ಪೂಣಚ್ಚ, ಕ್ರೀಡಾ ವರದಿಗಾರ ಸಿ.ಕೆ.ಮುರಳೀಧರನ್, ಮೈಸೂರು ವಿವಿ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಸಾಂಸ್ಕೃತಿಕ ಸಮಿತಿ ಸಂಚಾಲಕ ಡಾ. ಶಿವಕುಮಾರ್, ಖಜಾಂಚಿ ಡಾ.ದೀಪಾ ಆರ್.ಹೆಬ್ಬಾರ್, ದೈಹಿಕ ಶಿಕ್ಷಣ ನಿರ್ದೇಶಕಿ ಡಾ.ಡಿ.ರಮಣಿ, ರೇಂಜರ್ಸ್ ಅಂಡ್ ರೋವರ್ಸ್ ಸಂಚಾಲಕಿ ಮಂಜುಳಾ ಶೇಷಗಿರಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಲಕ್ಷ್ಮೀ ಪಳೋಟಿ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಅನುಷಾ ಸಂಗಯ್ಯ, ಉಪಾಧ್ಯಕ್ಷರಾದ ಡಿ.ಎಸ್.ಅಂಬಿಕಾ, ಆರ್.ಅಪರ್ಣಾ, ಕಾರ್ಯದರ್ಶಿ ಬಿ.ಎಂ.ಅರ್ಚನಾ, ಎಸ್. ನಿಸರ್ಗ, ಕನ್ನಡ ಸಂಪಾದಕಿ ಜಿ.ರೇಷ್ಮಾ, ಇಂಗ್ಲಿಷ್ ಸಂಪಾದಕಿ ಆರ್.ರಂಜಿತಾ, ಕ್ರೀಡಾ ಕಾರ್ಯದರ್ಶಿ ಕೆ.ಸೋನಿಯಾ, ವಿ.ಲಿಖಿತ, ಎನ್‌ಎಸ್‌ಎಸ್ ಕಾರ್ಯದರ್ಶಿಗಳಾದ ಡಿ.ಸುಷ್ಮಿತಾ, ಜಿ.ಹರ್ಷಿತಾ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಬುಧವಾರ ಅಧಿಕಾರ ವಹಿಸಿಕೊಂಡ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಮೈಸೂರು ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಎನ್.ಜಿ. ಡೆವಲಪರ್ಸ್ ವ್ಯವಸ್ಥಾಪಕ ನಿರ್ದೇಶಕ ಶಶಿಕುಮಾರ್, ವಿನಾಯಕ ಪೈನ್ಸ್ ಮಾಲೀಕರಾದ ಗಿರೀಶ್ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ವಿವಿ ಕುಲಪತಿ ನೇಮಕದಲ್ಲಿ ವಸೂಲಿ ಆರೋಪ

ಉನ್ನತ ತನಿಖೆಗೆ ಕಾಂಗ್ರೆಸ್ ಒತ್ತಾಯ

ಬೆಂಗಳೂರು: 5–6 ಕೋಟಿ ಹಣ ಪಡೆದು ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಿಸಲಾಗುತ್ತಿದೆ ಎಂದು ಸಂಸದ ಪ್ರತಾಪ್ ಸಿಂಹ ನೀಡಿರುವ ಹೇಳಿಕೆ ಆಧಾರದ ಮೇಲೆ ಉನ್ನತ ಮಟ್ಟದ ತನಿಖೆ ನಡೆಯಬೇಕೆಂದು ಕಾಂಗ್ರೆಸ್ ಒತ್ತಾಯಿಸಿದೆ. ಈ ಕುರಿತು ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಅಗ ಸಹಾಯಕ ಪ್ರಾಧ್ಯಾಪಕ ನೇಮಕ ಹಗರಣ, ಈಗ ವಿಸಿ ನೇಮಕಕ್ಕೆ ವಸೂಲಿ ಬಯಲಿಗೆ, ಅಶ್ವಥ್ ನಾರಾಯಣ್ ಅವರ ಭ್ರಷ್ಟ ಕೈಗಳು ಅದೆಷ್ಟು ಉದ್ದವಾಗಿವೆ ಎಂದು ಆರೋಪಿಸಿದೆ. ಹಣ ನೀಡಿ ಪೊಲೀಸರು ಪೋಸ್ಟಿಂಗ್ ಪಡೆಯುತ್ತಾರೆ ಎಂದು ಸಚಿವ ಎಂಟಿಬಿ ನಾಗರಾಜ್ ಹೇಳಿದರೆ, ನಿರಾಣಿ ಹಣ ನೀಡಿ ಮಂತ್ರಿಯಾಗಿದ್ದಾರೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಹೇಳ್ತಾರೆ. 5, 6 ಕೋಟಿ ನೀಡಿ ವಿವಿ ಕುಲಪತಿಗಳಾಗಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಹೇಳುತ್ತಾರೆ. ಬೊಮ್ಮಾಯಿ ಅವರಿಗೆ ದಮ್ಮು, ತಾಕತ್ತಿದ್ದರೆ ಹಣ ಪಡೆದವರು ಯಾರೆಂದು ಹೇಳಲಿ. ಇಲ್ಲವೇ ಅವರ ಹೇಳಿಕೆ ಆಧಾರದಲ್ಲಿ ಉನ್ನತ ತನಿಖೆಗೆ ವಹಿಸಲಿ ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಹೆಚ್.ಡಿ.ಕೋಟೆಯಲ್ಲಿ ಅದ್ದೂರಿ ಹನುಮ ಜಯಂತಿ

ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಗಮನ ಸೆಳೆದ ಶೋಭಾಯಾತ್ರೆ

- ಸಾವಿರಾರು ಭಕ್ತರು ಭಾಗಿ
- ಮುಸ್ಲಿಂ ಬಾಂಧವರಿಂದ ಮಜ್ಜಿಗೆ ವಿತರಣೆ
- ಡಿಜೆ ಸೌಂಡಿಗೆ ಕುಣಿದು ಕುಪ್ಪಳಿಸಿದ ಮಹಿಳೆಯರು





ಹೆಚ್.ಡಿ.ಕೋಟೆ, ಡಿ.21– ತಾಲೂಕು ಹನುಮ ಸೇವಾ ಸಮಿತಿ ವತಿಯಿಂದ ಹನುಮ ಜಯಂತಿ ಅಂಗವಾಗಿ ಅದ್ದೂರಿ ಶೋಭಾಯಾತ್ರೆ ನಡೆಸಲಾಯಿತು.

ಬುಧವಾರ ಪಟ್ಟಣದ ಗದ್ದಿಗೆ ಸರ್ಕಲ್‌ನ ಶ್ರೀ ಬನ್ನಾರಿ ಅಮ್ಮ ದೇವಸ್ಥಾನದಿಂದ ಹೊರಟ ಶೋಭಾಯಾತ್ರೆಗೆ ಶ್ರೀ ಮಹದೇವಸ್ವಾಮಿಗಳು, ಪಡವಲು ವಿರಕ್ತ ಮಠ ಬಿಡುಗಲು ಹಾಗೂ ಹನುಮ ಸೇವಾ ಸಮಿತಿಯ ಅಧ್ಯಕ್ಷ ನಂದೀಶ್, ಮುಖಂಡರುಗಳಾದ ಅಪ್ಪಣ್ಣ, ಜಯಪ್ರಕಾಶ್, ಚಿಕ್ಕಣ್ಣ, ಎಚ್.ವಿ. ಕೃಷ್ಣಸ್ವಾಮಿ ಮುಂತಾದ ಗಣ್ಯರು ಆಂಜನೇಯ ಸ್ವಾಮಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆಯೊಂದಿಗೆ ಚಾಲನೆ ನೀಡಿದರು. ನಂತರ ನಂದಿ ಕಂಬಕ್ಕೆ ಪೂಜೆ ಸಲ್ಲಿಸಲಾಯಿತು.

ಮೆರವಣಿಗೆಯಲ್ಲಿ ಮಂಗಳವಾದ್ಯ, ವೀರಗಾಸೆ, ನಂದಿ ಕಂಬ, ಪೂಜಾ ಕುಣಿತ, ಚಂಡೆ, ನಗಾರಿ, ಆದಿವಾಸಿ ಮಹಿಳೆಯರ ಕೋಲಾಟ ಕುಣಿತ, ಗಾಡಿ ಗೊಂಬೆ, ಚಿಲಿಪಿಲಿ ಗೊಂಬೆ ಸೇರಿದಂತೆ ಹಲವಾರು ಕಲಾ ತಂಡಗಳು ಭಾಗವಹಿಸಿ ಎಲ್ಲರ ಗಮನ ಸೆಳೆಯಿತು. ಹನುಮನ ಮೂರ್ತಿಗಳನ್ನು ಪುಷ್ಪಾಲಂಕಾರಗೊಂಡ ಬೆಳ್ಳಿ ರಥ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು. ಶೋಭಾಯಾತ್ರೆಯು ಹೆಚ್.ಬಿ. ರಸ್ತೆಯ ಮೂಲಕ ಸಾಗಿ ಬಾಪೂಜಿ ವೃತ್ತ ತಲುಪಿ ನಂತರ ಮೊದಲನೇ ಮುಖ್ಯ ರಸ್ತೆ ಮೂಲಕ ವರದರಾಜ ಸ್ವಾಮಿ ದೇವಾಲಯದ ಬಳಿ ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ಮೂರು ಸಾವಿರಕ್ಕೂ ಹೆಚ್ಚು ಭಕ್ತಾದಿಗಳು ಪಾಲ್ಗೊಂಡಿದ್ದರು.

ದಾರಿ ಉದ್ದಕ್ಕೂ ಭಕ್ತಾದಿಗಳಿಗೆ ಸಾರ್ವಜನಿಕರು ಮಜ್ಜಿಗೆ, ಪಾನಕ ನೀಡಿದರು. ಅದರಲ್ಲೂ ವಿಶೇಷವಾಗಿ ಮುಸ್ಲಿಂ ಬಾಂಧವರು ಹನುಮ ಭಕ್ತರ ಜೊತೆ ಕೇಸರಿ ಶಲ್ಯ ಧರಿಸಿ ಮಜ್ಜಿಗೆ ವಿತರಿಸಿದ್ದು ವಿಶೇಷವಾಗಿತ್ತು. ತೊರಹಳ್ಳಿ ಗ್ರಾಮದ ಮುಖಂಡ ಈ.ರಾಜನಾಯಕ ಮೆರವಣಿಗೆಯಲ್ಲಿ ಹನುಮ ವೇಷಧಾರಿಯಾಗಿ ಕಾಣಿಸಿಕೊಂಡಿದ್ದು ವಿಶೇಷವಾಗಿತ್ತು. ಮಹಿಳೆಯರು ಡಿಜೆ ಸೌಂಡ್‌ಗೆ ಹೆಜ್ಜೆ ಹಾಕಿದ್ದು ಎಲ್ಲರ ಗಮನ ಸೆಳೆಯಿತು. ಹುಣಸೂರು ಉಪ ವಿಭಾಗ ಡಿವೈಎಸ್‌ಪಿ ಮಹೇಶ್ ನೇತೃತ್ವ ದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಸೋಮವಾರ ಬೆಳಿಗ್ಗೆ ಪಟ್ಟಣದ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಭಕ್ತಾದಿಗಳು ಮಾಲೆ ಧರಿಸಿ, ಮಂಗಳ ವಾರ ವರದರಾಜ ಸ್ವಾಮಿ ದೇವಾಲಯದಲ್ಲಿ ಹೋಮ, ಬಜರಂಗದಳ ರಾಷ್ಟ್ರೀಯ ಸಹ ಸಂಯೋಜಕ ಸೂರ್ಯನಾರಾಯಣ ಅವರಿಂದ ಧಾರ್ಮಿಕ ಭಾಷಣ ಹಮ್ಮಿಕೊಳ್ಳಲಾಗಿತ್ತು.

ಹನುಮ ಸೇವಾ ಸಮಿತಿ ಅಧ್ಯಕ್ಷ ನಂದೀಶ್, ಹನುಮ ಸೇವಾ ಸಮಿತಿ ಕಾರ್ಯದರ್ಶಿ ರಾಜು, ಖಜಾಂಚಿ ಮುತ್ತಣ್ಣ, ವರ್ತಕರ ಸಂಘದ ಅಧ್ಯಕ್ಷ ವಿನಯ್ ಭಜರಂಗಿ, ಶ್ರೀಕಾಂತ್, ಸುಧಾಕರ್, ಜಯಂತ್, ಹೆಚ್.ಸಿ. ಮಂಜು, ಮಹದೇವಪ್ಪ ಪ್ರಸಾದ್, ಚಿತ್ರನಟ ರಾಘವ ಮಾದವನ್, ಗೌತಮ್, ಸುಧಾಕರ್, ಪ್ರಶಾಂತ್, ಆಟೋ ಪ್ರಶಾಂತ್, ವೆಂಕಟೇಶ್, ಪ್ರಮೋದ್, ಡೈರಿ ಶ್ರೀಕಾಂತ, ಮಹೇಶ, ಮಣಿ, ಸಿದ್ದರಾಜು, ಗುರುಸ್ವಾಮಿ, ಸುನಂದ ರಾಜ್, ಚಂದ್ರಮೌಳಿ, ಯೋಗೇಶ್, ಅಪ್ಪು ಇನ್ನೂ ಮುಂತಾದವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಅರಣ್ಯ ಇಲಾಖೆ ದಿನಗೂಲಿ ನೌಕರರ ಪ್ರತಿಭಟನೆ



ಹುಣಸೂರು, ಡಿ. 21– ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘದ ವತಿಯಿಂದ ನಗರದ ಅರಣ್ಯ ಇಲಾಖೆ ಎದುರು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಅರಣ್ಯ ಇಲಾಖೆ ದಿನಗೂಲಿ ನೌಕರರು ಪಟ್ಟಣದ ಅರಣ್ಯ ಇಲಾಖೆ ಎದುರು ಸಮಾವೇಶಗೊಂಡು ತಮಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಿ ಧಿಕ್ಕಾರ ಕೂಗುವ ಮೂಲಕ ತಮ್ಮ ಆಕ್ರೋಶವನ್ನು ಹೊರ ಹಾಕಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ನಟೇಶ್, ಸರಕಾರದ ಆದೇಶದ ವಿರುದ್ಧವಾಗಿ ಹೆಚ್ಚುವರಿ ಮಾಸಿಕ 1000+1000–2000 ನಿಲ್ಲಿಸಿರುವುದು, ಹೊರಗುತ್ತಿಗೆ ಹೆಸರಿನಲ್ಲಿ ವೇತನ ಪಾವತಿ, ಸಸ್ಯ ಕ್ಷೇತ್ರದ ಮಹಿಳಾ ನೌಕರರಿಗೆ ಕಡಿಮೆ ಮಜೂರಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಬೇಡಿಕೆ ಈಡೇರುವವರೆಗೂ ಅನಿರ್ದಿಷ್ಟಕಾಲ ಮುಷ್ಕರ ನಡೆಸಲಾಗುವುದು ಎಂದು ಎಚ್ಚರಿಸಿದರು.

ಬನ್ನೂರು ಸಮೀಪ ಮತ್ತೆ ಚಿರತೆ ಪ್ರತ್ಯಕ್ಷ

ತನ್ನ ಮೇಲೆರಗಿದ ಚಿರತೆಯನ್ನು ಕುಡುಗೋಲಿನಿಂದ ಹೊಡೆದು ಹಿಮ್ಮೆಟ್ಟಿಸಿದ ಕೂಲಿ ಕಾರ್ಮಿಕ

ಕೋಳಿ ಫಾರಂಗೆ ನುಗ್ಗಿ ಸಾಕುನಾಯಿ ಹೊತ್ತೊಯ್ದ ಚಿರತೆ

ಬನ್ನೂರು, ಡಿ.21– ತಿ.ನರಸೀಪುರ ಸುತ್ತ–ಮುತ್ತ ಕಾಣಿಸಿಕೊಂಡು ವಿದ್ಯಾರ್ಥಿಗಳನ್ನು ಬಲಿ ತೆಗೆದುಕೊಂಡಿದ್ದ ಚಿರತೆ ಇದೀಗ ಮತ್ತೆ ಕಾಣಿಸಿಕೊಂಡು ಆತಂಕ ಮೂಡಿಸಿದೆ.

ಪಟ್ಟಣದ ಸಮೀಪವಿರುವ ನುಗ್ಗಹಳ್ಳಿ ಕೊಪ್ಪಲಿನ ಲೋಕೇಶ್ ಅವರ ಮೇಲೆ ಚಿರತೆ ದಾಳಿ ಮಾಡಿರುವ ಘಟನೆ ಮಾಸುವ ಮುನ್ನವೇ ಯಾಚೇನಹಳ್ಳಿ ಹಾಗೂ ಗೊರವಿನಹಳ್ಳಿ ಗ್ರಾಮದಲ್ಲಿ ಚಿರತೆ ಮತ್ತೆ ಕಾಣಿಸಿಕೊಂಡಿದ್ದು, ಬುಧವಾರ ಮಧ್ಯಾಹ್ನ ಗೊರವನಹಳ್ಳಿ ಗ್ರಾಮದ ಕೂಲಿ ಕಾರ್ಮಿಕ ನಿಂಗೇಗೌಡರ(55) ಮೇಲೆರಗಿ ಗಾಯಗೊಳಿಸಿದೆ. ಇದರಿಂದ ಗ್ರಾಮಸ್ಥರು ಆತಂಕಕ್ಕೊಳಗಾಗಿದ್ದಾರೆ.

ಗೊರವನಹಳ್ಳಿ ಗ್ರಾಮದ ನಿಂಗೇಗೌಡರು ಕಬ್ಬಿನ ಗದ್ದೆಗೆ ತರಗನ್ನು ತರಲು ಹೋಗಿದ್ದ ಸಂದರ್ಭದಲ್ಲಿ ಹಿಂದಿನಿಂದ ದಾಳಿ ಮಾಡಿದೆ. ಈ ಸಂದರ್ಭದಲ್ಲಿ ಗಾಬರಿಗೊಂಡ ನಿಂಗೇಗೌಡ ಕಬ್ಬಿನ ತರಗನ್ನು ಕತ್ತರಿಸಲೆಂದು ತಂದಿದ್ದ ಕುಡುಗೋಲಿನಿಂದ ಚಿರತೆಗೆ ಬಡಿದು ತಪ್ಪಿಸಿಕೊಂಡು ಓಡಿದ್ದಾರೆ.



ಕುಡುಗೋಲು ದಾಳಿಯಿಂದ ಘಾಸಿಯಾದ ಚಿರತೆಯು ಓಡಿ ಹೋಯಿತು ಎನ್ನಲಾಗಿದೆ. ನಿಂಗೇಗೌಡರಿಗೆ ಕಾಲು, ಕೈ ಬೆರಳಿಗೆ ಗಾಯಗಳಾಗಿದ್ದು ಬನ್ನೂರಿನ ಸಾರ್ವಜನಿಕರ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ.

ಇದೇ ರೀತಿ ಯಾಚೇನಹಳ್ಳಿ ಗ್ರಾಮಕ್ಕೂ ಮಂಗಳವಾರ ರಾತ್ರಿ ದಾಳಿ ನಡೆಸಿರುವ ಚಿರತೆ ಚಿಕ್ಕಮರೀಗೌಡರಿಗೆ ಸೇರಿದ ಕೋಳಿಫಾರಂನಲ್ಲಿ ಸಾಕಿದ್ದ ನಾಯಿಯನ್ನು ಹೊತ್ತೊಯ್ದಿದೆ.

ಕಳೆದ ಒಂದು ತಿಂಗಳಿಂದ ಇಬ್ಬರು ವಿದ್ಯಾರ್ಥಿಗಳನ್ನು ಬಲಿ ಪಡೆದ ಚಿರತೆ ಸುತ್ತಮುತ್ತಲಿನ ಗ್ರಾಮದಲ್ಲಿ ನಿರಂತರವಾಗಿ ದಾಳಿ ನಡೆಸುತ್ತಿದ್ದು, ಅರಣ್ಯಾಧಿಕಾರಿಗಳು ಚಿರತೆ ಹಿಡಿಯಲು ಹರಸಾಹಸ ಪಡುತ್ತಿದ್ದಾರೆ.

ನಿಸ್ವಾರ್ಥ ಸಮಾಜಮುಖಿ ಕೆಲಸ ಕಾರ್ಯಗಳ ಮೂಲಕ ಸಂಘ–ಸಂಸ್ಥೆಗಳ ಉದ್ದೇಶ ಸಫಲ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಸಲಹೆ



ಹುಣಸೂರು, ಡಿ. 21– ನಿಸ್ವಾರ್ಥ ಸಮಾಜಮುಖಿ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಮೂಲಕ ಸಂಘ ಸಂಸ್ಥೆಗಳ ಸ್ಥಾಪನೆಯ ಸದುದ್ದೇಶ ಈಡೇರುವಂತೆ ನೋಡಿಕೊಳ್ಳಬೇಕು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ. ಹರೀಶ್‌ಗೌಡ ಕರೆ ನೀಡಿದರು.

ತಾಲೂಕಿನ ಕಾಳಬೂಚನಹಳ್ಳಿಯಲ್ಲಿ ಉದಯೋನ್ಮುಖ ಸೇವಾ ಟ್ರಸ್ಟ್ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ನಿಸ್ವಾರ್ಥ ಸಮಾಜಮುಖಿ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವುದರಿಂದ ಸಂಘ–ಸಂಸ್ಥೆಗಳು ಸಾರ್ವಜನಿಕರಿಗೆ ತಲುಪಲು ಸಾಧ್ಯವಾಗಲಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಹಲವು ಸಮಸ್ಯೆಗಳ ನಿವಾರಣೆಗೆ ಜನರು ಹೋರಾಟದ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದ್ದು, ಹತ್ತಾರು ವರ್ಷಗಳ ಸುದೀರ್ಘ ಹೋರಾಟದ ಫಲವಾಗಿ ಸರ್ಕಾರ ಹಲವು ಕಾರ್ಯಕ್ರಮಗಳನ್ನು ತರಲು ಸಹಕಾರಿಯಾಗುತ್ತದೆ ಎಂದರು. ಜನರು ತಮ್ಮ ಅವಶ್ಯಕತೆಗಳನ್ನು ಹೋರಾಟದ ಮೂಲಕ ಸರಕಾರದ ಗಮನ ಸೆಳೆಯುವ ಪ್ರಯತ್ನ ನಡೆಸಬೇಕು ಎಂದು ಹೇಳಿದರು.

ಕನಕ ಗುರು ಪೀಠ ಮೈಸೂರು ವಿಭಾಗ ಶ್ರೀಗಳಾದ ಶಿವಾನಂದಪುರಿ ಮಹಾಸ್ವಾಮಿಗಳು ಮಾತನಾಡಿ, 12ನೇ ಶತಮಾನದಲ್ಲಿ ತಮ್ಮ ವಚನದ ಸಂದೇಶಗಳ ಮೂಲಕ ಸಮಾಜ ಎಚ್ಚರಿಸಿದ ವಿಶ್ವ ಗುರು ಬಸವಣ್ಣನವರ ತತ್ವ ಸಂದೇಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಶಾಂತಿ ಹಾಗೂ ನೆಮ್ಮದಿ ಕಂಡುಕೊಳ್ಳಬಹುದಾಗಿದೆ ಎಂದು ಅಭಿಪ್ರಾಯಪಟ್ಟರು. ನಾಮ ಫಲಕ ಅನಾವರಣಗೊಳಿಸಲಾಯಿತು.

ಹುಡಾ ಅಧ್ಯಕ್ಷ ಗಣೇಶಕುಮಾರ್ ಸ್ವಾಮಿ, ಡಿ.ಎಂ.ಪ್ರಭಾಕರ್ ಹೆಗ್ಗಡೆ ಅಧ್ಯಕ್ಷತೆ ವಹಿಸಿದ್ದರು. ಗೌರವ ಅಧ್ಯಕ್ಷ ಮನೋಹರ ಅಚ್ಚಪ್ಪ, ಅಧ್ಯಕ್ಷ ಉಮೇಶ್, ಉಪಾಧ್ಯಕ್ಷ ಸುದರ್ಶನ್ ಅಶ್ವಥ್, ಕಾರ್ಯದರ್ಶಿ ಕೆ.ಕೆ. ಪ್ರಭಾಕರ್ ಹೆಗ್ಗಡೆ, ಖಜಾಂಚಿ ಡಿ.ಕುಮಾರ, ಸಂಚಾಲಕರು ದೇವರಾಜ್, ಶಿವಕುಮಾರ್ ಕುಮಾರ್ ಹಾಗೂ ಸದಸ್ಯರು, ಗ್ರಾಮಸ್ಥರು ಭಾಗವಹಿಸಿದ್ದರು.

ವೆಂಕಟೇಶ್ ನೇಮಕ



ನಂಜನಗೂಡು, ಡಿ.21– ಬಿಜೆಪಿ ಮೈಸೂರು ಜಿಲ್ಲಾ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯದರ್ಶಿಯಾಗಿ ಹೆಗ್ಗಡಹಳ್ಳಿ ವೆಂಕಟೇಶ್ ಅವರನ್ನು ನೇಮಕಾತಿಗೊಳಿಸಿ ಬಿಜೆಪಿ ಓಬಿಸಿ ಜಿಲ್ಲಾಧ್ಯಕ್ಷ ಜಿ.ಪರಶುರಾಮಪ್ಪ ಆದೇಶ ಹೊರಡಿಸಿದ್ದಾರೆ.

ಹನಗೋಡು ಬಳಿ ರೈತ ನೇಣಿಗೆ ಶರಣು



ಹನಗೋಡು, ಡಿ.21– ಹೋಬಳಿಯ ಹಿಂಡಗುಡ್ಲೂ ಗ್ರಾಮದ ಕೆಂಚೇಗೌಡರ ಮಗ ಚಾಮುಂಡಿಗೌಡರು ಬುಧವಾರ ಸಂಜೆ ತಮ್ಮ ಜಮೀನಿನಲ್ಲಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪುತ್ರ ಜಮೀನಿನ ಹತ್ತಿರ ಹಸುಗಳನ್ನು ಮೇಯಿಸುತ್ತಿದ್ದಾಗ ತಕ್ಷಣ ಮರದ ಕಡೆಗೆ ನೋಡಿ ಅಕ್ಕ ಪಕ್ಕದವರಿಗೆ ತಿಳಿಸಿ ನೇತಾಡುವ ಸ್ಥಿತಿಯಲ್ಲಿದ್ದ ಚಾಮುಂಡಿಗೌಡರ ದೇಹವನ್ನು ಕೆಳಗಿಳಿಸಿದ್ದಾರೆ. ಚಾಮುಂಡಿಗೌಡರು ಮನೆ ಕಟ್ಟಲು ಇಕೋಟಾಸ್ ಬ್ಯಾಂಕಿನಿಂದ ಮೂರು ಲಕ್ಷ ಹಾಗೂ ಹೈನುಗಾರಿಕೆಗೆ ಹನಗೂಡಿನ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಒಂದೂವರೆ ಲಕ್ಷ ಸಾಲ ಮಾಡಿದ್ದು, ಈ ವರ್ಷ ಬೆಳೆದ ಬೆಳೆಯು ಅತಿವೃಷ್ಟಿಯಿಂದ ನಷ್ಟ ಆಗಿ, ಸಾಲವನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಸಹೋದರ ರಾಜೇಗೌಡ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮೃತರ ಮನೆಗೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ದೊಡ್ಡ ಹೆಜ್ಜೂರು ಗ್ರಾಪಂ ಅಧ್ಯಕ್ಷ ಶುಭಾಷ್, ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷ ರವಿಕುಮಾರ್ (ಹನುಮ), ರಾಜೇಗೌಡ, ಕುಮಾರ್ ಮತ್ತಿತರರು ಭೇಟಿ ನೀಡಿ, ಸಾಂತ್ವನ ಹೇಳಿದರು

ಜನವರಿಯಲ್ಲಿ ಪಿರಿಯಾಪಟ್ಟಣಕ್ಕೆ ಸಿಎಂ ಭೇಟಿ

ಬೆಟ್ಟದಪುರ, ಡಿ.21– ಪಿರಿಯಾಪಟ್ಟಣ ತಾಲೂಕಿನಲ್ಲಿ ಸುಮಾರು 600 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಸಿಎಂ ಬಸವರಾಜು ಬೊಮ್ಮಾಯಿ, ಜನವರಿ ತಿಂಗಳಲ್ಲಿ ತಾಲೂಕಿಗೆ ಭೇಟಿ ನೀಡಲಿದ್ದಾರೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ತಾಲೂಕಿನ ಬೆಟ್ಟದಪುರ ಹೋಬಳಿ ಚಿಕ್ಕಮಳಲಿ ಮತ್ತು ಹಿರೇಮಳಲಿ ಗ್ರಾಮದಲ್ಲಿ 1.85 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು. ಗ್ರಾಮಾಂತರ ಪ್ರದೇಶದ ರೈತರ ಸಮಸ್ಯೆಗಳನ್ನು ಪರಿಹರಿಸಲು ನನಗೆ ಕೇವಲ ಒಂದು ವರ್ಷ ಮಾತ್ರ ಅವಕಾಶ ಸಿಕ್ಕಿತು. ಇನ್ನೂ ಮೂರೂವರೆ ವರ್ಷಗಳ ಕಾಲ ಕೊರೊನಾ ಮತ್ತು ಹೆಚ್ಚು ಮಳೆಯಿಂದಾಗಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸರ್ಕಾರದಿಂದ ಸರಿಯಾಗಿ ಅನುದಾನ ಬಿಡುಗಡೆಯಾಗಲಿಲ್ಲ ಎಂದರು. ಎಲ್ಲಾ ಸಚಿವರು ಮತ್ತು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಮಾಡಿದ ಹಿನ್ನೆಲೆಯಲ್ಲಿ ತಾಲೂಕಿಗೆ ಸುಮಾರು 600 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗುತ್ತಿದ್ದು, ತಾಲೂಕಿನ ಬೆಟ್ಟದಪುರದಲ್ಲಿ ಬೃಹತ್ ಸಮಾರಂಭದಲ್ಲಿ ಅವರನ್ನು ಅಭಿನಂದಿಸಲಾಗುವುದು ಎಂದರು.

ಅಭಿವೃದ್ಧಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ನಿರ್ಧಾರ



ತಿ.ನರಸೀಪುರ, ಡಿ.21– ಪಟ್ಟಣ ಪುರಸಭೆಯಲ್ಲಿ ಟೆಂಡರ್ ಆಗಿ ಬಾಕಿ ಉಳಿದಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸರ್ವ ಸದಸ್ಯರು ಒಮ್ಮತದ ಒಪ್ಪಿಗೆ ಸೂಚಿಸಿದರು.

ಪುರಸಭೆ ಸಭಾಂಗಣದಲ್ಲಿ ಬುಧವಾರ ಪ್ರಭಾರ ಅಧ್ಯಕ್ಷೆ ನಾಗರತ್ನ ಮಾದೇಶ್ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ತುರ್ತು ಸಭೆಯಲ್ಲಿ ಪುರಸಭೆಯಲ್ಲಿ ಟೆಂಡರ್ ಆಗಿ ಬಾಕಿಯಿರುವ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ 87.86 ಲಕ್ಷ 2015–16, 2019–20 ಮತ್ತು 2022–23ನೇ ಸಾಲಿನ ಹೂಕಾಸು ಯೋಜನೆಯಡಿ 1.13 ಕೋಟಿ, ಎಸ್‌ಎಫ್‌ಸಿಯಡಿ 18 ಲಕ್ಷ ಮತ್ತು ಮುಖ್ಯಮಂತ್ರಿಗಳ ವಿಶೇಷ ಘಟಕ ಯೋಜನೆಯಡಿ 3 ಕೋಟಿ ವೆಚ್ಚದಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿದೀಪ ಮತ್ತು ಇನ್ನಿತರೆ ಅಭಿವೃದ್ಧಿ ನಿರ್ಮಾಣ ಕಾಮಗಾರಿಗಳಿಗೆ ಸಭೆ ಸರ್ವಾನುಮತದ ಅನುಮೋದನೆ ನೀಡಿತು.

24/7 ಕುಡಿಯುವ ನೀರು ಯೋಜನೆ: 23ನೇ ವಾರ್ಡ್‌ನ ಎಸ್.ಕೆ.ಕಿರಣ್ ಗಮನ ಸೆಳೆದು, ಗೃಹಬಳಕೆ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ನೀಡುವ ನೀರಿನ ಸಂಪರ್ಕಕ್ಕೆ ಹೆಚ್ಚುವರಿ ಶುಲ್ಕ ವಸೂಲಿ ಮಾಡಲಾಗುತ್ತಿರುವ ಬಗ್ಗೆ ದೂರುಗಳು ದಾಖಲಾಗುತ್ತಿವೆ. ಹೆಚ್ಚುವರಿ ಶುಲ್ಕ ಪಡೆದವರ ವಿರುದ್ಧ ಮುಖ್ಯಾಧಿಕಾರಿಗಳು ಸೂಕ್ತ ಕ್ರಮಕ್ಕೆ ಗೊಳ್ಳಲು ಒತ್ತಾಯಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಇಂಜಿನಿಯರ್ ಸಿದ್ದಯ್ಯ ಗೃಹ ಬಳಕೆ ಉದ್ದೇಶಕ್ಕೆ 4 ಸಾವಿರ ಹಾಗೂ ವಾಣಿಜ್ಯ ಬಳಕೆಗೆ 9 ಸಾವಿರ ರೂ.ಗಳ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ಯಾರಿಂದಲೂ ಹೆಚ್ಚುವರಿ ಶುಲ್ಕ ಪಡೆದಿಲ್ಲ ಎಂದರು.

ಒಂದೇ ಲೈಸೆನ್ಸ್ ಹಲವಾರು ವಾಣಿಜ್ಯ ವಹಿವಾಟು!: ಸದಸ್ಯ, ಚಿತ್ರನಟ ಅರ್ಜುನ್ ತಮ್ಮ ವಾರ್ಡ್‌ನಲ್ಲಿ ಒಂದು ಲೈಸೆನ್ಸ್ ಪಡೆದು ಹಲವಾರು ಕಟ್ಟಡಗಳನ್ನು ನಿರ್ಮಿಸುತ್ತಿರುವ ಬಗ್ಗೆ ಸಭೆಯ ಗಮನ ಸೆಳೆದರು. ಕೆಲ ಪ್ರಭಾವಿ ವ್ಯಕ್ತಿಗಳು ವಾಣಿಜ್ಯ ಕಟ್ಟಡ ನಿರ್ಮಿಸಲು ಒಂದು ಲೈಸೆನ್ಸ್ ಪಡೆದು ಅನಧಿಕೃತವಾಗಿ ಬಾರ್, ಪೆಟ್ರೋಲ್ ಬಂಕ್, ಡಾಬಾ, ಹೋಟೆಲ್‌ಗಳನ್ನು ನಿರ್ಮಿಸುತ್ತಿದ್ದರೂ ಅದನ್ನು ಪ್ರಶ್ನಿಸಲು ಪುರಸಭೆ ಅಧಿಕಾರಿಗಳು ಮುಂದಾಗಿಲ್ಲ.

ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಲೈಸೆನ್ಸ್ ನೀಡದ್ದರಿಂದ ಮುಂದೆ ಬೇರೆ ಬೇರೆ ರೀತಿಯ ಚಟುವಟಿಕೆಗಳು ನಡೆಯಲು ಪರೋಕ್ಷ ಸಹಕಾರ ನೀಡುತ್ತಿದ್ದಾರೆ. ಲೈಸೆನ್ಸ್ ನೀಡುವ ಮೊದಲು ಸ್ಥಳ ಪರಿಶೀಲನೆ ಮಾಡದೇ ಕುಳಿತಲ್ಲಿಯೇ ಲೈಸೆನ್ಸ್ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಮುಂದಾದರು ಅಧಿಕಾರಿಗಳು ಯಾವುದೇ ಉದ್ದೇಶಕ್ಕೆ ಲೈಸೆನ್ಸ್ ನೀಡಬೇಕಾದರೆ ಸಂಬಂಧಪಟ್ಟ ವಾರ್ಡ್‌ನ ಸದಸ್ಯರ ಗಮನಕ್ಕೆ ತಂದು ಸ್ಥಳ ಪರಿಶೀಲನೆ ಮಾಡುವ ಪರಿಪಾಠ ಬೆಳೆಸಿಕೊಳ್ಳುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದರು.

4ನೇ ವಾರ್ಡ್‌ನ ಮಂಜುನಾಥ್, ಪಟ್ಟಣದಲ್ಲಿ ಬೀದಿ ದೀಪಗಳು ಕೆಟ್ಟು ಹೋಗಿದ್ದು, ಶೀಘ್ರ ಬೀದಿ ದೀಪಗಳನ್ನು ದುರಸ್ತಿ ಪಡಿಸಬೇಕು. ಖಾತೆ ಸಂಖ್ಯೆ 131ರ ಚಕ್ರ ಇನಾಂ ಜಮೀನು ತಹಶೀಲ್ದಾರ್ ಕಚೇರಿಯ ವ್ಯಾಪ್ತಿಗೆ ಒಳಪಟ್ಟಿದ್ದರೂ ಪುರಸಭೆಯಿಂದ ಖಾತೆ ಮಾಡಿಕೊಡಲಾಗಿದೆ. ಜಮೀನು ಸರ್ವೆ ಸಹ ಆಗಿಲ್ಲ. ಹಾಗಾಗಿ ಸಮಸ್ಯೆ ಎದುರಾಗಿದೆ. ಖಾತೆ ಪರಿಶೀಲಿಸಿ ಜಿಲ್ಲಾಧಿಕಾರಿಗೆ ದೂರು ನೀಡಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದರು.

ರಸ್ತೆ ಗುಂಡಿಗಳನ್ನು ಮುಚ್ಚಿ: ನಾಮ ನಿರ್ದೇಶಿತ ಸದಸ್ಯ ಎನ್.ಲೋಕೇಶ್, ವಿದ್ಯೋದಯ ಕಾಲೇಜಿನಿಂದ ತಿರುಮಕೂಡಲು ವೃತ್ತದವರೆಗೂ ರಸ್ತೆ ಗುಂಡಿ ಬಿದ್ದಿರುವ ಬಗ್ಗೆ ಗಮನ ಸೆಳೆದು ಶೀಘ್ರವಾಗಿ ದುರಸ್ತಿ ಪಡಿಸಲು ಒತ್ತಾಯಿಸಿದರು.

ವಿದ್ಯುತ್ ಬಿಲ್ಲನ್ನೇ ಕಟ್ಟಿಲ್ಲ!: ತಾಲೂಕು ಕಚೇರಿ ರಸ್ತೆ ತೀವ್ರ ಹದಗೆಟ್ಟಿದ್ದು ಬರೀ ಫೋಟೋ ಸೆಷನ್ ಗಷ್ಟೇ ಮೀಸಲಾದಂತೆ ಕಾಣುತ್ತಿದೆ. ಭಾಗಶಃ ಕಾಮಗಾರಿ ಮಾಡಿ 5 ರಿಂದ 10 ಮೀಟರ್ ರಸ್ತೆ ದುರಸ್ತಿ ಮಾಡದ್ದರಿಂದ ಅಪಘಾತಗಳು ಸಂಭವಿಸುತ್ತಿವೆ ಎಂದು ಸದಸ್ಯ ಮೆಡಿಕಲ್ ಪ್ರಕಾಶ್ ಕಿಡಿಕಾರಿದರು. ಅಲ್ಲದೇ ಪಟ್ಟಣದ ಎಲ್ಲ ಕಡೆ ಬೀದಿದೀಪ ಅಳವಡಿಸಲಾಗಿದೆಯಾದರೂ ಯಾವುದೂ ಆನ್ ಆಗುತ್ತಿಲ್ಲ. ಪುರಸಭೆ ವಿದ್ಯುತ್ ಬಿಲ್ ಪಾವತಿಸದ್ದರಿಂದ ಪಟ್ಟಣ ಕಗ್ಗತ್ತಲಲ್ಲಿ ಮುಳುಗುವಂತಾಗಿದೆ ಎಂದು ಸಭೆಯ ಗಮನ ಸೆಳೆದರು. ಕೂಡಲೇ ಬಿಲ್ ಪಾವತಿಮಾಡಲಾಗುವುದು ಎಂದು ಮುಖ್ಯಾಧಿಕಾರಿ ಬಸವರಾಜು ತಿಳಿಸಿದರು.

ಕಚ್ಚಾ ಮನೆ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಮಾಡಲಾಗಿದೆ. ಆದರೆ ಅದರಲ್ಲಿ ಕೆಲವೊಂದು ಲೋಪಗಳಾಗಿರುವುದರಿಂದ ಪರಿಶೀಲಿಸಿ ಪಟ್ಟಿ ಅಂತಿಮ ಪಡಿಸಬೇಕು ಹಾಗು ಸದಸ್ಯರು ನೀಡುವ ಪಟ್ಟಿಯನ್ನು ಪರಿಗಣಿಸಿ ನಂತರ ಅಂತಿಮಗೊಳಿಸಬೇಕೆಂದು ಸದಸ್ಯರು ತಿಳಿಸಿದರು.

ಸಭೆಯಲ್ಲಿ ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸಯ್ಯದ್, ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್, ಪ್ರೇಮ ಮರಯ್ಯ, ತುಂಬಲ ಪ್ರಕಾಶ್, ಬೇಬಿ ಹೇಮಂತ್, ಮಹದೇವಮ್ಮ, ಆರ್.ನಾಗರಾಜ್, ರೂಪ ಪರಮೇಶ್, ಮಾದೇವಿ, ಸಿಸ್ಟಮ್ ಸಿದ್ದು, ಸೋಮು, ತೇಜಸ್ವಿನಿ, ರಾಜೇಶ್ವರಿ, ನಾಮನಿರ್ದೇಶಿತ ಸದಸ್ಯರಾದ ಲೋಕೇಶ್, ನಂಜುಂಡಸ್ವಾಮಿ, ಗಣೇಶ್, ಚಿಕ್ಕ ಮಹದೇವ, ಸರ್ವಮಂಗಳ, ಮುಖ್ಯಾಧಿಕಾರಿ ಎಚ್.ಆರ್.ಬಸವರಾಜು, ಆರೋಗ್ಯಾಧಿಕಾರಿ ಲೋಕೇಶ್ವರಿ, ಕಾರ್ಯನಿರ್ವಾಹಕ ಅಭಿಯಂತರ ನಿಂಗಯ್ಯ, ಜೆಇ ಸಿದ್ದಯ್ಯ, ಸಮನ್ವಯಾಧಿಕಾರಿ ಮಹದೇವ ಇತರರು ಹಾಜರಿದ್ದರು.



ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಶೂ ಮತ್ತು ಸಾಕ್ಸ್‌ಗಳನ್ನು ವಿತರಿಸಲಾಯಿತು. ಮುಖ್ಯ ಶಿಕ್ಷಕ ಮಹದೇವಯ್ಯ , ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಸದಸ್ಯರಾದ ರಾಜೇಶ್, ಚಂದ್ರು , ಜಯರಾಂ, ಮಂಜುಳಾ, ಕಿರಣ್, ಶಿಕ್ಷಕರಾದ ಶಾರದಮ್ಮ , ಯಶ್ವಂತ್, ಶಿವರಾಜ್,ಪೂರ್ಣಿಮಾ, ಭಾಗ್ಯ ,ಸುಜಾತ ಹಾಜರಿದ್ದರು.

ನಿಧನ

ಸಭೀಮಾ



ಹುಣಸೂರು, ಡಿ.21– ಹುಣಸೂರು ತಾಲೂಕಿನ ಪಕ್ಷಿರಾಜಪುರ ಗ್ರಾಮದ ವಾಸಿ ಹಾಗೂ ತಾಲೂಕು ಬಿಜೆಪಿ ಮಹಿಳಾ ಗ್ರಾಮಾಂತರ ಅಧ್ಯಕ್ಷೆ ನೀಮಾ ಶ್ರೀನಿವಾಸ್ ಅವರ ತಾಯಿ ಹಾಗೂ ಮಾಜಿ ಗ್ರಾಪಂ ಅಧ್ಯಕ್ಷ ನಂಜುಂಡಪ್ಪ ಅವರ ಪತ್ನಿ ಶ್ರೀಮತಿ ಸಭೀಮಾ(67) ಬುಧವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಡಿ.22) ಮಧ್ಯಾಹ್ನ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸತ್ಯನಾರಾಯಣ್ ಕರಾಡೆ



ಹುಣಸೂರು, ಡಿ.21– ತಾಲೂಕಿನ ರತ್ನಪುರಿ ಕಾಲೋನಿಯ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ನಗರದ ಎನ್‌ಇಎಸ್ ಕಾಲೋನಿಯ ನಿವಾಸಿ ಸತ್ಯನಾರಾಯಣ್ ಕರಾಡೆ(57) ಬುಧವಾರ ಮಧ್ಯಾಹ್ನ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಅಪಾರ ಬಂಧು–ಬಳಗ ಮತ್ತು ಸ್ನೇಹಿತರನ್ನೂ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಗುರುವಾರ) ರತ್ನಪುರಿ ಕಾಲೋನಿಯ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಕೆ.ವಿ.ಶಿವಕುಮಾರ್



ನಂಜನಗೂಡು, ಡಿ.21– ಶಂಕರ್ ಸೌಂಡ್ಸ್ ಸಿಸ್ಟಮ್ ಮಾಲೀಕರಾದ ಕೆ.ವಿ.ಶಿವಕುಮಾರ್(63) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಗಂಡು ಮಕ್ಕಳು, ಬಂಧು–ಬಳಗ, ಅಪಾರ ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಕಪಿಲಾ ನದಿ ತಟದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

ಶಾಸಕ ಬಿ.ಹರ್ಷವರ್ಧನ್, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಂಸದ ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಶ್ರೀ ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಎನ್.ಸಿ.ಬಸವಣ್ಣ, ತಾಲೂಕು ವಿದ್ಯುತ್ ದೀಪಾಲಂಕಾರ ಹಾಗೂ ಧ್ವನಿವರ್ಧಕ ಶಾಮಿಯಾನ ಮಾಲೀಕರ ಸಂಘದ ಪದಾಧಿಕಾರಿಗಳು, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಅವರುಗಳು ಸಂತಾಪ ಸೂಚಿಸಿದ್ದಾರೆ.


ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾದ
ಶ್ರೀ ಯಶಸ್ವಿ ಎಸ್ ಸೋಮಶೇಖರ್ ರವರಿಗೆ
ಅಭಿನಂದನೆಗಳು
ಬಿ.ವಿ.ಮಂಜುನಾಥ್
ವಿರೋಧ ಪಕ್ಷದ ಮಾಜಿ ನಾಯಕರು
ಮೈಸೂರು ಮಹಾನಗರ ಪಾಲಿಕೆ ಸದಸ್ಯರು
ವಾರ್ಡ್ ನಂ.51 ಅಗ್ರಹಾರ
ಹನುಮಂತ.ಕೆ
ತಾ.ಪಂ. ಮಾಜಿ ಸದಸ್ಯರು
ಶ್ರೀರಾಂಪುರ ಕ್ಷೇತ್ರ
ಶ್ರೀರಾಂಪುರ


ಶ್ರೀ ತಾಯಿ ಚಾಮುಂಡೇಶ್ವರಿ ಆರೋಗ್ಯ, ಐಶ್ವರ್ಯ ಆಯಸ್ಸು ನೀಡಲೆಂದು ಹಾರೈಸುವ
ಶ್ರೀಯುತ ಶಿವರಾಜ್ ಅವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಶ್ರೀ ಕೆ.ಜೆ. ಮಾದೇಶ್ (ವಕೀಲರು)
ಸಿ, ಗ್ರಾ.ಪಂ. ಸದಸ್ಯರು ಹಾಗೂ
PACS ನಿರ್ದೇಶಕರು
ಶ್ರೀ ಹೆಚ್. ಪ್ರಕಾಶ್
TAPCMS ನಿರ್ದೇಶಕರು
ಶುಭ ಕೋರುವವರು : ಶಿವರಾಜ್ ಫ್ರೆಂಡ್ಸ್, ಕಾಮನಕೆರೆ ಹುಂಡಿ ಗ್ರಾಮಸ್ಥರು